ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್: ಕಠಿಣ ನಿಯಮಗಳ ಜಾರಿಗೆ ಜನಪ್ರತಿನಿಧಿಗಳ ಒತ್ತಾಯ

ಲಾಕ್‌ಡೌನ್‌ಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಕಠಿಣ ನಿಯಮಾವಳಿಗಳನ್ನು ಜಾರಿ ಮಾಡಬೇಕು. ಆದರೆ ಯಾವುದೇ ಕಾರಣಕ್ಕೂ ಲಾಕ್‌ಡೌನ್ ಮಾಡುವುದು ಬೇಡ ಎಂಬ ಅಭಿಪ್ರಾಯ ಬೆಂಗಳೂರು ಶಾಸಕರು ಮತ್ತು ಸಂಸದರ ಸಭೆಯಲ್ಲಿ ವ್ಯಕ್ತವಾಯಿತು.

ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಯಾವುದೇ ಕಾರಣಕ್ಕೂ ಲಾಕ್‌ಡೌನ್ ಬೇಡ, ಇದರಿಂದ ಬಡವರು, ಕೂಲಿ ಕಾರ್ಮಿಕರ ಜೀವನ ಸಂಕಷ್ಟಕ್ಕೆ ಸಿಲುಕುತ್ತದೆ ಎಂದು ಹೇಳಿದರು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ಇವತ್ತಿನ ಸಭೆಯಲ್ಲಿ ಎಲ್ಲ ಶಾಸಕರು ಮತ್ತು ಸಂಸದರಿಂದಲೂ ಸಲಹೆ ಪಡೆದಿದ್ದೇವೆ. ವಿರೋಧಪಕ್ಷಗಳ ಶಾಸಕರು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಲಾಕ್‌ಡೌನ್ ವಿಧಿಸುವುದು ಬೇಡ ಎಂದು ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸಿದರು' ಎಂದರು.

ಮಾಲ್, ಚಿತ್ರಮಂದಿರ, ಕಲ್ಯಾಣ ಮಂಟಪ, ಬಾರ್, ಜಿಮ್, ಸಭೆ ಸಮಾರಂಭ ಇತ್ಯಾದಿಗಳ ಮೇಲೆ ಇನ್ನಷ್ಟು ಕಠಿಣ ನಿರ್ಬಂಧ ವಿಧಿಸಲು ಸಲಹೆ ವ್ಯಕ್ತವಾಯಿತು.

ಸಭೆಯಲ್ಲಿ ಪ್ರಸ್ತಾಪವಾದ ಪ್ರಮುಖ ಅಂಶಗಳು:

- ವೈದ್ಯಕೀಯ ಆಮ್ಲಜನಕದ (ಆಕ್ಸಿಜನ್) ಅಗತ್ಯ ಇರುವವರನ್ನು ಮಾತ್ರ ಆಸ್ಪತ್ರೆಗೆ ಸೇರಿಸಲು ವ್ಯವಸ್ಥೆ. ಕೋವಿಡ್ ಸೋಂಕಿತರನ್ನು ಮೊದಲಿಗೆ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಿಸಲಾಗುವುದು. ಅಲ್ಲೇ ಆರೈಕೆ ನೀಡಲಾಗುವುದು. ಉಸಿರಾಟದ ಸಮಸ್ಯೆ ಬಂದರೆ ಮಾತ್ರ ಆಸ್ಪತ್ರೆಗೆ ಸೇರಿಸಲಾಗುವುದು.
- ಸರ್ಕಾರಿ ಆಸ್ಪತ್ರೆಗಳು ಮತ್ತು ಖಾಸಗಿ ದೊಡ್ಡ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಇಲ್ಲ. ಸಿಲಿಂಡರ್ ಅವಲಂಬಿಸಿರುವ ಸಣ್ಣ ಆಸ್ಪತ್ರೆಗಳಲ್ಲಿ ಕೊರತೆ ಇದೆ. ಇನ್ನು ಮುಂದೆ ಪ್ರತಿದಿನ ಮೂರು ಹೊತ್ತು ಸಿಲಿಂಡರ್ ಪೂರೈಕೆ ಮಾಡಲಾಗುವುದು. ಈಗ ಒಂದು ಬಾರಿ ಮಾತ್ರ ಪೂರೈಕೆ ಮಾಡಲಾಗುತ್ತಿದೆ.
- ರೆಮ್‌ಡಿಸಿವಿರ್ ಇಂಜೆಕ್ಷನ್‌ಗಳ ಕೊರತೆ ಇಲ್ಲ. 20 ಸಾವಿರ ದಾಸ್ತಾನು ಇದೆ. ಇದರ ಅವಶ್ಯಕತೆ ಇಲ್ಲದವರೂ ಖರೀದಿಸಿ ಇಟ್ಟುಕೊಳ್ಳುತ್ತಿರುವುದರಿಂದ ಸಮಸ್ಯೆ ಆಗಿದೆ. ಸರ್ಕಾರದ ಆಸ್ಪತ್ರೆಗಳಲ್ಲಿ ರೆಮ್‌ಡಿಸಿವಿರ್ ದಾಸ್ತಾನು ಇದೆ. ಖಾಸಗಿ ಆಸ್ಪತ್ರೆಗಳಲ್ಲಿ ಕೊರತೆ ಇದೆ. ಕೆಲವು ಖಾಸಗಿ ಆಸ್ಪತ್ರೆಗಳು ಅಕ್ರಮವಾಗಿ ಮಾರಾಟ ಮಾಡಿದ್ದರಿಂದ ಸಮಸ್ಯೆ ಆಗಿದೆ. ಈಗ ಕಟ್ಟುನಿಟ್ಟಿನ ನಿಗಾ ಇಟ್ಟು ಪೂರೈಕೆ ಮಾಡಲಾಗುವುದು.

ಸಭೆಯಲ್ಲಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಕಂದಾಯ ಸಚಿವ ಆರ್.ಅಶೋಕ ಮತ್ತು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮುಂತಾದವರು ಇದ್ದರು

ಬಯಲು ಪ್ರದೇಶದಲ್ಲಿ ಶವ ದಹನಕ್ಕೆ ವ್ಯವಸ್ಥೆ

ಸಾವಿನ ಪ್ರಮಾಣ ಹೆಚ್ಚಾದರೆ ಬಯಲು ಪ್ರದೇಶದಲ್ಲಿ ಕಟ್ಟಿಗೆಗಳ ಮೂಲಕ ಶವಗಳ ದಹನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಸಚಿವ ಆರ್.ಅಶೋಕ ಹೇಳಿದರು.

ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ಏಕಕಾಲಕ್ಕೆ ಆಸ್ಪತ್ರೆಗಳು ಬಿಡುಗಡೆ ಮಾಡುತ್ತಿರುವುದರಿಂದ ವಿದ್ಯುತ್ ಚಿತಾಗಾರಗಳಲ್ಲಿ ಒತ್ತಡ ಉಂಟಾಗಿದೆ. ಏಕ ಕಾಲಕ್ಕೆ ಬಿಡುಗಡೆ ಮಾಡುವುದಕ್ಕೆ ಬದಲು, ಬೆಳಗ್ಗಿನಿಂದ ಶವಗಳನ್ನು ಅಂತ್ಯ ಸಂಸ್ಕಾರಕ್ಕೆ ಬಿಡುಗಡೆ ಮಾಡಲು ಆಸ್ಪತ್ರೆಗಳಿಗೆ ಸೂಚನೆ ನೀಡಲಾಗುವುದು ಎಂದು ತಿಳಿಸಿದರು.

> **ಎರಡನೇ ಅಲೆ ವೇಗವಾಗಿ ಹರಡುತ್ತಿದ್ದರೂ 2–3 ತಿಂಗಳಿಂದ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲಿಲ್ಲ. ಅನಾಹುತ ಆದ ಮೇಲೆ ಸಭೆ ಕರೆದಿದ್ದಾರೆ**
> **ಕೃಷ್ಣ ಭೈರೇಗೌಡ,** ಕಾಂಗ್ರೆಸ್ ಶಾಸಕ

> **ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಕಮ್ಯುನಿಸ್ಟ್ ಎಂದು ಕೂತರೆ ಆಗುವುದಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಕೋವಿಡ್ ನಿಭಾಯಿಸಬೇಕಾಗಿದೆ**
> **ಆರ್.ಅಶೋಕ,** ಕಂದಾಯ ಸಚಿವ

3ನೇ ಪುಟ ನೋಡಿ

ನಗರದಲ್ಲಿ ಹೆಚ್ಚುತ್ತಿರುವ ಸೋಂಕು • ಉತ್ಸವ ರದ್ದುಪಡಿಸಿ ಜಿಲ್ಲಾಧಿಕಾರಿ ಆದೇಶ

ಈ ಬಾರಿ ಬೆಂಗಳೂರು ಕರಗ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ತೀವ್ರ ಗತಿಯಲ್ಲಿ ಹೆಚ್ಚುತ್ತಿರುವುದರಿಂದ ಐತಿಹಾಸಿಕ ಬೆಂಗಳೂರು 'ಕರಗ ಶಕ್ತ್ಯೋತ್ಸವ'ವನ್ನು ರದ್ದುಪಡಿಸಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಆದೇಶ ಹೊರಡಿಸಿದ್ದಾರೆ.

'ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ವ್ಯಾಪಕವಾಗಿ ಹರಡುತ್ತಿರುವುದನ್ನು ನಿಯಂತ್ರಿಸಲು ಸರ್ಕಾರದ ಆದೇಶದ ಅನ್ವಯ ಧಾರ್ಮಿಕ ಆಚರಣೆಗಳನ್ನು ನಿಷೇಧಿಸಲಾಗಿದ್ದು, ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ'.

'ತಿಗಳರ ಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷವೂ ನಡೆಯುವ ಬೆಂಗಳೂರಿನ ಕರಗವೆಂದೇ ಖ್ಯಾತಿ ಪಡೆದಿರುವ 'ದ್ರೌಪದಿ ದೇವಿಯ ಕರಗ ಶಕ್ತ್ಯೋತ್ಸವ'ವನ್ನು ಈ ಬಾರಿ ರದ್ದು ಪಡಿಸಲಾಗಿದೆ. ಹಾಗಾಗಿ, ಕರಗ ಆಚರಣೆಗೆ ಅವಕಾಶ ಇರುವುದಿಲ್ಲ. ಭಕ್ತಾದಿಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕು' ಎಂದು ಆದೇಶದಲ್ಲಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಕೋವಿಡ್ ಸೋಂಕು ಹರಡುವಿಕೆ ನಿಯಂತ್ರಿಸಲು ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ ಕಳೆದ ವರ್ಷ ಕರಗವನ್ನು ಸಾಂಕೇತಿಕವಾಗಿ ಆಚರಿಸಲಾಗಿತ್ತು. ಜನಜಂಗುಳಿ ಸೇರಿಸಲು ಅವಕಾಶ ಕಲ್ಪಿಸಿರಲಿಲ್ಲ. ಈ ಬಾರಿ ಉತ್ಸವ ಆಚರಣೆ ಮಾಡುವ ಬಗ್ಗೆ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಮುಖರ ಜೊತೆಗೆ ಬಿಬಿಎಂಪಿ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಇತ್ತೀಚೆಗೆ ಸಭೆ ನಡೆಸಿದ್ದರು. ನಿರ್ಬಂಧಿತ ವಾತಾವರಣದಲ್ಲಿ ಇದೇ 19ರಿಂದ 27ರವರೆಗೆ ಕರಗ ಮಹೋತ್ಸವ ಆಚರಿಸಲು ಜಿಲ್ಲಾಡಳಿತ ನಿರ್ಧರಿಸಿತ್ತು. ನಗರದಲ್ಲಿ ಇತ್ತೀಚೆಗೆ ನಿತ್ಯ 10 ಸಾವಿರಕ್ಕೂ ಅಧಿಕ ಮಂದಿಯಲ್ಲಿ ಕೋವಿಡ್ ಸೋಂಕು ಕಾಣಿಸಿಕೊಳ್ಳುತ್ತಿರುವುದರಿಂದ ಈ ನಿರ್ಧಾರದಿಂದಲೂ ಜಿಲ್ಲಾಡಳಿತ ಹಿಂದಕ್ಕೆ ಸರಿದಿದೆ.

100ಕ್ಕೂ ಹೆಚ್ಚು ಮಂದಿಗೆ ಸೋಂಕು

ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನ ಗುಂಡು ವೆಂಕೋಬ ರಾವ್ ಗಲ್ಲಿಯ ಮೆಹ್ತಾ ಟವರ್ ಶೇರ್‌ಖಾನ್ ಕಟ್ಟಡದ (ಸಂಖ್ಯೆ 969) ನಿವಾಸಿಯೊಬ್ಬರಿಗೆ ಕೋವಿಡ್ ಸೋಂಕು ಇರುವುದು ಕೆಲದಿನಗಳ ಹಿಂದೆ ಪತ್ತೆಯಾಗಿತ್ತು. ಆ ಕಟ್ಟಡದಲ್ಲಿ ವಾಸವಾಗಿದ್ದ 120 ಮಂದಿಯನ್ನು ಹಾಗೂ ಸೋಂಕಿತ ವ್ಯಕ್ತಿ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿದವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆಗ ಒಟ್ಟು 115 ಮಂದಿಗೆ ಸೋಂಕು ದೃಢಪಟ್ಟಿತ್ತು. ಹಾಗಾಗಿ ಅನಿವಾರ್ಯವಾಗಿ ಈ ಬಾರಿಯ ಕರಗ ಶಕ್ತ್ಯೋತ್ಸವವನ್ನು ರದ್ದುಗೊಳಿಸುವ ತೀರ್ಮಾನಕ್ಕೆ ಜಿಲ್ಲಾಡಳಿತ ಬಂದಿದೆ.

ಆಸ್ಪತ್ರೆಗಳಿಗೆ ಹೆಚ್ಚಿನ ಆಮ್ಲಜನಕ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆಗಳಿಗೆ ಆಮ್ಲಜನಕ ಪೂರೈಸುವುದನ್ನು ಕಡಿಮೆ ಮಾಡಿ ಆಸ್ಪತ್ರೆಗಳಿಗೆ ಹೆಚ್ಚಿನ ಆಮ್ಲಜನಕ ಪೂರೈಕೆ ಮಾಡಬೇಕು ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕೋವಿಡ್ ರೋಗಿಗಳಿಗೆ ಆಮ್ಲಜನಕ ಪೂರೈಕೆ ಮತ್ತು ಲಭ್ಯತೆ ಕುರಿತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಜತೆ ವಿಧಾನಸೌಧದಲ್ಲಿ ಸಭೆ ನಡೆಸಿದ ಶೆಟ್ಟರ್, ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕದ ಉತ್ಪಾದನೆ ಆಗುತ್ತಿದೆ. ಬೆಂಗಳೂರು ನಗರದಲ್ಲಿ ಆಮ್ಲಜನಕದ ಕೊರತೆ ನೀಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯಕ್ಕೆ ಅಗತ್ಯವಿರುವಷ್ಟು ಆಮ್ಲಜನಕ ಉತ್ಪಾದನೆ ಆಗುತ್ತಿದೆ. ಆದರೆ ಸಿಲಿಂಡರ್‌ಗಳ ಕೊರತೆ ಇದ್ದು, ಅದನ್ನು ನಿವಾರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಬೆಂಗಳೂರನ್ನು ತಲುಪುವ ಆಮ್ಲಜನಕವನ್ನು ಸರಿಯಾದ ರೀತಿಯಲ್ಲಿ ಆಸ್ಪತ್ರೆಗಳಿಗೆ ತಲುಪಿಸಲು ಸೂಕ್ತ ವ್ಯವಸ್ಥೆ ರೂಪಿಸುವ ಅಗತ್ಯವಿದೆ ಎಂದು ಹೇಳಿದರು.

ಆಮ್ಲಜನಕ ಉತ್ಪಾದಕರೊಂದಿಗೆ ಸಮಾಲೋಚನೆ ನಡೆಸಿ. ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆಯಲಾಯಿತು. ಅವುಗಳಿಗೆ ಪರಿಹಾರ ಸೂಚಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದೂ ಶೆಟ್ಟರ್ ಹೇಳಿದರು.

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ಆಮ್ಲಜನಕವನ್ನು ಅಕ್ಕಪಕ್ಕದ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಅದನ್ನು ಇಲ್ಲಿಯೇ ಬಳಸಬೇಕು. ಇದಕ್ಕಾಗಿ ಆಮ್ಲಜನಕ ಉತ್ಪಾದಿಸುವ ಉದ್ಯಮಗಳಿಗೆ ಅಗತ್ಯ ಸೂಚನೆ ನೀಡಬೇಕು. ರಾಜ್ಯಕ್ಕೆ ಬೇಕಾಗಿರುವ ಸಿಲಿಂಡರ್‌ಗಳನ್ನು ಒದಗಿಸಲು ಕೇಂದ್ರಕ್ಕೆ ಪತ್ರ ಬರೆಯಬೇಕು ಎಂದೂ ಹೇಳಿದರು.

ಸಭೆಯಲ್ಲಿ ಆಮ್ಲಜನಕ ಉತ್ಪಾದಕರು ಮತ್ತು ಪೂರೈಕೆ ಸಂಸ್ಥೆಗಳ ಪ್ರತಿನಿಧಿಗಳು ಸರ್ಕಾರದ ಹಿರಿಯ ಅಧಿಕಾರಿಗಳು ಇದ್ದರು.

'ಹಾಸ್ಟೆಲ್‌ನಲ್ಲೇ ವಸತಿ ಸೌಲಭ್ಯ ಕಲ್ಪಿಸಿ'

ಬೆಂಗಳೂರು: ಹಾಸ್ಟೆಲ್‌ಗಳನ್ನು ಕೊರೊನಾ ರೋಗಿಗಳಿಗೆ ಬಳಸಿಕೊಳ್ಳಲು ವಿದ್ಯಾರ್ಥಿಗಳನ್ನು ಊರುಗಳಿಗೆ ಕಳುಹಿಸಬಾರದು. ಹಾಸ್ಟೆಲ್‌ಗಳಲ್ಲೇ ಉಚಿತ ಊಟ ಹಾಗೂ ವಸತಿ ಸೌಲಭ್ಯವನ್ನು ಸರ್ಕಾರ ಕಲ್ಪಿಸಬೇಕು' ಎಂದು ಪ್ರಜಾಸತ್ತಾತ್ಮಕ ದಲಿತ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಸಂಚಾಲಕ ವೇಣುಗೋಪಾಲ್ ಮೌರ್ಯ ಒತ್ತಾಯಿಸಿದ್ದಾರೆ.

'ಹಾಸ್ಟೆಲ್‌ಗಳನ್ನು ಕೋವಿಡ್ ಕೇಂದ್ರಗಳಾಗಿ ಬಳಸಲು ಮುಂದಾಗಿರುವ ಸರ್ಕಾರವು, ಅಲ್ಲಿರುವ ವಿದ್ಯಾರ್ಥಿಗಳನ್ನು ಖಾಲಿ ಮಾಡಿಸುವ ಚಿಂತನೆ ನಡೆಸಿದೆ. ಈ ರೀತಿ ಮಾಡುವುದರಿಂದ ದಲಿತ ವಿದ್ಯಾರ್ಥಿಗಳು ಶಿಕ್ಷಣ ಹಾಗೂ ಹಸಿವಿನ ಸಮಸ್ಯೆಗೆ ತುತ್ತಾಗುತ್ತಾರೆ' ಎಂದಿದ್ದಾರೆ.

24 ಗಂಟೆಯಲ್ಲಿ ಬಿ.ಇಡಿ ಫಲಿತಾಂಶ- ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಸಿದ್ಧತೆ

ಬೆಂಗಳೂರು ನಗರ ವಿ.ವಿ ಪರೀಕ್ಷೆ ಮುಂದೂಡಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಹೆಚ್ಚಳ ಮತ್ತು ಸಾರಿಗೆ ನೌಕರರ ಮುಷ್ಕರದ ನಡುವೆಯೂ ಬೆಂಗಳೂರು ನಗರ ವಿಶ್ವವಿದ್ಯಾಲಯದ ಬಿ.ಎ ಪದವಿ (ಸಮಾಜವಿಜ್ಞಾನ) ಪರೀಕ್ಷೆ ಸೋಮವಾರ ನಡೆಯಿತು. ಆದರೆ, ಉಳಿದ ಪರೀಕ್ಷೆಗಳನ್ನು ಮುಂದೂಡಲು ವಿಶ್ವವಿದ್ಯಾಲಯ ಚಿಂತನೆ ನಡೆಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಕುಲಸಚಿವ (ಮೌಲ್ಯಮಾಪನ) ರಮೇಶ್ ಬಿ, 'ಪರೀಕ್ಷೆ ಮುಂದೂಡುವ ಕುರಿತು ಚರ್ಚಿಸಲು ಎಲ್ಲ ಕಾಲೇಜುಗಳ ಪ್ರಾಂಶುಪಾಲರ ಜೊತೆ ಮಂಗಳವಾರ ಸಭೆ ನಡೆಸಲಿದ್ದೇವೆ. ಸದ್ಯದ ಪರಿಸ್ಥಿತಿಯಲ್ಲಿ ಪರೀಕ್ಷೆ ನಡೆಸುವುದು ಸಮಂಜಸವೂ ಅಲ್ಲ. ಎಲ್ಲರ ಅಭಿಪ್ರಾಯ ಪಡೆದು ಈ ಬಗ್ಗೆ ನಿರ್ಧಾರ ತಳೆಯಲಾಗುವುದು' ಎಂದರು.

'ಸೋಮವಾರ ನಡೆದ ಸಮಾಜ ವಿಜ್ಞಾನ ಪರೀಕ್ಷೆ 15 ದಿನಗಳ ಹಿಂದೆಯೇ ನಿಗದಿಯಾಗಿತ್ತು. 20 ಕೇಂದ್ರಗಳಲ್ಲಿ 500 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಕೋವಿಡ್ ಹರಡದಂತೆ ತಡೆಯಲು ಸಕಲ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಪರೀಕ್ಷೆ ನಡೆಸಲಾಗಿದೆ' ಎಂದು ಅವರು ತಿಳಿಸಿದರು.

'ಪರೀಕ್ಷೆ ಮುಂದೂಡುವಂತೆ ಪೋಷಕರು ಮನವಿ ಮಾಡಿಲ್ಲ. ಅಷ್ಟೇ ಅಲ್ಲದೆ, ಈ ಬಾರಿ ಆದಷ್ಟು ಬೇಗ ಪರೀಕ್ಷೆ ನಡೆಸುವಂತೆ ವಿದ್ಯಾರ್ಥಿಗಳು ಮತ್ತು ಪೋಷಕರು ಒತ್ತಾಯಿಸುತ್ತಿದ್ದಾರೆ. ಆದರೂ ಕೋವಿಡ್ ಹೆಚ್ಚುತ್ತಿರುವುದರಿಂದ ಮತ್ತು ಸಾರಿಗೆ ನೌಕರರ ಮುಷ್ಕರ ಮುಂದುವರಿದಿರುವುದರಿಂದ ಪರೀಕ್ಷೆಗಳನ್ನು ಮುಂದೂಡಲೇಬೇಕಾದ ಅನಿವಾರ್ಯ ಇದೆ. ಪರೀಕ್ಷೆಗಳನ್ನು ಮುಂದೂಡಿದರೆ ಪರಿಷ್ಕೃತ ವೇಳಾಪಟ್ಟಿ ಪ್ರಕಟಿಸಲಾಗುವುದು' ಎಂದೂ ತಿಳಿಸಿದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಂತರ ಕಾಯ್ದುಕೊಂಡು ಸೋಮವಾರ ಪರೀಕ್ಷೆ ಬರೆದರು

24 ಗಂಟೆಯಲ್ಲಿ ಬಿ.ಇಡಿ ಫಲಿತಾಂಶ: 'ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪದವಿ ಪರೀಕ್ಷೆ (5ನೇ ಸೆಮಿಸ್ಟರ್), ಬಿ.ಇಡಿ (3ನೇ ಸೆಮಿಸ್ಟರ್), ಸ್ನಾತಕೋತ್ತರ ಕೋರ್ಸ್‌ಗಳ (3ನೇ ಸೆಮಿಸ್ಟರ್) ಉಳಿದ ಪತ್ರಿಕೆಗಳ ಪರೀಕ್ಷೆಗಳು ಸೋಮವಾರ ನಡೆದವು. ಶೇ 98 ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಹಾಜರಾಗಿದ್ದಾರೆ' ಎಂದು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಕೆ. ಜನಾರ್ದನಂ ತಿಳಿಸಿದರು.

'ಇಂದಿರಾನಗರದಲ್ಲಿರುವ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಮಾತ್ರ ಇರುವ ಎಂ.ಎಸ್‌ಸಿ (ಸೈಕಾಲಜಿ) ಮತ್ತು ಎಂ.ಎಸ್‌ಸಿ (ಕೌನ್ಸೆಲಿಂಗ್) ವಿಷಯಗಳ ಪರೀಕ್ಷೆಗಳಿಗೆ ಒಟ್ಟು 84 ವಿದ್ಯಾರ್ಥಿಗಳು ಹಾಜರಾಗಬೇಕಿತ್ತು. ಈ ಪೈಕಿ, ಮೂವರಿಗೆ ಕೋವಿಡ್ ದೃಢಪಟ್ಟ ಬಗ್ಗೆ ಭಾನುವಾರ ಸಂಜೆ ಮಾಹಿತಿ ಸಿಕ್ಕಿದ ಕಾರಣ ಆ ಪರೀಕ್ಷೆಗಳನ್ನು ಮಾತ್ರ ಮುಂದೂಡಲಾಗಿದೆ. ಉಳಿದಂತೆ, ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಯಶಸ್ವಿಯಾಗಿ ಎಲ್ಲ ಪರೀಕ್ಷೆಗಳನ್ನು ನಡೆಸಲಾಗಿದೆ' ಎಂದರು.

'ಉಳಿದ ಪರೀಕ್ಷೆಗಳು ವೇಳಾಪಟ್ಟಿಯಂತೆ ನಡೆಯಲಿವೆ. ಪರೀಕ್ಷೆ ಮುಂದೂಡಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಸುದ್ದಿಗಳನ್ನು ಹಬ್ಬಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಅಂಥವುಗಳನ್ನು ನಂಬಬಾರದು' ಎಂದೂ ಅವರು ತಿಳಿಸಿದ್ದಾರೆ.

'ಕಳೆದ ವರ್ಷ ಬಿ.ಇಡಿ (ನಾಲ್ಕನೇ ಸೆಮಿಸ್ಟರ್) ವಿದ್ಯಾರ್ಥಿಗಳ ಪರೀಕ್ಷೆ ಫಲಿತಾಂಶವನ್ನು ಕೇವಲ 48 ಗಂಟೆಯಲ್ಲಿ ನೀಡಿದ್ದೆವು. ಈ ಬಾರಿ, ಬಿ.ಇಡಿ ನಾಲ್ಕನೇ ಸೆಮಿಸ್ಟರ್‌ನ 1,780 ವಿದ್ಯಾರ್ಥಿಗಳ ಫಲಿತಾಂಶವನ್ನು 24 ಗಂಟೆಯ ಒಳಗೆ ನೀಡಲು ಸಿದ್ಧತೆ ಮಾಡಿಕೊಂಡಿದ್ದು, ಇದು ದಾಖಲೆ ಆಗಲಿದೆ' ಎಂದು ಅವರು ವಿವರಿಸಿದರು.

ಸಾರಿಗೆ ಮುಷ್ಕರ: ಕೋಡಿಹಳ್ಳಿ ಸೇರಿ 17 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆ ನೌಕರರನ್ನು ಪ್ರಚೋದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಕಾನೂನುಬಾಹಿರವಾಗಿ ಮುಷ್ಕರ ನಡೆಸಿ ಸಂಸ್ಥೆಗೆ ನಷ್ಟವನ್ನುಂಟು ಮಾಡಿದ ಆರೋಪದಡಿ ಕೋಡಿಹಳ್ಳಿ ಚಂದ್ರಶೇಖರ್ ಸೇರಿದಂತೆ 17 ಮಂದಿ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಿಎಂಟಿಸಿ ಭದ್ರತಾ ಮತ್ತು ಜಾಗೃತ ಶಾಖೆಯ ವಿಭಾಗೀಯ ಭದ್ರತಾ ನಿರೀಕ್ಷಕ ಕೆ.ಎಂ. ಮುನಿಕೃಷ್ಣ ದೂರು ನೀಡಿದ್ದಾರೆ. ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ, ವಿಪತ್ತು ನಿರ್ವಹಣಾ ಕಾಯ್ದೆ, ಅಕ್ರಮ ಕೂಟ, ಜೀವ ಬೆದರಿಕೆ, ಸಾರ್ವಜನಿಕ ಆಸ್ತಿಗೆ ಹಾನಿ, ಅಪರಾಧಕ್ಕೆ ಕುಮ್ಮಕ್ಕು, ಕರ್ತವ್ಯಕ್ಕೆ ಅಡ್ಡಿ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಗೌರವ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಅಧ್ಯಕ್ಷ ಚಂದ್ರಶೇಖರ್, ಮಾಜಿ ನೌಕರ ಆನಂದ್, ನಿರ್ವಾಹಕಿ ಚಂಪಕಾವತಿ, ಬೆಂಗಳೂರು ಕೇಂದ್ರೀಯ ವಿಭಾಗದ ಇತರೆ ನೌಕರರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಅವರೆಲ್ಲರನ್ನೂ ವಿಚಾರಣೆ ನಡೆಸಬೇಕಿದೆ’ ಎಂದೂ ಹೇಳಿದರು.

‘ಆರೋಪಿಗಳು, ಅಕ್ರಮ ಕೂಟ ರಚಿಸಿಕೊಂಡು ಸರ್ಕಾರದ ಆದೇಶ ಹಾಗೂ ಕಾನೂನುಗಳನ್ನು ಉಲ್ಲಂಘಿಸಿ ಕಾನೂನುಬಾಹಿರ ಮುಷ್ಕರ ನಡೆಸಲು ನೌಕರರನ್ನು ಪ್ರೇರೇಪಿಸಿದ್ದಾರೆ. ನೌಕರರು ಸಾಮೂಹಿಕವಾಗಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರಾಗುವಂತೆ ಮಾಡಿದ್ದಾರೆ ಎಂದು ದೂರಿನಲ್ಲಿ ಮುನಿಕೃಷ್ಣ ತಿಳಿಸಿದ್ದಾರೆ’ ಎಂದೂ ಅವರು ಹೇಳಿದರು.

‘ಸಂಸ್ಥೆಯ 6 ಬಸ್‌ಗಳನ್ನು ಜಖಂ ಮಾಡಿ ನಷ್ಟವನ್ನುಂಟು ಮಾಡಿದ್ದಾರೆ. ಕಾನೂನುಬದ್ಧವಾಗಿ ಕರ್ತವ್ಯಕ್ಕೆ ಹಾಜರಾದ ನೌಕರರಿಗೆ ಜೀವ ಬೆದರಿಕೆ ಹಾಕಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಗೂ ವಿಡಿಯೊ ಹರಿಬಿಟ್ಟು ನೌಕರರನ್ನು ಪ್ರಚೋದಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದೂ ಪೊಲೀಸರು ಹೇಳಿದರು.

ಸುಳ್ಳು ಮಾಹಿತಿಗೆ ಕಿವಿಗೊಡದೆ ಕರ್ತವ್ಯಕ್ಕೆ ಹಾಜರಾಗಿ: ಸಿ.ಶಿಖಾ

ಮುಷ್ಕರದಲ್ಲಿ ಭಾಗಿಯಾದ ಸಿಬ್ಬಂದಿಯ ಅಮಾನತು ಮತ್ತು ವಜಾ ಆದೇಶ ಹಿಂತೆಗೆದುಕೊಳ್ಳುವ ಬಗ್ಗೆ ಸುಳ್ಳು ಮಾಹಿತಿ ಹರಡಲಾಗಿದ್ದು, ಸರ್ಕಾರದ ಮಟ್ಟದಲ್ಲಿ ಈ ರೀತಿಯ ಆಲೋಚನೆ ಇಲ್ಲ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ ಸ್ಪಷ್ಟಪಡಿಸಿದ್ದಾರೆ.

ಈ ರೀತಿಯ ಸುಳ್ಳು ಮಾಹಿತಿಯನ್ನು ಹರಿಬಿಡುವ ಮೂಲಕ ಮುಷ್ಕರವನ್ನು ಬೆಂಬಲಿಸುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮುಷ್ಕರದ ಬಗ್ಗೆ ಹೈಕೋರ್ಟ್ ಮಧ್ಯಸ್ಥಿಕೆ ವಹಿಸಲಿದೆ ಎಂಬ ಸಂದೇಶಗಳನ್ನು ಹರಿಬಿಡಲಾಗುತ್ತಿದೆ. ಇವೆಲ್ಲವೂ ಸುಳ್ಳು ಎಂದು ತಿಳಿಸಿದ್ದಾರೆ.

‘ಮುಷ್ಕರವನ್ನು ಪ್ರೋತ್ಸಾಹಿಸುವ ಮತ್ತು ಕರ್ತವ್ಯಕ್ಕೆ ಗೈರಾದವರ ವಿರುದ್ಧ ಬಿಎಂಟಿಸಿ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಅಮಾನತು ಅಥವಾ ವಜಾಗೊಳಿಸಿದ ನಂತರ ಅನೇಕ ಉದ್ಯೋಗಿಗಳು ಯೂನಿಯನ್ ಭಯದಿಂದಾಗಿ ಕೆಲಸಕ್ಕೆ ಬರಲಿಲ್ಲ ಎಂದು ಹೇಳಿಕೊಂಡಿದ್ದಾರೆ. ಕೆಲಸಕ್ಕೆ ಮರಳುವ ನೌಕರರಿಗೆ ಸಾಕಷ್ಟು ಪೊಲೀಸ್ ರಕ್ಷಣೆ ನೀಡಲಾಗುವುದು’ ಎಂದೂ ಅವರು ತಿಳಿಸಿದ್ದಾರೆ.

‘ಶುಕ್ರವಾರದಿಂದ ಬಸ್‌ಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಸುಳ್ಳು ಸುದ್ದಿಗಳನ್ನು ನಂಬದೆ ನೌಕರರೆಲ್ಲರೂ ಸಾರ್ವಜನಿಕ ಹಿತದೃಷ್ಟಿಯಿಂದ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ತಿಳಿಸಿದ್ದಾರೆ.

ಈ ನಡುವೆ ಬಿಎಂಟಿಸಿಯ 200 ಸಿಬ್ಬಂದಿಯನ್ನು ವಜಾಗೊಳಿಸಿ ಸೋಮವಾರ ಆದೇಶಿಸಿದೆ. ಕರ್ತವ್ಯಕ್ಕೆ ಹಾಜರಾಗದ ಸಿಬ್ಬಂದಿ ವಿರುದ್ಧ ಅಮಾನತು ಮತ್ತು ವಜಾ ಪ್ರಕ್ರಿಯೆಗಳು ಮುಂದುವರಿಯಲಿದೆ ಎಂದು ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ಬಸ್ಸಿಗೆ ಕಲ್ಲೇಟು: ಬಿಎಂಟಿಸಿ ನೌಕರರೇ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯದ ವಿಘ್ನೇಶ್ವರ ನಗರ ತಂಗುದಾಣ ಬಳಿ ಬಿಎಂಟಿಸಿ ಬಸ್ಸಿನ ಮೇಲೆ ಕಲ್ಲು ತೂರಾಟ ನಡೆಸಿ, ಚಾಲಕ ನಂಜುಂಡೇಗೌಡ (43) ಅವರ ತಲೆಗೆ ತೀವ್ರ ಗಾಯವನ್ನುಂಟು ಮಾಡಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಹಳ್ಳಿ ಸೀತೇಗೌಡ (33), ತಿಮ್ಮೇಗೌಡ (42) ಹಾಗೂ ಜೀವನ್ (33) ಬಂಧಿತರು. ಈ ಮೂವರೂ ಬಿಎಂಟಿಸಿ ನೌಕರರು. ಮೊದಲ ದಿನದಿಂದಲೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದ ಇವರು, ಕೆಲ ಚಾಲಕರಿಂದ ಬಸ್‌ಗಳು ಪುನಃ ಸಂಚಾರ ಆರಂಭಿಸಿದ್ದಕ್ಕೆ ಸಿಟ್ಟಾಗಿದ್ದರು. ಹೀಗಾಗಿಯೇ ಬಸ್ಸಿಗೆ ಕಲ್ಲು ಹೊಡೆದಿದ್ದರು’ ಎಂದು ಪೊಲೀಸರು ಹೇಳಿದರು.


ಸೀತೇಗೌಡ

ತಿಮ್ಮೇಗೌಡ

ಜೀವನ್

‘ಆರೋಪಿ ಸೀತೇಗೌಡ, ಬಿಎಂಟಿಸಿ ಡಿಪೊ–9ರಲ್ಲಿ ಚಾಲಕ. ಅದೇ ಡಿಪೊದಲ್ಲೇ ಚಾಲಕ ಮತ್ತು ನಿರ್ವಾಹಕರಾಗಿ ತಿಮ್ಮೇಗೌಡ ಹಾಗೂ ಮೆಕ್ಯಾನಿಕ್ ಆಗಿ ಜೀವನ್ ಕೆಲಸ ಮಾಡುತ್ತಿದ್ದರು. ಮೂವರು ಆರೋಪಿಗಳು, ಒಟ್ಟಿಗೆ ಗುಂಪು ಕಟ್ಟಿಕೊಂಡು ಬಂದು ಕೃತ್ಯ ಎಸಗಿದ್ದರು.’

‘ಭಾನುವಾರ (ಏ. 18) ಸಂಜೆ ಸಿಟಿ ಮಾರುಕಟ್ಟೆಯಿಂದ ಜಾಲಹಳ್ಳಿ ಕಡೆಗೆ (ನಂ. 248/6) ಬಿಎಂಟಿಸಿ ಬಸ್ ಹೊರಟಿತ್ತು. ವಿಘ್ನೇಶ್ವರ ನಗರದ ತಂಗುದಾಣದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಬಸ್ ನಿಂತಿತ್ತು. ಅದೇ ಸಂದರ್ಭದಲ್ಲೇ ಆರೋಪಿಗಳು, ಬಸ್ಸಿನ ಮುಂಭಾಗಕ್ಕೆ ಕಲ್ಲು ಹೊಡೆದಿದ್ದರು. ಒಂದು ಕಲ್ಲು ಚಾಲಕ ನಂಜುಂಡೇಗೌಡ ತಲೆಗೆ ಬಿದ್ದು ತೀವ್ರ ಗಾಯವಾಗಿತ್ತು. ಸ್ಥಳೀಯರೇ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ’ ಎಂದೂ ತಿಳಿಸಿದರು.

‘ಕೃತ್ಯದ ಬಳಿಕ ಆರೋಪಿಗಳು ಪರಾರಿಯಾಗಿದ್ದಾರೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಈ ಬಗ್ಗೆ ಬಿಎಂಟಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು’ ಎಂದೂ ಹೇಳಿದರು.

ಮುಷ್ಕರ ಹಿಂಪಡೆಯಲು ಮನವಿ

ಬೆಂಗಳೂರು: ‘ಸಾರಿಗೆ ನೌಕರರು ಕೈಗೊಂಡಿರುವ ಮುಷ್ಕರವನ್ನು ಕೂಡಲೇ ಹಿಂಪಡೆದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು’ ಎಂದು ರಾಜ್ಯ ರಸ್ತೆ ಸಾರಿಗೆ ನಿಗಮಗಳ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ವಿಶ್ವೇಶ್ವರಯ್ಯ,‘ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 12 ದಿನಗಳಿಂದ ನಡೆಸುತ್ತಿರುವ ಮುಷ್ಕರದಿಂದ ಭಾರಿ ನಷ್ಟವಾಗಿದೆ. ಪ್ರಯಾಣಿಕರು ಭಾರಿ ಸಮಸ್ಯೆ ಎದುರಿಸಿದ್ದಾರೆ’ ಎಂದರು.

‘ಸಚಿವ ಲಕ್ಷ್ಮಣ ಸವದಿ ಹಾಗೂ ಅಧಿಕಾರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗಿದೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಅವರು, ನಿಗಮದ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೆ, ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ವೇತನ ಪರಿಷ್ಕರಣೆ ಮಾಡುವ ಭರವಸೆ ನೀಡಿದ್ದಾರೆ’ ಎಂದು ಹೇಳಿದರು.

ಬೆಳಗಾವಿಯಲ್ಲಿ ಕಚೇರಿ: ಗಡಿ ಅಭಿವೃದ್ಧಿ ಪ್ರಾಧಿಕಾರ ಖಂಡನೆ

ಬೆಂಗಳೂರು: ‘ಬೆಳಗಾವಿಯಲ್ಲಿ ಮಹಾರಾಷ್ಟ್ರ ಸರ್ಕಾರವು ಕಚೇರಿಯನ್ನು ಸ್ಥಾಪಿಸಬೇಕೆಂಬ ಶಿವಸೇನೆ ಮುಖಂಡ ಹಾಗೂ ರಾಜ್ಯಸಭೆ ಸದಸ್ಯ ಸಂಜಯ ರಾವುತ್ ಅವರ ಸಲಹೆಯನ್ನು ಸಂವಿಧಾನಾತ್ಮಕವಾಗಿ ಒಪ್ಪಲು ಸಾಧ್ಯವಿಲ್ಲ’ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

‘ಬೆಳಗಾವಿಯು ಸಂಪೂರ್ಣವಾಗಿ ಕರ್ನಾಟಕಕ್ಕೆ ಸೇರಿದೆ. ಗಡಿ ಪ್ರದೇಶಗಳಿಗೆ ಸಂಬಂಧಿಸಿದ ಸಮನ್ವಯ ಸಚಿವರಾಗಿರುವ ಏಕನಾಥ ಶಿಂಧೆಯವರು ಬೆಳಗಾವಿ ಜಿಲ್ಲೆಗೆ ಮೇಲಿಂದ ಮೇಲೆ ಭೇಟಿ ನೀಡಬೇಕೆಂಬ ಸಲಹೆ ನೀಡಿರುವುದು ಕೂಡ ಖಂಡಾನಾರ್ಹ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹತ್ತು ವರ್ಷಗಳ ಹಿಂದಿನ ಕೆಐಎಡಿಬಿ ಭೂ ಹಗರಣ

ನಿವೃತ್ತ ಅಧಿಕಾರಿ ಸೇರಿ ಇಬ್ಬರಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ಹತ್ತು ವರ್ಷಗಳ ಹಿಂದೆ ನಡೆದಿದ್ದ ಭೂ ಹಗರಣದಲ್ಲಿ ನಿವೃತ್ತ ಕೆಎಎಸ್ ಅಧಿಕಾರಿ ಮತ್ತು ಖಾಸಗಿ ವ್ಯಕ್ತಿಯೊಬ್ಬರಿಗೆ ಲೋಕಾಯುಕ್ತ ವಿಶೇಷ ನ್ಯಾಯಾಲಯ ತಲಾ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ನಿವೃತ್ತ ಕೆಎಎಸ್ ಅಧಿಕಾರಿ ಕೆ.ಬಿ. ಚಿಕ್ಕಬೆಟ್ಟಯ್ಯ ಮತ್ತು ಹೊರಮಾವು ನಿವಾಸಿ ಮುನಿರಾಜು ಶಿಕ್ಷೆಗೊಳಗಾದವರು. ಇಬ್ಬರಿಗೂ ಕ್ರಮವಾಗಿ ₹ 2.10 ಲಕ್ಷ ಮತ್ತು ₹ 2 ಲಕ್ಷ ದಂಡವನ್ನೂ ವಿಧಿಸಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಪಾರ್ಕ್‌ಗಳ ನಿರ್ಮಾಣಕ್ಕೆ ನಡೆದ ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ಅಪರಾಧಿಗಳಿಗೆ ಶಿಕ್ಷೆಯಾದ ಮೊದಲ ಪ್ರಕರಣವಿದು.

ಕೆಐಎಡಿಬಿ 2006ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಅರೆಬಿನ್ನಮಂಗಲದ ಸರ್ವೆ ನಂಬರ್ 74/2ರಲ್ಲಿ 2 ಎಕರೆ 10 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಮುನಿಕೃಷ್ಣ ಎಂಬುವವರು ಈ ಜಮೀನಿನ ಮಾಲೀಕರು. ಆದರೆ, ಮುನಿರಾಜು ಸದರಿ ಜಮೀನಿನ ಮಾಲೀಕ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿತ್ತು. ಅವುಗಳ ಆಧಾರದಲ್ಲಿ ₹1.39 ಕೋಟಿ ಪರಿಹಾರವನ್ನೂ ಪಾವತಿಸಲಾಗಿತ್ತು.

2010ರಲ್ಲಿ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ಸಿ. ಲಕ್ಷ್ಮೀನಾರಾಯಣ, ಎಫ್‌ಐಆರ್ ದಾಖಲಿಸಿದ್ದರು. ನಂತರ ಲೋಕಾಯುಕ್ತ ಇನ್‌ಸ್ಪೆಕ್ಟರ್ ಕೆ. ರವಿಶಂಕರ್ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. 15 ಸಾಕ್ಷಿಗಳ ವಿಚಾರಣೆ ನಡೆಸಿದ್ದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್ ಕೆ., 42 ದಾಖಲೆಗಳನ್ನೂ ಪರಿಶೀಲನೆ ನಡೆಸಿದ್ದರು. ಏಪ್ರಿಲ್ 6ರಂದು ಅಂತಿಮ ಆದೇಶ ಪ್ರಕಟಿಸಿದ್ದು, ‘ಚಿಕ್ಕಬೆಟ್ಟಯ್ಯ ಮತ್ತು ಮುನಿರಾಜು ದೋಷಿಗಳು’ ಎಂದು ಸಾರಿದ್ದಾರೆ. ಇಬ್ಬರಿಗೂ ತಲಾ ಎರಡು ವರ್ಷ ಸಾಧಾರಣ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಪ್ರತ್ಯೇಕ ಅಪಘಾತ: ಮೂವರ ಸಾವು

ಬೆಂಗಳೂರು: ನಗರದ ಮೂರು ಕಡೆ ಭಾನುವಾರ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಕಾರ್ಮಿಕರು ಸೇರಿ ಮೂವರು ಮೃತಪಟ್ಟಿದ್ದಾರೆ.

‘ಡಿ.ಜೆ. ಹಳ್ಳಿಯ ಅಂಬೇಡ್ಕರ್ ನಗರ ನಿವಾಸಿ ಚಿರಂಜೀವಿ (34), ಮುನಿರಾಜು ಹಾಗೂ ಮಹದೇವಪುರ ನಿವಾಸಿ ಸೆಲ್ವಕುಮಾರ್ (37) ಮೃತರು. ರಾಜಾಜಿನಗರ ಹಾಗೂ ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ಹೇಳಿದರು.

‘ಕೂಲಿ ಕಾರ್ಮಿಕ ಚಿರಂಜೀವಿ, ಬಳ್ಳಾರಿ ರಸ್ತೆಯ ಕಾಫಿ ಡೇ ಬಳಿ ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ.’

‘ಇನ್ನೊಂದು ಪ್ರಕರಣದಲ್ಲಿ ಕೋಗಿಲು ಹಾಗೂ ಬೆಳ್ಳಳ್ಳಿ ನಡುವಿನ ರಸ್ತೆಯಲ್ಲಿ ಬೈಕ್ ಗುದ್ದಿದ್ದರಿಂದಾಗಿ ಮುನಿರಾಜು (34) ಎಂಬುವರು ಸಾವಿಗೀಡಾಗಿದ್ದಾರೆ. ಇವರು ಸಹ ಕೂಲಿ ಕಾರ್ಮಿಕರು’ ಎಂದು ಪೊಲೀಸರು ತಿಳಿಸಿದರು.

ಕ್ರೇನ್ ಆಪರೇಟರ್ ಸಾವು: ನಂದಿನಿ ಲೇಔಟ್ ಬಳಿ ಹಾದು ಹೋಗಿರುವ ಹೊರವರ್ತುಲ ರಸ್ತೆಯಲ್ಲಿ ನಿಂತಿದ್ದ ಲಾರಿಗೆ ಬೈಕ್ ಗುದ್ದಿದ್ದು, ಅಪಘಾತದಿಂದ ತೀವ್ರ ಗಾಯಗೊಂಡು ಸವಾರ ಸೆಲ್ವಕುಮಾರ್ ಅಸುನೀಗಿದ್ದಾರೆ.

‘ಕ್ರೇನ್ ಆಪರೇಟರ್ ಆಗಿದ್ದ ಸೆಲ್ವಕುಮಾರ್, ತಮ್ಮ ಬೈಕ್‌ನಲ್ಲಿ ಸುಮ್ಮನಹಳ್ಳಿ ಕಡೆಯಿಂದ ಎಫ್‌ಟಿಐ ವೃತ್ತದ ಕಡೆಗೆ ಹೊರ ವರ್ತುಲ ರಸ್ತೆಯಲ್ಲಿ ಹೊರಟಿದ್ದರು. ಮಾರ್ಗಮಧ್ಯೆಯೇ ರಸ್ತೆಯಲ್ಲಿ ಯಾವುದೇ ಸೂಚನೆ ಪಾಲಿಸದೇ ಲಾರಿ ನಿಲುಗಡೆ ಮಾಡಲಾಗಿತ್ತು. ಅದೇ ಲಾರಿಗೆ ಸೆಲ್ವಕುಮಾರ್ ಬೈಕ್ ಗುದ್ದಿ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

ಗರ್ಭಗುಡಿಯಲ್ಲಿನ ಮೂರ್ತಿಗಳ ಪುನರ್ ಸ್ಥಾಪನೆ

ಸಿದ್ಧರಾಮನಹುಂಡಿ: ರಾಮಮಂದಿರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ನಿರ್ಮಿಸಲಾದ ‘ಕೋದಂಡರಾಮ ಮಂದಿರ’, ಸೋಮವಾರ ಭಕ್ತರ ಪ್ರವೇಶಕ್ಕೆ ಮುಕ್ತವಾಯಿತು.

ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ವೇದಿಕೆ ಕಾರ್ಯಕ್ರಮ ಇರಲಿಲ್ಲ. ಧಾರ್ಮಿಕ ವಿಧಿವಿಧಾನಗಳಿಗಷ್ಟೇ ಸೀಮಿತವಾಗಿ ಅತ್ಯಂತ ಸರಳವಾಗಿ ಉದ್ಘಾಟನಾ ಕಾರ್ಯ ನೆರವೇರಿಸಲಾಯಿತು. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಮ್ಮ ಭಾಗಿಯಾಗಿದ್ದರು.

ಗಣಪತಿ ಹೋಮ ಮತ್ತು ಮಹಾಚಂಡಿಕಾ ಯಾಗಗಳು ನಡೆದವು. ದೇಗುಲದ ಮೇಲಿನ ಕಳಸ ಹಾಗೂ ಗರ್ಭಗುಡಿಯಲ್ಲಿನ ಮೂರ್ತಿಗಳನ್ನು ಪುನರ್ ಸ್ಥಾಪಿಸಲಾಯಿತು. ದೇವಸ್ಥಾನದ ಒಳಾಂಗಣದಲ್ಲಿ ವಿಷ್ಣುವಿನ ದಶಾವತಾರದ ಮೂರ್ತಿಗಳನ್ನು ನಿರ್ಮಿಸಲಾಗಿದ್ದು, ಇದಕ್ಕಾಗಿ

ಸಿದ್ದರಾಮನಹುಂಡಿಯಲ್ಲಿ ಜೀರ್ಣೋದ್ಧಾರಗೊಂಡ ಕೋದಂಡರಾಮಮಂದಿರದಲ್ಲಿ ಸೋಮವಾರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಯಿತು

ತಮಿಳುನಾಡಿನಿಂದ ಶಿಲ್ಪಿಗಳನ್ನು ಕರೆಸಲಾಗಿತ್ತು.

ಸುಮಾರು ನೂರು ವರ್ಷದಷ್ಟು ಹಳೆಯದಾದ ಈ ಮಂದಿರವನ್ನು ಸಿದ್ದರಾಮಯ್ಯ ಅವರ ಕುಟುಂಬದವರು ಗ್ರಾಮಸ್ಥರೊಂದಿಗೆ ಸೇರಿ ಜೀರ್ಣೋದ್ಧಾರ ಮಾಡಿದ್ದಾರೆ. ತಾವು ಬಂದರೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಬಹುದು ಎಂಬ ಕಾರಣಕ್ಕೆ ಸಿದ್ದರಾಮಯ್ಯ ಅವರು ಕಾರ್ಯಕ್ರಮಕ್ಕೆ ಗೈರಾಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮಂಗಳವಾರ, ಏಪ್ರಿಲ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 110 | ಪುಟ 12 • www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಪ್ರೀತಿಪಾತ್ರರನ್ನು ಕಳೆದುಕೊಂಡ ನೋವನ್ನು ಭರಿಸಲು ನಿಮ್ಮದೇ ಆದ ಒಂದಿಷ್ಟು ವಿಧಾನಗಳನ್ನು ಅಳವಡಿಸಿಕೊಂಡರೆ ಕೊಂಚ ಸಮಾಧಾನ ಮನಸ್ಸಿಗಾಗಬಹುದು.

ನೇಮಕಾತಿ ಸಂದರ್ಶನ ಮುಂದೂಡಿದ ಯುಪಿಎಸ್‌ಸಿ 8
ವಿವಿಧ ರಾಜ್ಯಗಳಲ್ಲಿ ಅಭಾವ 9
‘ರಾಜ್ಯ ಸರ್ಕಾರ ಬೆತ್ತಲಾಗುತ್ತಿದೆ’ 8
ಆಮ್ಲಜನಕ ಲಭ್ಯತೆ ಪರಿಶೀಲಿಸಿ: ಹೈಕೋರ್ಟ್ 9

ಸೆನ್ಸೆಕ್ಸ್	ನಿಫ್ಟಿ	₹/$
47,949	14,359	74.87

ನಾಸಾ ಹೊಸ ಸಾಹಸ: ಮಂಗಳನ ಮೇಲೆ ಮೊದಲ ಹೆಲಿಕಾಪ್ಟರ್ ಹಾರಾಟ!

ಕೇಪ್ ಕೆನಾವೆರಲ್ (ಅಮೆರಿಕ) (ಎಪಿ): ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ನಾಸಾ) ಮಂಗಳ ಗ್ರಹದಲ್ಲಿ ಸಣ್ಣ ಹೆಲಿಕಾಪ್ಟರ್‌ನ ಹಾರಾಟವನ್ನು ಸೋಮವಾರ ಯಶಸ್ವಿಯಾಗಿ ನಡೆಸಿದೆ. ಬೇರೆ ಗ್ರಹದಲ್ಲಿ ಹೆಲಿಕಾಪ್ಟರ್ ಹಾರಿಸಿದ ಮೊದಲ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಎಂಬ ಹೆಗ್ಗಳಿಕೆಗೆ ನಾಸಾ ಪಾತ್ರವಾಗಿದೆ.

1.8 ಕೆ.ಜಿ. ತೂಕದ ಈ ಹೆಲಿಕಾಪ್ಟರ್‌ಗೆ ಇಂಜೆನ್ಯುವಿಟಿ ಎಂದು ಹೆಸರಿಡಲಾಗಿದೆ. ನಾಸಾವು ಈಚೆಗೆ ಮಂಗಳ ಗ್ರಹಕ್ಕೆ ಕಳುಹಿಸಿದ್ದ ಪರ್ಸಿವಿಯರೆನ್ಸ್ ರೋವರ್ ನೌಕೆಯು, ಈ ಹೆಲಿಕಾಪ್ಟರ್ ಅನ್ನು ಹೊತ್ತೊಯ್ದಿತ್ತು. 15 ದಿನಗಳ ಹಿಂದೆಯೇ ಹೆಲಿಕಾಪ್ಟರ್ ಅನ್ನು ಕೆಳಗೆ ಇಳಿಸಿ, ಅದರಿಂದ 200

ಇನ್‌ಜೆನ್ಯುವಿಟಿ ಹೆಲಿಕಾಪ್ಟರ್

ಮೀಟರ್ ದೂರಕ್ಕೆ ರೋವರ್ ಸರಿದಿತ್ತು.

ಕ್ಯಾಲಿಫೋರ್ನಿಯಾದಲ್ಲಿ ಇರುವ ನಿಯಂತ್ರಣ ಕೇಂದ್ರದಿಂದ ಈ ಕಾರ್ಯಾಚರಣೆ ನಡೆಸಲಾಗಿತ್ತು. ಇದಕ್ಕಾಗಿ ನೂರು ಚದರ ಮೀಟರ್‌ನ ಜಾಗವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಪೂರ್ವನಿಗದಿಯಂತೆ ಏಪ್ರಿಲ್ ಮೊದಲ ವಾರದಲ್ಲೇ ಈ ಕಾರ್ಯಾಚರಣೆ ನಡೆಯಬೇಕಿತ್ತು. ಆದರೆ ಹೆಲಿಕಾಪ್ಟರ್‌ನ ರೆಕ್ಕೆಗಳು ಕೆಲಸ ಮಾಡದೇ ಇದ್ದುದ್ದರಿಂದ ಕಾರ್ಯಾಚರಣೆ ರದ್ದಾಗಿತ್ತು. ನಂತರ ತಂತ್ರಾಂಶದಲ್ಲಿನ ನ್ಯೂನತೆಯನ್ನು ವಿಜ್ಞಾನಿಗಳು ಸರಿಪಡಿಸಿದ್ದರು. ಹೀಗಾಗಿ ಸೋಮವಾರ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದು ನಾಸಾ ಮಾಹಿತಿ ನೀಡಿದೆ.

ಹಾರಾಟದಿಂದ ಏನು ಪ್ರಯೋಜನ?

ಒಟ್ಟು ಐದು ಹಾರಾಟಗಳನ್ನು ಯೋಜಿಸಲಾಗಿದೆ. ಒಂದಕ್ಕಿಂತ ಒಂದು ಮಹತ್ವಾಕಾಂಕ್ಷೆಯದ್ದೇ ಆಗಿದೆ. ಈ ಪ್ರಯೋಗವು ಯಶಸ್ವಿಯಾದರೆ ಹಲವು ಪ್ರಯೋಜನಗಳಿವೆ. ಮಂಗಳನ ಮೇಲೆ ಡ್ರೋನ್ ಹಾರಾಟ ಸಾಧ್ಯವಾಗಬಹುದು. ಮಂಗಳನ ಪಕ್ಷಿನೋಟ, ವಸ್ತುಗಳ ಸಾಗಾಟ, ಗಗನಯಾನಿಗಳಿಗೆ ಮಾಹಿತಿ ರವಾನೆಯಂತಹ ಕೆಲಸವನ್ನು ಈ ಡ್ರೋನ್ ಮಾಡಬಹುದು. ಮಂಗಳನ ಮೇಲಿನ ಹೆಲಿಕಾಪ್ಟರ್ ಹಾರಾಟವು ಭೂಮಿಯಲ್ಲಿ ಹಾರಾಟ ನಡೆಸುವ ಹೆಲಿಕಾಪ್ಟರ್‌ಗಳ ಸುಧಾರಣೆಗೂ ನೆರವು ನೀಡಲಿದೆ. ಹಿಮಾಲಯದಂತಹ ಎತ್ತರ ಪ್ರದೇಶದಲ್ಲಿ ಹಾರಾಟ ನಡೆಸುವ ಹೆಲಿಕಾಪ್ಟರ್‌ಗಳನ್ನು ಇನ್ನಷ್ಟು ಉತ್ತಮಪಡಿಸಲು ಸಹಾಯ ದೊರೆಯಬಹುದು.

ಪೂರ್ವ ನಿಗದಿಯಂತೆ ಹೆಲಿಕಾಪ್ಟರ್ 10 ಅಡಿ ಎತ್ತರದವರೆಗೂ ಏರಿದೆ. ಇದಕ್ಕೆ 5 ಸೆಕೆಂಡ್ ತೆಗೆದುಕೊಂಡಿದೆ. ನಂತರ ಅದೇ ಎತ್ತರದಲ್ಲಿ 30 ಸೆಕೆಂಡ್ ಹಾರಾಟ ನಡೆಸಿದೆ. ನಂತರ 5 ಸೆಕೆಂಡ್‌ನಲ್ಲಿ ಕೆಳಕ್ಕೆ ಇಳಿದಿದೆ. ಒಟ್ಟು 40 ಸೆಕೆಂಡ್‌ಗಳ ಕಾರ್ಯಾಚರಣೆ ನಡೆಸಿದೆ. 1903ರಲ್ಲಿ ರೈಟ್ ಸೋದರರು ಹಾರಿಸಿದ್ದ ರೈಟ್ ಫ್ಲೈಯರ್‌ನ ರೆಕ್ಕೆಯ ತುಂಡನ್ನು ಈ ಹೆಲಿಕಾಪ್ಟರ್‌ನಲ್ಲಿ ಇಡಲಾಗಿತ್ತು. ಆ ತುಂಡನ್ನು ಹೊತ್ತು, ಹೆಲಿಕಾಪ್ಟರ್ ಮಂಗಳನ ವಾತಾವರಣದಲ್ಲಿ ಹಾರಾಟ ನಡೆಸಿದೆ.

ಕೇವಲ ಒಂದೂವರೆ ಅಡಿ ಉದ್ದವಿರುವ ಹೆಲಿಕಾಪ್ಟರ್‌ನ ದೇಹದಲ್ಲಿ ಬ್ಯಾಟರಿಗಳು ಮತ್ತು ಸೌರಫಲಕಗಳನ್ನು ಅಳವಡಿಸಲಾಗಿತ್ತು. 4 ಅಡಿ ಅಗಲದ ಎರಡು ಜತೆ ರೆಕ್ಕೆಗಳು ಇದ್ದವು.

ಮಂಗಳನ ವಾತಾವರಣವು ತೆಳುವಾಗಿರುವ ಕಾರಣ, ರೆಕ್ಕೆಗಳು ಅತ್ಯಂತ ವೇಗವಾಗಿ ತಿರುಗಬೇಕಿತ್ತು. ಅಲ್ಲದೆ, ಮಂಗಳನ ಮೇಲಿನ ಮಾರುತಗಳು ಮತ್ತು ಚಳಿಯನ್ನು ತಡೆದುಕೊಳ್ಳುವಷ್ಟು ಗಟ್ಟಿಯಾಗಿ ಇರಬೇಕಿತ್ತು. ಇಷ್ಟೇ ತೂಕದ ಹೆಲಿಕಾಪ್ಟರ್, ಭೂಮಿಯ ಮೇಲೆ ಹಾರಾಟ ನಡೆಸಲು ರೆಕ್ಕೆಗಳು ಪ್ರತಿ ನಿಮಿಷಕ್ಕೆ 500 ಬಾರಿ ತಿರುಗಿದರೆ ಸಾಕು. ಆದರೆ ಮಂಗಳ ಗ್ರಹದಲ್ಲಿ ರೆಕ್ಕೆಗಳು 2,500 ಬಾರಿ ತಿರುಗಬೇಕು. ಅಲ್ಲದೆ, 28.7 ಕೋಟಿ ಕಿ.ಮೀ. ದೂರದಿಂದ ಕಾರ್ಯಾಚರಣೆಯನ್ನು ನಿಯಂತ್ರಿಸಬೇಕಿತ್ತು. ಈ ಎಲ್ಲಾ ಸವಾಲುಗಳನ್ನು ಎದುರಿಸಿ, ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ನಾಸಾ ತಿಳಿಸಿದೆ.

ಮೇ 1ರಿಂದ ಮೂರನೇ ಹಂತದ ಲಸಿಕೆ ಕಾರ್ಯಕ್ರಮ • ಮೋದಿ ನೇತೃತ್ವದ ಸಭೆಯಲ್ಲಿ ನಿರ್ಧಾರ

18 ದಾಟಿದ ಎಲ್ಲರಿಗೂ ಲಸಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ತಡೆಯ ಮೂರನೇ ಹಂತದ ಲಸಿಕೆ ನೀಡಿಕೆ ಕಾರ್ಯಕ್ರಮವನ್ನು ಮೇ 1ರಿಂದ ಆರಂಭಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಮೂರನೇ ಹಂತದಲ್ಲಿ ಲಸಿಕೆ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸೋಮವಾರ ನಡೆದ ತುರ್ತುಸಭೆಯಲ್ಲಿ ಕೇಂದ್ರ ಸರ್ಕಾರ ಮೂರನೇ ಹಂತದ ಲಸಿಕೆ ಕಾರ್ಯಕ್ರಮವನ್ನು ಘೋಷಿಸಿದೆ. ಈ ಹಂತದಲ್ಲಿ ರಾಜ್ಯ ಸರ್ಕಾರಗಳು ತಮಗೆ ಅಗತ್ಯವಿರುವ ಲಸಿಕೆಯನ್ನು ತಯಾರಕರಿಂದ ನೇರವಾಗಿ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಅವಕಾಶ ಮಾಡಿಕೊಟ್ಟಿದೆ.

ಈಗ ಜಾರಿಯಲ್ಲಿರುವ 1 ಮತ್ತು 2ನೇ ಹಂತದ ಲಸಿಕೆ ಕಾರ್ಯಕ್ರಮ ಮುಂದುವರಿಯಲಿದೆ. ಮುಂಚೂಣಿಯ ಕೋವಿಡ್ ಕಾರ್ಯಕರ್ತರಿಗೆ ಮತ್ತು 45 ವರ್ಷ ಮೇಲ್ಪಟ್ಟವರಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆ ನೀಡಲಿದೆ. ಈ ಕಾರ್ಯಕ್ರಮದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

‘ದೇಶದ ಎಲ್ಲರಿಗೂ ಲಸಿಕೆ ಲಭ್ಯವಾಗಬೇಕು ಎಂಬ ಉದ್ದೇಶವನ್ನು ಈಡೇರಿಸಲು ಕೇಂದ್ರ ಸರ್ಕಾರ ಒಂದು ವರ್ಷದಿಂದ ಶ್ರಮಿಸುತ್ತಿದೆ. ಭಾರತವು ದಾಖಲೆ ಸಂಖ್ಯೆಯಲ್ಲಿ ಲಸಿಕೆ ನೀಡುತ್ತಿದೆ. ಇದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ನೀಡಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

‘ಲಸಿಕೆ ತಯಾರಿಕೆಯನ್ನು ಹೆಚ್ಚಿಸಲು ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ. ಲಸಿಕೆ ತಯಾರಕರ ಜತೆ ಚರ್ಚೆ ನಡೆಸಲಾಗಿದೆ. ಪ್ರತಿ ಕಂಪನಿಯ ಸಾಮರ್ಥ್ಯ ಹೆಚ್ಚಿಸಲು ಅಗತ್ಯವಿರುವ ನೆರವು ನೀಡಲಾಗುತ್ತಿದೆ’ ಎಂದಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

11,76,850	ಒಟ್ಟು ಸೋಂಕಿತರು (11,61,065 ನಿನ್ನೆಯ ವಿವರ)
1,42,084	ಸಕ್ರಿಯ ಪ್ರಕರಣಗಳು
10,21,250	ಗುಣಮುಖರಾದವರು
13,497	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	15,785
ಗುಣಮುಖ	7,098
ಸಾವು	146

721 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ಇಂದು

ಬೆಂಗಳೂರು: ಕೋವಿಡ್ ಹೆಚ್ಚಳದಿಂದಾಗುತ್ತಿರುವ ಪರಿಣಾಮ ಹಾಗೂ ಪರಿಸ್ಥಿತಿ ಪರಿಶೀಲಿಸಿ ನಿಯಂತ್ರಣ ಕ್ರಮ ಕೈಗೊಳ್ಳುವ ಕುರಿತು ವಿಧಾನ ಮಂಡಲದ ಉಭಯ ಸದನಗಳ ನಾಯಕರು ಹಾಗೂ ರಾಜಕೀಯ ಪಕ್ಷಗಳ ಪ್ರಮುಖರ ಜತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ (ಏ.20) ವರ್ಚುವಲ್ ಸಭೆ (ವಿಡಿಯೊ ಸಂವಾದ) ನಡೆಸಲಿದ್ದಾರೆ.

ಸಂಜೆ 4.30ಕ್ಕೆ ನಡೆಯಲಿರುವ ಸಭೆಯ ಅಧ್ಯಕ್ಷತೆಯನ್ನು ರಾಜ್ಯಪಾಲ ವಜುಭಾಯಿ ವಾಲಾ ವಹಿಸಲಿದ್ದಾರೆ. ಕೋವಿಡ್ ಕಾರಣದಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮುಖ್ಯಮಂತ್ರಿ ಅಲ್ಲಿಂದಲೇ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಸಂಸದ ನಳಿನ್‌ಕುಮಾರ್ ಕಟೀಲ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, ಶಾಸಕರಾದ ಜಿ. ಪರಮೇಶ್ವರ, ಎಚ್.ಡಿ. ರೇವಣ್ಣ ಅವರಿಗೆ ಆಹ್ವಾನ ನೀಡಲಾಗಿದೆ.

ಕಠಿಣ ನಿಯಮ ಪ್ರಕಟ ಸಾಧ್ಯತೆ

ವೇಗವಾಗಿ ಹರಡುತ್ತಿರುವ ಕೋವಿಡ್ ನಿಯಂತ್ರಣಕ್ಕೆ ಮತ್ತಷ್ಟು ಕಠಿಣ ನಿಯಮಗಳನ್ನು ಜಾರಿಗೊಳಿಸಲು ಸರ್ಕಾರ ಚಿಂತನೆ ನಡೆಸಿದ್ದು, ಪರಿಷ್ಕೃತ ಮಾರ್ಗಸೂಚಿ ಮಂಗಳವಾರ ಪ್ರಕಟವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, ‘ತಜ್ಞರ ವರದಿ ಆಧರಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೇ ನೀಡಲಾಗಿದೆ. ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆ ಬಳಿಕ ಕಟ್ಟುನಿಟ್ಟಿನ ನಿಯಮಗಳನ್ನು ಮುಖ್ಯಮಂತ್ರಿ ಪ್ರಕಟಿಸಲಿದ್ದಾರೆ’ ಎಂದರು.

ಲಸಿಕೆ ಮುಕ್ತ ಮಾರುಕಟ್ಟೆಗೆ

ಮೇ 1ರಿಂದ ಅನ್ವಯವಾಗುವಂತೆ ಕೋವಿಡ್ ಲಸಿಕೆಯನ್ನು ರಾಜ್ಯ ಸರ್ಕಾರಗಳು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಕೇಂದ್ರ ಸರ್ಕಾರವು ಅನುವು ಮಾಡಿಕೊಟ್ಟಿದೆ.

ಲಸಿಕೆ ತಯಾರಿಕಾ ಕಂಪನಿಗಳು ತಾವು ತಯಾರಿಸುವ ಲಸಿಕೆಯ ಡೋಸ್‌ಗಳಲ್ಲಿ ಶೇ 50ರಷ್ಟನ್ನು ಕೇಂದ್ರ ಸರ್ಕಾರಕ್ಕೆ ನೀಡಬೇಕು. ಉಳಿಕೆ ಶೇ 50ರಷ್ಟು ಲಸಿಕೆಯ ಡೋಸ್‌ಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ರಾಜ್ಯ ಸರ್ಕಾರಗಳಿಗೆ ಮಾರಾಟ ಮಾಡಬಹುದು ಎಂದು ಕೇಂದ್ರ ಸರ್ಕಾರವು ಸೂಚಿಸಿದೆ. ಕಂಪನಿಗಳು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಲಸಿಕೆಯ ಬೆಲೆಯನ್ನು ಮೇ 1ರ ಮೊದಲೇ ಘೋಷಿಸಬೇಕು. ರಾಜ್ಯ ಸರ್ಕಾರಗಳು ತಮಗೆ ಸರಿಹೊಂದುವ ಕಂಪನಿಯಿಂದ ಲಸಿಕೆಯನ್ನು ಖರೀದಿಸಬಹುದು ಎಂದು ಹೇಳಿದೆ.



ಕಂಪನಿಗಳು ಮೊದಲೇ ಘೋಷಿಸಿರುವ ಬೆಲೆಯಲ್ಲಿ ಲಸಿಕೆಗಳನ್ನು ಖಾಸಗಿ ಆಸ್ಪತ್ರೆಗಳು, ಉದ್ದಿಮೆಗಳು ಖರೀದಿಸಬಹುದು. ಉದ್ದಿಮೆಗಳೂ ಲಸಿಕೆ ಕಾರ್ಯಕ್ರಮವನ್ನು ನಡೆಸಬಹುದು. ಖಾಸಗಿ ಆಸ್ಪತ್ರೆಗಳು ಪ್ರತಿ ಡೋಸ್ ಲಸಿಕೆ ನೀಡಲು ವಿಧಿಸುವ ಶುಲ್ಕವನ್ನು ಬಹಿರಂಗವಾಗಿ ಘೋಷಿಸಬೇಕು ಎಂದು ಕೇಂದ್ರ ಸರ್ಕಾರವು ಹೇಳಿದೆ.

ಇನ್ನಷ್ಟು ಸುದ್ದಿಗಳು 3, 9

ಮುಖ್ಯಾಂಶಗಳು

- ಮುಂಚೂಣಿಯ ಕೋವಿಡ್ ಕಾರ್ಯಕರ್ತರು ಮತ್ತು 45 ವರ್ಷ ಮೇಲ್ಪಟ್ಟವರಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆ ನೀಡಲಿದೆ. ಈ ಲಸಿಕೆ ಕಾರ್ಯಕ್ರಮ ಎಂದಿನಂತೆ ಮುಂದುವರಿಯಲಿದೆ
- ಆರೋಗ್ಯ ಕಾರ್ಯಕರ್ತರಿಗೆ ಮತ್ತು ಮುಂಚೂಣಿ ಕೋವಿಡ್ ಕಾರ್ಯಕರ್ತರಲ್ಲಿ ಈಗಾಗಲೇ ಮೊದಲ ಡೋಸ್ ಪಡೆದವರಿಗೆ, ಎರಡನೇ ಡೋಸ್ ನೀಡಲು ಆದ್ಯತೆ ನೀಡಲಾಗುತ್ತದೆ
- ರಾಜ್ಯಗಳಲ್ಲಿ ಕೋವಿಡ್ ಸಾಂಕ್ರಾಮಿಕದ ಮಟ್ಟವನ್ನು ನೋಡಿಕೊಂಡು ಕೇಂದ್ರ ಸರ್ಕಾರದಿಂದ ಲಸಿಕೆ ಪೂರೈಕೆ ಮಾಡಲಾಗುತ್ತದೆ. ರಾಜ್ಯ ಸರ್ಕಾರಗಳು ತಮ್ಮ ಲಸಿಕೆ ಪೋಲಿನ ಪ್ರಮಾಣವನ್ನೂ ಸೇರಿಸಿ, ಲಸಿಕೆಗೆ ಬೇಡಿಕೆ ಇಡಬೇಕು
- ಮೂರನೇ ಹಂತದ ಲಸಿಕೆ ಕಾರ್ಯಕ್ರಮವು ಮೇ 1ರಿಂದ ಜಾರಿಯಾದರೂ, ನಂತರದ ದಿನಗಳಲ್ಲಿ ಅಗತ್ಯ ಬದಲಾವಣೆ ಮಾಡಲಾಗುತ್ತದೆ
- 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲು ರಾಜ್ಯ ಸರ್ಕಾರಗಳಿಗೆ ಅನುಮತಿ ನೀಡಲಾಗಿದೆ. ರಾಜ್ಯ ಸರ್ಕಾರಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಲಸಿಕೆ ನೀಡಿಕೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬಹುದು. ಆದರೆ, ಲಸಿಕೆ ನೀಡಿಕೆ ಪ್ರಕ್ರಿಯೆಯನ್ನು ಕೋವಿನ್ ಅಪ್ಲಿಕೇಷನ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಈಗ ಜಾರಿಯಲ್ಲಿರುವ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು

ಆರಾಧನೆ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದರೂ ಚೈತಿ ಛಠ್ ಆಚರಣೆಯ ಅಂಗವಾಗಿ ಬಿಹಾರದ ಪಟ್ನಾದ ಗಂಗಾ ನದಿ ದಡದಲ್ಲಿ ಸೋಮವಾರ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು –ಪಿಟಿಐ ಚಿತ್ರ

15 ದಿನಗಳಲ್ಲಿ ಆಡಳಿತ ಹಸ್ತಾಂತರಿಸಲು ‘ಸುಪ್ರೀಂ’ ಸೂಚನೆ

ನ್ಯಾಯಮೂರ್ತಿ ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಗೋಕರ್ಣದ ದೇಗುಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ನಿರ್ವಹಣೆಯನ್ನು ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಒಪ್ಪಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರ್ಧರಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಮೂವರು ಸದಸ್ಯ ಪೀಠವು ಈ ಮಧ್ಯಂತರ ಆದೇಶ ಪ್ರಕಟಿಸಿದೆ.

ದೇಗುಲದ ನಿರ್ವಹಣೆಯನ್ನು ರಾಮಚಂದ್ರಾಪುರ ಮಠಕ್ಕೆ ಒಪ್ಪಿಸಿದ್ದ ರಾಜ್ಯ ಸರ್ಕಾರದ ಆದೇಶ ರದ್ದುಪಡಿಸಿ 2018ರ ಆಗಸ್ಟ್ 10ರಂದು ರಾಜ್ಯ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿದ್ದ ಮೇಲ್ಮನವಿಯ ವಿಚಾರಣೆ ಪೂರ್ಣಗೊಳಿಸಿದ ಪೀಠವು ಏಪ್ರಿಲ್ 7ರಂದು ಆದೇಶ ಕಾಯ್ದಿರಿಸಿತ್ತು.

ಪೀಠವು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯಾಗಿರುವ ಶ್ರೀಕೃಷ್ಣ ಅವರಿಗೆ ದೇಗುಲ ನಿರ್ವಹಣಾ ಸಮಿತಿಯ ನೇತೃತ್ವ ವಹಿಸಿದೆ. ಸಮಿತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕುಮಟಾದ ಸಹಾಯಕ ಆಯುಕ್ತರು, ಇಬ್ಬರು ತಜ್ಞರು ಹಾಗೂ ರಾಜ್ಯ ಸರ್ಕಾರ ನೇಮಿಸುವ ಇಬ್ಬರು ಉಪಾಧಿವಂತರು ಇರಲಿದ್ದಾರೆ.

8ನೇ ಪುಟ ನೋಡಿ



ಸುಪ್ರೀಂಕೋರ್ಟ್‌ನ ಮಧ್ಯಂತರ ತೀರ್ಪನ್ನು ನಾವು ಗೌರವಿಸುತ್ತೇವೆ. ಗೋಕರ್ಣದ ಮಹಾಬಲೇಶ್ವರ ದೇವಾಲಯದಿಂದ ಹಣ, ಅಧಿಕಾರ, ಪ್ರತಿಷ್ಠೆ ಇಂಥ ಯಾವ ಪ್ರತಿಫಲಾಪೇಕ್ಷೆಯೂ ನಮಗೆ ಇರಲಿಲ್ಲ. ಇದನ್ನು ಕೇವಲ ಸೇವೆಯ ಸಾಧನವಾಗಿ ನಾವು ಪರಿಗಣಿಸಿದ್ದೆವು. ಪರಂಪರೆಯ ಸಂಬಂಧ ಇರುವುದರಿಂದ ಮತ್ತು ಸಮಾಜದ ಹಿತಕ್ಕಾಗಿ ಮಠವು ಗೋಕರ್ಣ ದೇವಾಲಯದ ವಿಷಯದಲ್ಲಿ ಕಾನೂನು ಹೋರಾಟ ಕೈಗೆತ್ತಿಕೊಂಡಿತ್ತು. ಇದನ್ನು ಮುಂದುವರಿಸಲಿದೆ

ರಾಘವೇಶ್ವರಭಾರತೀ ಸ್ವಾಮೀಜಿ, ರಾಮಚಂದ್ರಾಪುರ ಮಠ



ಗೋಕರ್ಣದ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಪ್ರತಿ ಇನ್ನೂ ನಮ್ಮ ಕೈಸೇರಿಲ್ಲ. ತೀರ್ಪನ್ನು ನಮ್ಮ ಅಧಿಕಾರಿಗಳು ಮತ್ತು ಕಾನೂನು ತಜ್ಞರು ಅಧ್ಯಯನ ಮಾಡುತ್ತಾರೆ. ಆ ಬಳಿಕವೇ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ದೇವಸ್ಥಾನದ ಆಡಳಿತ ನಿರ್ವಹಣೆಗೆ ಸಮಿತಿ ನೇಮಕ ಸೇರಿದಂತೆ ನ್ಯಾಯಾಲಯ ಏನೆಲ್ಲಾ ಹೇಳಿದೆ ಎಂಬುದರ ಪೂರ್ಣ ಮಾಹಿತಿ ಇನ್ನೂ ತಮಗೆ ತಿಳಿದಿಲ್ಲ

ಕೋಟ ಶ್ರೀನಿವಾಸ ಪೂಜಾರಿ, ಮುಜರಾಯಿ ಸಚಿವ

‘ಸತ್ಯಕ್ಕೆ ಸಂದ ಜಯ’

ಕಾರವಾರ: ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ ನಿರ್ವಹಣೆ ವಿಚಾರದಲ್ಲಿ ಸುಪ್ರೀಂಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ಅರ್ಜಿದಾರರಾದ ಮೂಲ ಉಪಾಧಿವಂತರು ಸೋಮವಾರ ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು.

‘ಮಹಾಬಲೇಶ್ವರ ದೇವಸ್ಥಾನ ಮೊದಲಿನಿಂದಲೂ ಸ್ವತಂತ್ರವಾಗಿತ್ತು. ಅದೇ ರೀತಿ, ಸಾರ್ವಜನಿಕವಾಗಿಯೇ ಇರಬೇಕೆಂಬುದು ನಮ್ಮ ಅಭಿಪ್ರಾಯವಾಗಿತ್ತು. ನ್ಯಾಯಾಲಯವು ಇದನ್ನು ಮಾನ್ಯ ಮಾಡಿದ್ದು ತುಂಬಾ ಸಂತಸ ಉಂಟುಮಾಡಿದೆ’ ಎಂದು ಶ್ರೀಕ್ಷೇತ್ರ ಗೋಕರ್ಣ ರಕ್ಷಣಾ ಸಮಿತಿ ಅಧ್ಯಕ್ಷ ಗಣಪತಿ ಗಜಾನನ ಹಿರೇ ಪ್ರತಿಕ್ರಿಯಿಸಿದರು.

‘ರಾಮಚಂದ್ರಾಪುರ ಮಠವು ಸುಳ್ಳು ದಾಖಲೆ ಸೃಷ್ಟಿಸಿ ದೇವಸ್ಥಾನವನ್ನು ಹಸ್ತಾಂತರಿಸಿಕೊಂಡಿತ್ತು. ಆದರೆ, ಹಸ್ತಾಂತರ ಆದೇಶವನ್ನು ಸುಪ್ರೀಂಕೋರ್ಟ್ ಪುರಸ್ಕರಿಸದಿರುವುದು ಸತ್ಯಕ್ಕೆ ಸಂದ ಜಯವಾಗಿದೆ’ ಎಂದು ಅರ್ಜಿದಾರ ಬಾಲಚಂದ್ರ ದೀಕ್ಷಿತ್ ಅಭಿಪ್ರಾಯ ವ್ಯಕ್ತಪಡಿಸಿದರು.

‘ಅಂಗನವಾಡಿ: ವಿದ್ಯುತ್, ಫ್ಯಾನ್ ಒದಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲಾ 65,911 ಅಂಗನವಾಡಿಗಳಿಗೆ ವಿದ್ಯುತ್ ಸಂಪರ್ಕ ಮತ್ತು ಫ್ಯಾನ್‌ಗಳನ್ನು ಒದಗಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

33,164 ಅಂಗನವಾಡಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕ, 26,560 ಅಂಗನವಾಡಿಗಳಿಗೆ ಫ್ಯಾನ್‌ಗಳನ್ನು ಪೂರೈಸಲಾಗಿದೆ. 44,225 ಕೇಂದ್ರಗಳಲ್ಲಿ ಶೌಚಾಲಯ ಇದೆ ಎಂದು ಸರ್ಕಾರ ಮೆಮೊ ಸಲ್ಲಿಸಿತ್ತು.



ಇದನ್ನು ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘ಈ ಅಂಕಿ–ಅಂಶಗಳು ಆಘಾತಕಾರಿ ಸ್ಥಿತಿಯನ್ನು ಚಿತ್ರಿಸುತ್ತವೆ’ ಎಂದು ಅಭಿಪ್ರಾಯಪಟ್ಟಿತು.

‘ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಇರಬೇಕು. ಬಾಲಕರು, ಬಾಲಕಿಯರು ಮತ್ತು ಅಂಗವಿಕಲ ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಬೇಕು. ಈ ಶಿಫಾರಸನ್ನು ಸರ್ಕಾರ ಗಮನಿಸಬೇಕು’ ಎಂದು ಪೀಠ ಹೇಳಿತು.

‘ಕೊಳೆಗೇರಿಗಳಿಗೆ 100 ಮತ್ತು ನಗರ ಪ್ರದೇಶಕ್ಕೆ 350 ಅಂಗನವಾಡಿಗಳನ್ನು ಮಂಜೂರು ಮಾಡಲಾಗಿದೆ. ಹೆಚ್ಚುವರಿಯಾಗಿ ಇನ್ನೂ 4,244 ಅಂಗನವಾಡಿಗಳಿಗೆ ಬೇಡಿಕೆ ಇದೆ. ಸ್ವಚ್ಛ ಭಾರತ ಯೋಜನೆಯಡಿ 3,219 ಶೌಚಾಲಯಗಳನ್ನು ನಿರ್ಮಿಸಲಾಗಿದೆ’ ಎಂದು ಸರ್ಕಾರ ವಿವರಣೆ ಸಲ್ಲಿಸಿತು.

‘ಕೊಳೆಗೇರಿ ಮತ್ತು ಎಸ್‌ಸಿ/ಎಸ್‌ಟಿ ಜನಸಂಖ್ಯೆ ಹೆಚ್ಚಿರುವ ಅಂಗನವಾಡಿಗಳಲ್ಲಿ ಕುಡಿಯಲು ಶುದ್ಧ ಮತ್ತು ಬಿಸಿನೀರು ಪೂರೈಸಬೇಕು ಎಂಬ ಶಿಫಾರಸನ್ನು ಸರ್ಕಾರ ಪಾಲಿಸಿಲ್ಲ’ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

ಬೆಂಗಳೂರು ನಗರದಲ್ಲಿ ಹೆಚ್ಚಿನ ಸಂಖ್ಯೆಯ ಅಂಗವಾಡಿಗಳನ್ನು ತೆರೆಯಬೇಕು. ಈ ಎಲ್ಲಾ ನಿರ್ದೇಶನಗಳನ್ನು ಪಾಲಿಸಿರುವ ಸಂಬಂಧ ಅನುಸರಣಾ ಅಫಿಡವಿಟ್ ಸಲ್ಲಿಸುವಂತೆ ತಿಳಿಸಿದ ಪೀಠ, ವಿಚಾರಣೆಯನ್ನು ಜೂ.11ಕ್ಕೆ ಮುಂದೂಡಿತು.

ನಿಘಂಟು ತಜ್ಞ ವೆಂಕಟಸುಬ್ಬಯ್ಯ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಘಂಟು ತಜ್ಞರೆಂದೇ ಪ್ರಸಿದ್ಧಿ ಹೊಂದಿದ್ದ ಖ್ಯಾತ ಭಾಷಾ ತಜ್ಞ, ಶತಾಯುಷಿ ಪ್ರೊ.ಜಿ. ವೆಂಕಟಸುಬ್ಬಯ್ಯ (108) ಅವರು ಭಾನುವಾರ ತಡರಾತ್ರಿ 1.15ಕ್ಕೆ ನಿಧನರಾದರು. ಅವರಿಗೆ ಒಬ್ಬ ಪುತ್ರ ಹಾಗೂ ಪುತ್ರಿ ಇದ್ದಾರೆ.

ಒಂದು ವಾರದ ಹಿಂದೆ ಮೂತ್ರನಾಳದ ಸೋಂಕಿಗೆ ಒಳಗಾಗಿದ್ದ ಅವರನ್ನು ಜಯನಗರದ 7ನೇ ಬ್ಲಾಕ್‌ನಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸಿದ್ದ ಅವರು, ಸಮಸ್ಯೆಯಿಂದ ಪೂರ್ಣಪ್ರಮಾಣದಲ್ಲಿ ಚೇತರಿಸಿಕೊಂಡಿದ್ದರು. ಅವರನ್ನು ಸೋಮವಾರ ಮನೆಗೆ ಕರೆದೊಯ್ಯುವಂತೆ ವೈದ್ಯರು ಸೂಚಿಸಿದ್ದರು. ಆದರೆ, ಭಾನುವಾರ ತಡರಾತ್ರಿ ಉಸಿರಾಟ ಸೇರಿದಂತೆ ವಯೋಸಹಜ ಸಮಸ್ಯೆಯಿಂದ ಮೃತಪಟ್ಟಿದ್ದಾರೆ.

ಮಧ್ಯಾಹ್ನ 1.30ಕ್ಕೆ ವಿಲ್ಸನ್ ಗಾರ್ಡನ್‌ನ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಅವರ ಪತ್ನಿ ಮೂರುವರ್ಷದ ಹಿಂದೆ ನಿಧನ ಹೊಂದಿದ್ದರು. ಕೆಲ ವರ್ಷಗಳ ಹಿಂದೆ ಅವರ ನಾಲ್ವರು ಮಕ್ಕಳ ಪೈಕಿ ಒಬ್ಬ ಪುತ್ರ ಹಾಗೂ ಪುತ್ರಿ ಮೃತಪಟ್ಟಿದ್ದರು.

ಪ್ರೊ.ಜಿ. ವೆಂಕಟಸುಬ್ಬಯ್ಯ

ವೆಂಕಟಸುಬ್ಬಯ್ಯ ಅವರು ಕನ್ನಡದ ನಿಘಂಟುಶಾಸ್ತ್ರ, ಪ್ರಾಚೀನ ಸಾಹಿತ್ಯ ಅಧ್ಯಯನ, ಅನುವಾದ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಕನ್ನಡ ಭಾಷೆ ಅಥವಾ ಪದಗಳ ಅರ್ಥ ವಿವರಣೆಗೆ ಹಾಗೂ ಭಾಷೆಗೆ ಸಂಬಂಧಿಸಿದ ಗೊಂದಲಗಳ ನಿವಾರಣೆಗೆ ಇಂದಿಗೂ ಅವರು ರಚಿಸಿದ ಕೃತಿಗಳನ್ನೇ ಆಧಾರವಾಗಿ ಬಳಸಲಾಗುತ್ತಿದೆ.

‘ಪ್ರಜಾವಾಣಿ’ಯಲ್ಲಿ ಅವರು ಬರೆಯುತ್ತಿದ್ದ ‘ಇಗೋ ಕನ್ನಡ’ ಅಂಕಣ ಪ್ರಸಿದ್ಧಿ ಪಡೆದಿತ್ತು. ಈ ಅಂಕಣದ ಮೂಲಕ ಅವರು ಭಾಷಾ ಬಳಕೆಗೆ ಸಂಬಂಧಿಸಿದ ಗೊಂದಲಗಳನ್ನು ಬಗೆಹರಿಸಲು ನೆರವಾಗಿದ್ದರು. ಭಾಷೆಗೆ ನೀಡಿದ ಕೊಡುಗೆಗಾಗಿ ಅವರಿಗೆ 2017ರಲ್ಲಿ ‘ಪದ್ಮಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

1913ರಲ್ಲಿ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಕೈಗೊನಹಳ್ಳಿಯಲ್ಲಿ ಜನಿಸಿದರು. ಅನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸುವರ್ಣ ಪದಕದೊಡನೆ ಎಂ.ಎ. ಪದವಿ, ನಂತರ ಬಿ.ಟಿ. ಪದವಿ ಪಡೆದಿದ್ದರು. ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ ಅವರು, ನಂತರ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು.

‘ನಡೆದಾಡುವ ನಿಘಂಟು’, ‘ಶಬ್ದ ಬ್ರಹ್ಮ’ ಎಂದು ಜನಜನಿತರಾಗಿದ್ದ ಅವರು, ಸಾಹಿತ್ಯ ವಿಮರ್ಶೆ, ಸಂಶೋಧನೆ, ಅನುವಾದ, ನಿಘಂಟು ರಚನೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

7ನೇ ಪುಟ ನೋಡಿ
ನುಡಿ ನಮನ 7

‘ಎನ್.ಗಿರಿಯಪ್ಪ, ಗುರುಮೂರ್ತಿ ನೇತೃತ್ವದ ಬಣವೇ ಮೂಲ ಸಂಘಟನೆ’

ದಲಿತ ಸಂಘರ್ಷ ಸಮಿತಿ ಬಣಗಳ ವಿವಾದಕ್ಕೆ ತೆರೆ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಎನ್.ಗಿರಿಯಪ್ಪ, ಎಂ.ಗುರುಮೂರ್ತಿ, ಡಾ.ಸಣ್ಣರಾಮ ನೇತೃತ್ವದ ಬಣವೇ ಮೂಲ ‘ಕರ್ನಾಟಕ ದಲಿತ ಸಂಘರ್ಷ ಸಮಿತಿ’ ಎಂದು ಭದ್ರಾವತಿ ನಾಲ್ಕನೇ ಹೆಚ್ಚುವರಿ ನ್ಯಾಯಾಲಯ ಆದೇಶ ನೀಡಿದ್ದು, ಇತರೆ ಸಂಘಟನೆಗಳು ಹೆಸರು ಬಳಸುವುದರ ಮೇಲೆ ನಿರ್ಬಂಧ ವಿಧಿಸಿದೆ.

ರಾಜ್ಯದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹೆಸರಲ್ಲಿ ಹಲವು ಬಣಗಳಿವೆ. ಇತರೆ ಬಣಗಳು ಹೆಸರು ಬಳಸುವುದು, ಸಮಾವೇಶ ನಡೆಸುವುದು, ಪತ್ರ ವ್ಯವಹಾರ, ಸಾಮಾನ್ಯ ಸಭೆ ಕರೆಯುವುದು ಕಾನೂನುಬಾಹಿರ ಎಂದು ಆದೇಶಿಸಲಾಗಿದೆ.

ಭದ್ರಾವತಿಯ ಸರ್ ಎಂ.ವಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಪ್ರೊ.ಬಿ.ಕೃಷ್ಣಪ್ಪ ಅವರು ಸಮಾಜವಾದಿ ಯುವಜನ ಸಭಾದಿಂದ ಹೊರಬಂದು 1974ರಲ್ಲಿ ದಲಿತ ಲೇಖಕರು, ಕಲಾವಿದರ (ದಲೇಕ) ಸಮಾವೇಶ ನಡೆಸಿದ್ದರು. ಸಮಾವೇಶದ ನಿರ್ಣಯದಂತೆ ಅಸ್ಪೃಶ್ಯತೆ, ಶೋಷಣೆ, ಕಡೆಗಣನೆಗೆ ಒಳಗಾದ ಜನರು,

ಸಂಸ್ಥಾಪಕ ಅಧ್ಯಕ್ಷರಾಗಿದ್ದ ಗಿರಿಯಪ್ಪ ನೇತೃತ್ವದಲ್ಲಿ ಕಾನೂನು ಹೋರಾಟ ನಡೆಸಿದೆವು. ಈಗ ಅವರಿಲ್ಲ. ನನ್ನ ನೇತೃತ್ವದಲ್ಲೇ ಸಮಿತಿ ಮುಂದುವರಿಯಲಿದೆ

ಎಂ.ಗುರುಮೂರ್ತಿ, ರಾಜ್ಯ ಸಂಚಾಲಕ, ಕದಸಂಸ

ನೊಂದವರು, ಬಡವರ ಪರ ಹೋರಾಟ ನಡೆಸಲು, ಅವರ ಬದುಕಿಗೆ ಬೆಳಕಾಗಲು ದಲಿತ ಸಂಘರ್ಷ ಸಮಿತಿ ಸ್ಥಾಪಿಸಲಾಗಿತ್ತು. ಈ ಸಮಿತಿ 1975ರಲ್ಲಿ ನೋಂದಣಿಯಾಗಿತ್ತು. ಮೊದಲ ಅಧ್ಯಕ್ಷರಾಗಿ ಭದ್ರಾವತಿ ವಿಐಎಸ್‌ಎಲ್ ಕಾರ್ಮಿಕ ಮುಖಂಡ ಗಿರಿಯಪ್ಪ, ಕಾರ್ಯದರ್ಶಿಯಾಗಿ ಪ್ರೊ.ಕೃಷ್ಣಪ್ಪ ನೇಮಕಗೊಂಡಿದ್ದರು. ಮೊದಲು ಪರಿಶಿಷ್ಟ ಜಾತಿಯ ಹಾಸ್ಟೆಲ್‌ಗಳಿಗೆ ಸೀಮಿತವಾಗಿದ್ದ ಕಾರ್ಯಚಟುವಟಿಕೆ ನಂತರ ರಾಜ್ಯದ ನಗರ, ಪಟ್ಟಣ, ಹಳ್ಳಿಗಳಿಗೂ ವಿಸ್ತರಿಸಿದ್ದು ಈಗ ಇತಿಹಾಸ.

ನ್ಯಾಯಾಲಯಕ್ಕೆ ಸರಿಯಾಗಿ ವಾಸ್ತವ ಮನವರಿಕೆ ಮಾಡಿಕೊಡದ ಕಾರಣ ಹಿನ್ನಡೆಯಾಗಿದೆ. ಎಲ್ಲರ ಜತೆ ಚರ್ಚಿಸಿ ಮೇಲ್ಮನವಿ ಸಲ್ಲಿಸುವ ಕುರಿತು ಶೀಘ್ರ ನಿರ್ಧರಿಸಲಾಗುವುದು

ಆಲೂರು ನಿಂಗರಾಜ್
ದಾವಣಗೆರೆ ದಲಿತ ಸಮಾವೇಶದ ಸಂಚಾಲಕ

1996ರ ನಂತರ ಕೃಷ್ಣಪ್ಪ ಅವರ ನೇತೃತ್ವದ ದಸಂಸ ಬಿಎಸ್‌ಪಿ ಜತೆ ರಾಜಕೀಯ ಹೊಂದಾಣಿಕೆ ಮಾಡಿಕೊಂಡಿದ್ದನ್ನು ವಿರೋಧಿಸಿ ಡಿ.ಜಿ. ಸಾಗರ್ ನೇತೃತ್ವದಲ್ಲಿ ಕೆಲವರು ಪ್ರತ್ಯೇಕ ಬಣ ರಚಿಸಿಕೊಂಡಿದ್ದರು. ಅಲ್ಲಿಂದ ಆರಂಭವಾದ ವಿಘಟನೆಯ ಪರ್ವ ನಿರಂತರವಾಗಿ ಮುಂದುವರಿದು ಇಂದು ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯ ಹಲವು ಬಣಗಳು ಅಸ್ತಿತ್ವದಲ್ಲಿವೆ. ಮೊದಲು ಸಮಿತಿಯ ಪದಾಧಿಕಾರಿಗಳನ್ನು ಅಧ್ಯಕ್ಷ, ಕಾರ್ಯದರ್ಶಿ ಎಂದೇ ನಮೂದಿಸಲಾಗುತ್ತಿತ್ತು. ನಂತರ ಸಮಿತಿಯ ಬೈಲಾಗೆ ತಿದ್ದುಪಡಿ ತಂದು ಸಂಚಾಲಕ ಪದ ಬಳಕೆ ಆರಂಭಿಸಲಾಗಿತ್ತು.

ಸಮಿತಿಯ ಹಲವು ಬಣಗಳು ಒಗ್ಗೂಡಿ ದಾವಣಗೆರೆಯಲ್ಲಿ 2009ರಲ್ಲಿ ಸಾಮಾನ್ಯ ಸಭೆ, 2011ರಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಸಿದ್ದವು. ಸಮಾವೇಶದ ನಂತರ ತಮ್ಮದೇ ನಿಜವಾದ ದಲಿತ ಸಂಘರ್ಷ ಸಮಿತಿ ಎಂದು ನವೀಕರಣಕ್ಕೆ ನೋಂದಣಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ದಾಖಲೆಗಳ ಪರಿಶೀಲನೆ ನಡೆಸಿದ್ದ ಅಧಿಕಾರಿಗಳು ಮೂಲ ಸಮಿತಿ ವಿವಾದ ಬಗೆಹರಿಸಿಕೊಳ್ಳಲು ನ್ಯಾಯಾಲಯದ ಮೊರೆಹೋಗಲು ಸೂಚಿಸಿದ್ದರು. ನಂತರ ಭದ್ರಾವತಿ ನ್ಯಾಯಾಲಯದಲ್ಲಿ ವಾದ, ಪ್ರತಿವಾದ ನಡೆದು ನ್ಯಾಯಾಧೀಶರಾದ ಸ್ನೇಹಾ ಆದೇಶ ಪ್ರಕಟಿಸಿದ್ದಾರೆ. ಪ್ರತಿವಾದಿಗಳಾದ ಹೆಣ್ಣೂರು ಶ್ರೀನಿವಾಸ್, ವೆಂಕಟಗಿರಿಯಯ್ಯ, ಭದ್ರಾವತಿ ಸತ್ಯ ಮತ್ತಿತರರ ಮನವಿಯನ್ನು ತಿರಸ್ಕರಿಸಿದ್ದಾರೆ.

ಎಸ್ಸೆಸ್ಸೆಲ್ಸಿ– ಪಿಯುಸಿ
ಪರೀಕ್ಷೆ ದೀಕ್ಷೆ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ...
ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರಜಾವಾಣಿ
Prajavani.net/podcast

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ | ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

NRI'S INVESTMENT And Finance Available OnLow Interest Against Properties,Land& Buildings,Sites, Flats (Also)Assist For Yojana Loans Call:7411265189

JOB OPPORTUNITIES

Multiple Vacancy

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS - 7676760299/ 7676760399

PERSONAL

Change of Name

I, VITTOBAI K residing at No.45, 5th Cross, 2nd Main Road, Nanjappa Layout, Vidyaranyapura post,Bangalore 560097.Have changed my name to VIJAYALAKSHMI T vide affidavit dated 09.04.2021 before notary K.C.Pemmaiah,Bangalore.Henceforth I shall be called as VIJAYALAKSHMI T Only

I, GAYAATHRI K.R d/o Raghu R.K, residing at No. 302, Wing-5, Balaji Lake side Marvel, BHCS Layout, Uttarahalli, Bangalore-560061, have changed my name to GAGANA K.R vide affidavit dated 30.03.2021, sworn before notary V. Srinivasa Reddy, Bengaluru.

I, FARHEEN ZEBA, residing at No.44, 3rd cross road, Ashwathnagar, RMV II Stage Extn., Bangalore-560094, have changed my name from FARHEEN ZEBA to FARHEEN ZEBA SIDDIQUE, vide affidavit dated 14/04/2021, sworn before Kundan Babu.M., Notary, Bangalore.

I, DIVYA .M W/o Hav Maruthupandi.S R/at CMP Centre & School, Bangalore-25, have changed my name from DIVYA .M to DIVYA vide affidavit dated:16.04.2021 before Notary Ganesh Gowda.M.V., Bangalore.

I, ANTHONY Sridhar R/O 79 Robertson Road Frazer town Bangalore 560005 have changed my name from Anthony Sridhar to Sridhar A vide affidavit no. IN-KA03063760423121T dated on 16/Apr/2021 and this name will consider for all future purpose

I SAJIT Gangadharan r/o #278, 6th cross, Rukmini Nagar, Nagasandra P.O has changed my son's name from Riyan Sajit to Achintya Sajit vide affidavit dt 17/04/2021 sworn before notary K V Mani, Bangalore

Lost

LOST
We N.Sridhara and Smt S. Bhageerathi have lost Original Sale Deed No. YAN-1-08114-2015-16, CD No. YAND-625, Book- 1, dated 24/03/2016 from HR Thimmappa Gowda And Sale Deed No. YAN-1-02834-2011-12, CD No. YAND-365, Book-1, dated 24-08-2011 from Karnataka Housing Board, Yelahanka.
If anybody found Call nearest police station or 9880611759

REAL ESTATE SELLING

Industrial & Factory

Bommasandra

SALE - Land @ KIADB Bommasandra Industrial Area, Approx. 1 Acre, Built up area 25,000 Sft, Contact: 07090186448

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

RENTAL PROPERTIES

Accommodation Available

Commercial

UPPER GROUND floor 1500sqft and 3000sqft, TOTAL 4500 SQFT. WITH 6000SQFT VACANT LAND, R.V. MAIN ROAD, NEAR LALBAGH WEST GATE, 45 FEET GLASS FRONTAGE WITH HORIZONTAL SAFETY GRILLS SUITABLE FOR DEPARTMENTAL STORES CONSUMER GOODS SHOW ROOMS OFFICES.RESTAURANTS.RESERVED PARKING PRESENT. CONTACT OWNER 9740854176

PUBLIC NOTICE

PUBLIC NOTICE

This is to inform the General Public that my client intended to purchase the Schedule Property from Sri Venkateshappa S/o Late Venkatashamappa, Sri Seenappa S/o Late Venkatashamappa, Sri Ramaiah S/o Late Venkata shamappa, Sri Ravi S/o Late Venkatashamappa, Sri Yallappa S/o Late Venkata shamappa and Smt. Laksh mamma D/o Late Venkata shamappa, Sri Suresh S/o Late Thimmaraju, Sri Udaya kumar S/o. Late Thimmaraju along with all their family members. In case any persons have any right, claims, and objections over the Schedule Property, please contact the below mentioned address with docu ments within 15 days from this notification.

SCHEDULE PROPERTY

All that piece and parcel of agri cultural land bearing Survey No. 14 measuring 08 Acres [out of totally measuring 17 Acres 32 Guntas and 02 Acres 39 Guntas of Kharab] situated at Gowdahalli Village, Madure Hobli, Dodda ballapur Taluka and Bangalore Rural District.

M/S HINDH GROUP
No.400, 1st Floor, 1st Block, 2nd Main Road, RT Nagar, Bengaluru -560032.
Ph:080 3343999, 9343422991

BASAVARAJ S HIREMATH, ADVOCATE,
No.33, First Floor, Grand, Majestic Mall, 2nd Cross, 6th Main Gandhinagar, Bengaluru-560009.
Mobile: 9483585922.

PUBLIC NOTICE

My client has entered into a memorandum of understanding for joint Development Agreement in respect of the immovable property described in the Schedule hereunder with its owners **1. Mrs. VANAJAKSHMAMMA,** aged about 62 years, wife of Mr. S. G. Srinivasa Reddy, **2. Mr. S. G. SRINIVASA REDDY,** aged about 71 years, son of late Mr. D. Chinnappa Reddy and **3. Mr. GURUPRASAD.S. S.** aged about 20 years, son of Mr. S. G. Srinivasa Reddy, all residing at No.210-1, 3rd Main, 5th Cross, Thippasandra, Bangalore-560 075, who have represented that they are the absolute owners of the Schedule property and other than themselves no others person/s has/have got any right, title, interest or charge over the same.

Any persons / firms/ companies/ financial institutions having any claim, right, title, interest or any objection/s by way of inheritance, share, sale, mortgage, transfer, lease, tenancy, lien, charge, maintenance, easement, possession, gift, encumbrance or otherwise and/or opposing the Joint Development in whatsoever manner may lodge his/her/ their/objection/s with relevant documentary proof to the undersigned within **FIFTEEN DAYS** from the date of publication of this notice, failing which it will be presumed that no other person/s has got any claim, right, title, interest or charge over the Schedule property and if any objection/s thereafter will not be considered and my client will proceed to complete the Joint Development agreement.

SCHEDULE

All that piece and parcel of the immovable property being land with building bearing Khanesumari No.80 & 81, H.L. Katha No.11/1&2, present BBMP Katha No.117/426/406/ 11/1/2, situated at Bommanahalli Village, Begur Hobli, Bangalore South Taluk, now coming under Bruhat Bangalore Mahanagara Palike ward No.175, Bangalore and bounded on the: East by: Road; West by: Private property; North by: Road; and South by: Property belongs to Mr. Srinivasa Reddy; measuring East to West 80 feet; North to South 110 feet, in all measuring a total extent of 8800 square feet. The schedule property consists of the old buildings to be demolished before the execution of the Joint development Agreement.

A. NAGARAJA,
Advocate,
No. 6, KHB Buildings,
II Block, 13th Cross,
Indiranagar II Stage,
Bangalore - 560 038.
Ph. 080 -25297511 / 9448067511.
Bangalore.
Dated: 19.04.2021.

PUBLIC NOTICE

This is to inform the general public that, my client B.E.VIJAYA KUMAR @ E. VIJAYA CHANDRA SALA, S/o. Sri. B.S.Eraiah - GPA Holder, residing at #77 to 81, Cottonpet Main Road, Bengaluru-560053, that my client has lost the Lock Keys of 77 & 80 Katha Properties. To the knowledge of my client S.Shiva & Gang have stolen keys and trespassed into 77 & 80 properties made fraud and bogus documents and alienating these properties and this notice to the gang to surrender the keys within 3 days from the date of this Notice to my client or the undersigned, otherwise will be prosecuted in accordance with law.

Sd/- NAGARAJA. B.V., B.A., LL.B., Advocate
2, Lakshmi Venkateshwara Complex, Old Madras Road, Budigere Cross, Bengaluru - 560049,
Mob: 9449771074, 8431268395

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR PROPERTY TEXT AD FOR SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಐಐಎಂಬಿ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಿನ ಪೀಳಿಗೆಯು ಹಿಂದಿನ ಪೀಳಿಗೆಗಿಂತ ಹೆಚ್ಚು ಜಾಗತಿಕ ವಿಚಾರ ಹಾಗೂ ತಂತ್ರಜ್ಞಾನದ ತಿಳಿವಳಿಕೆ ಹೊಂದಿದೆ. ಐಐಎಂಬಿಯಲ್ಲಿರುವ ಪ್ರೇರಕ ಮನಸ್ಸುಗಳಿಂದ ಇದು ಸಾಧ್ಯವಾಗಿದೆ' ಎಂದು ಐಐಎಂಬಿ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಅರವಿಂದ ಕೃಷ್ಣ ಅಭಿಪ್ರಾಯಪಟ್ಟರು.

ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ಐಐಎಂ ನಿರ್ದೇಶಕ ಪ್ರೊಫೆಸರ್ ರಿಷಿಕೇಶ ಟಿ.ಕೃಷ್ಣನ್, 'ಕೋವಿಡ್ ಅಡೆತಡೆಗಳ ನಡುವೆಯೂ ಸಂಸ್ಥೆಯ 2021ನೇ ತಂಡದ ವಿದ್ಯಾರ್ಥಿಗಳು ಹೆಸರಾಂತ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ. ನಿಮ್ಮ ಯಶಸ್ಸು ನಿರ್ಧಾರವಾಗುವುದು ನಿಮ್ಮ ಬುದ್ಧಿಶಕ್ತಿ, ಅನುಭವ ಹಾಗೂ ಪದವಿ ಅಲ್ಲ. ಜೀವನದುದ್ದಕ್ಕೂ ಕಲಿಯುತ್ತಲೇ ಇರಬೇಕು ಎಂಬ ಹಂಬಲವು ನಿಮ್ಮ ಯಶಸ್ಸನ್ನು ನಿರ್ಧರಿಸುತ್ತದೆ' ಎಂದರು.

ನಿರ್ದೇಶಕ ಮಂಡಳಿಯ ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ,'ದೇಶದ ಪ್ರಭಾವಶಾಲಿ ನಿರ್ವಹಣಾ ಚಿಂತಕರಲ್ಲಿ ಒಬ್ಬರಾದ ರಿಷಿಕೇಶ ಕೃಷ್ಣನ್ ಅವರು ಇಂದೋರ್‌ನ ಐಐಎಂನಲ್ಲಿ ನಿರ್ದೇಶಕರಾಗಿ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿ, ಪ್ರಸ್ತುತ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದರು.

ಸಂಸ್ಥೆಯ ಪಿಎಚ್‌.ಡಿ, ಪಿಜಿಪಿ, ಇಪಿಜಿಪಿ, ಪಿಜಿಪಿಇಎಂ, ಪಿಜಿಪಿಪಿಎಂ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಉತ್ತಮ ಸಾಧನೆ ಮಾಡಿದಂತ ಒಟ್ಟು 624 ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಪದವಿ ಪ್ರದಾನ ಮಾಡಲಾಯಿತು.

ಆ್ಯಂಟ್ ಸಮೂಹದಿಂದ ಜಾಕ್ ಮಾ ಹೊರಕ್ಕೆ ?

ಹಾಂಗ್‌ಕಾಂಗ್ (ರಾಯಿಟರ್ಸ್): ಆ್ಯಂಟ್ ಸಮೂಹವು ತನ್ನ ಸಂಸ್ಥಾಪಕ ಜಾಕ್ ಮಾ ಅವರಿಗೆ ಸಮೂಹದಿಂದ ಹೊರನಡೆಯಲು, ತಮ್ಮ ಪಾಲುದಾರಿಕೆಯನ್ನು ಮಾರಾಟ ಮಾಡಲು, ಕಂಪನಿಯ ಮೇಲಿನ ನಿಯಂತ್ರಣ ಬಿಟ್ಟುಕೊಡಲು ಮಾರ್ಗಗಳನ್ನು ಅರಸುತ್ತಿದೆ! ಪೀಪಲ್ಸ್ ಬ್ಯಾಂಕ್ ಆಫ್ ಚೀನಾ (ಪಿಬಿಒಸಿ) ಹಾಗೂ ಚೀನಾ ಬ್ಯಾಂಕಿಂಗ್ ಮತ್ತು ವಿಮಾ ನಿಯಂತ್ರಣ ಆಯೋಗದ (ಸಿಬಿಐಆರ್‌ಸಿ) ಅಧಿಕಾರಿಗಳು ಮಾ ಹಾಗೂ ಆ್ಯಂಟ್ ಕಂಪನಿ ಜೊತೆ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ. ಮಾ ಅವರನ್ನು ಕಂಪನಿಯಿಂದ ಹೊರಗೆ ಕಳುಹಿಸುವ ಸಾಧ್ಯತೆಗಳ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಮಾ ಅವರ ಷೇರು ಪಾಲನ್ನು ಅವರಿಂದ ಹಿಂದಕ್ಕೆ ಪಡೆಯುವ ಬಗ್ಗೆ ಚರ್ಚೆಯೇ ನಡೆದಿಲ್ಲ ಎಂದು ಆ್ಯಂಟ್ ಸಮೂಹ ಪ್ರತಿಕ್ರಿಯೆ ನೀಡಿದೆ. 'ಮಾ ಅವರ ಷೇರುಗಳನ್ನು ಕಂಪನಿಯ ಹಾಲಿ ಹೂಡಿಕೆದಾರರಿಗೆ ಮಾರಾಟ ಮಾಡಬಹುದು ಎಂಬುದು ಕಂಪನಿ ಹೊಂದಿರುವ ಧೋರಣೆ' ಎಂದು ಮೂಲವೊಂದು ಹೇಳಿದೆ. 'ಮಾ ತಮ್ಮ ಷೇರುಗಳನ್ನು ಸರ್ಕಾರದ ಜೊತೆ ಗುರುತಿಸಿಕೊಂಡ ಚೀನಾದ ಹೂಡಿಕೆದಾರರೊಬ್ಬರಿಗೆ ವರ್ಗಾಯಿಸಬಹುದು. ಮಾ ಕಂಪನಿಯಿಂದ ಸಂಪೂರ್ಣವಾಗಿ ಹೊರ ನಡೆಯಬೇಕು ಎಂಬುದನ್ನು ಸ್ಪಷ್ಟಪಡಿಸಲಾಗಿದೆ' ಎಂದು ಇನ್ನೊಂದು ಮೂಲ ಹೇಳಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ
ಕೆ.ಎನ್.ಟಿ.ಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ–563102
ಸಂಖ್ಯೆ: ಡಿಹೆಚ್‌ಸ್/ಕೋ/ಹೊ.ಗು/01/2020–21 ದಿನಾಂಕ: 19–04–2021

E-PROCUREMENT SHORT TERM RE-TENDAR NOTIFICATION

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಕೋಲಾರ ಜಿಲ್ಲೆ ಇಲ್ಲಿಗೆ ಎನ್‌ಹೆಚ್‌ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಿಗೆ ಅನುಮೋದನೆ–ಯಾಗಿರುವ ಸಿಬ್ಬಂದಿಯನ್ನು ಹೊರ ಸಂಪನ್ಮೂಲ ಸಂಸ್ಥೆಯಿಂದ 2020–21ನೇ ಸಾಲಿಗೆ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ E-Procurement ಮೂಲಕ ಅಲ್ಪಾವಧಿ ಮರು ಟೆಂಡರ್ ಪಡೆಯುವ ಬಗ್ಗೆ.

(1) ಟೆಂಡರ್‌ದಾರರು E-Portal ಮೂಲಕ ಟೆಂಡರ್ ಸಲ್ಲಿಸುವುದು, ಈ ಬಗ್ಗೆ ಟೆಂಡರ್ ದಾರರಿಗೆ ನಿಗಧಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದ್ದು. (2) ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ: 19.04.2021 ರಿಂದ ದಿನಾಂಕ:03.05.2021 ರ ಸಂಜೆ 05:00 ಗಂಟೆಯೊಳಗೆ** ಡೌನ್‌ಲೋಡ್ ಮಾಡಿ ಆನ್‌ಲೈನ್ ಮುಖಾಂತರ ಸಲ್ಲಿಸುವುದು. (3) ಟೆಂಡರ್‌ದಾರರು ಇಎಂಡಿ ವಿನಾಯಿತಿ ಇರುವುದರಿಂದ EMD Declaration ನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. (4) ಟೆಂಡರ್ ಡಾಕ್ಯೂಮೆಂಟ್ E-Portal ಮುಖಾಂತರ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 03.05.2021 ರ ಸಂಜೆ 5.00 ಗಂಟೆ** (5) ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ ಕೋಲಾರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಶಿರಡಿ ಸಾಯಿ/24/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

GOVERNMENT OF KARNATAKA
National Health Mission
Karnataka State Health & Family Welfare Society®
Arogya Soudha, Magadi Road, Leprosy Hospital Campus, Bengaluru – 560 023
Contact No: 080-29548383, 080-23113522
Email id: cfo-nhm@karnataka.gov.in, cfonhmkar@gmail.com

F.No. NHM/FMG/CFO/05/2021-22 Date:19.04.2021

SELECTION OF AUDITORS - REQUEST FOR PROPOSAL
HIRING SERVICES OF CHARTERED ACCOUNTANT FIRM FOR STATUTORY AUDIT OF STATE HEALTH SOCIETY (SHS) & DISTRICT HEALTH SOCIETY (DHS) (FOR THE FINANCIAL YEAR 2020-21) under National Health Mission (NHM)

Govt of India (GoI) in partnership with the State of Karnataka is implementing the National Health Mission in Karnataka which comprises of various programs, with the objective of improving medical facilities in the areas and seeks to provide accessible, affordable and quality health care to the population, especially the vulnerable sections. To facilitate implementation of NHM, State and District level entities (Health Societies) have been registered which work under the administrative control of the Department of Health & Family Welfare. The Karnataka State Health and Family Welfare Society®, invites "Proposal for audit" from **firms of Chartered Accountants empanelled with C& AG and eligible for major PSUs audit for the year 2020-21.**

Minimum payable fees for Audit (Consolidated Audit fees) will be Rs. 4,11,666

Detailed RFP: Detailed Request for Proposal (RFP) comprising Background, Terms of Reference (ToR) and Guidelines for submitting the proposal can be either downloaded from the state's website **https://karunadu.karnataka.gov.in/hfw/Pages/home.aspx** or this can be collected from the National Health Mission, Karnataka State Health & Family Welfare Society®, Arogya Soudha, 2nd Floor - West Wing, Magadi Road, Leprosy Hospital Campus, Bengaluru – 560 023, between 10.30 AM and 5.30 PM.

Important Dates:

I. Last date for collection of RFP: From 20.04.2021 to 30.04.2021
ii. Date for pre-bid conference: 26.04.2021
iii. Last date for submission of Proposal to SHS: 05.05.2021
iv. Date of opening of financial bid: 07.05.2021

Venue for Pre-bid Conference: Pre-bid Conference would be held at Office of the Project Director (RCH), National Health Mission, Arogya Soudha, 1st Floor- East Wing, Magadi Road, Leprosy Hospital Campus, Bengaluru – 560 023

(Sd/-) Mission Director
National Health Mission
Karnataka State Health and Family Welfare Society®

DIPR/DDU/196/2021-22

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ಕೆಎಸ್‌ಪಿಸಿಬಿ, ಪೊಲೀಸ್ ಕಮಿಷನರ್‌ಗೆ ಹೈಕೋರ್ಟ್ ನಿರ್ದೇಶನ

ಶಬ್ದಮಾಲಿನ್ಯ: ಕ್ರಮದ ವಿವರ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಬ್ದ ಮಾಲಿನ್ಯದ ದೂರುಗಳ ಆಧಾರದ ಮೇಲೆ ಕೈಗೊಂಡ ಕ್ರಮಗಳ ವಿವರ ಸಲ್ಲಿಸುವಂತೆ ನಗರ ಪೊಲೀಸ್ ಕಮಿಷನರ್ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸಾಮಾಜಿಕ ಕಾರ್ಯಕರ್ತ ಗಿರೀಶ್ ಭಾರದ್ವಾಜ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಶಬ್ದ ಮಾಲಿನ್ಯ (ನಿಯಂತ್ರಣ ಮತ್ತು ನಿಯಂತ್ರಣ) ನಿಯಮಗಳು-2000ರ ನಿಬಂಧನೆಗಳನ್ನು ಉಲ್ಲಂಘಿಸಿ ಧಾರ್ಮಿಕ ಸ್ಥಳಗಳಲ್ಲಿ ಧ್ವನಿವರ್ಧಕಗಳನ್ನು ಬಳಸಲಾಗುತ್ತಿದೆ' ಎಂದು ಅರ್ಜಿದಾರರು ದೂರಿದ್ದಾರೆ.

'ಈ ವಿಷಯದಲ್ಲಿ ಕಾನೂನು ಜಾರಿಗೆ ತರುವ ಬದಲು ಕೆಎಸ್‌ಪಿಸಿಬಿ ಹಿರಿಯ ಅಧಿಕಾರಿಗಳು ಅಂಚೆ ಕಚೇರಿ ರೀತಿ ವರ್ತಿಸುತ್ತಿದ್ದಾರೆ. ದೂರುಗಳನ್ನು ಪೊಲೀಸ್ ಕಮಿಷನರ್ ಮತ್ತು ಬಿಬಿಎಂಪಿಗೆ ರವಾನಿಸಿ ಸುಮ್ಮನಾಗುತ್ತಿದ್ದಾರೆ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಕಾನೂನಿನಲ್ಲಿ ಇರುವ ಅಧಿಕಾರ ಬಳಸಿ ಕ್ರಿಮಿನಲ್ ಕ್ರಮಗಳನ್ನು ಕೆಎಸ್‌ಪಿಸಿಬಿ ಪ್ರಾದೇಶಿಕ ಅಧಿಕಾರಿಗಳು ಕೈಗೊಳ್ಳಬೇಕು. ಹಿರಿಯ ಪರಿಸರ ಅಧಿಕಾರಿಗಳು ವಹಿಸಿರುವ ಪಾತ್ರವನ್ನು ಪರಿಶೀಲಿಸುವಂತೆ ಕೆಎಸ್‌ಪಿಸಿಬಿ ಅಧ್ಯಕ್ಷರಿಗೆ ನಿರ್ದೇಶನ ನೀಡಲಾಗುತ್ತಿದೆ' ಎಂದು ಪೀಠ ತಿಳಿಸಿತು.

'ಸ್ವೀಕರಿಸಿದ ದೂರುಗಳ ಆಧಾರದಲ್ಲಿ ಕ್ರಮ ಕೈಗೊಂಡಿರುವ ಸಂಬಂಧ ಪೊಲೀಸ್ ಅಧಿಕಾರಿಗಳು ಅಫಿಡವಿಟ್ ಸಲ್ಲಿಸಬೇಕು' ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಜೂ.17ಕ್ಕೆ ಮುಂದೂಡಿತು.

ಇಂಡೊಜರ್ಮನ್ ಸಂಶೋಧನಾ ಯೋಜನೆಗೆ ಜಿಕೆವಿಕೆಯಲ್ಲಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿಯಲ್ಲಿ ವಲಸೆ ಬಹುಮುಖ್ಯ ಸವಾಲು. ಪ್ರಸ್ತುತ ವಿಶ್ವಾದ್ಯಂತ ಶೇ 30ರಷ್ಟು ವಲಸೆ ಇದೆ. 2030ರ ವೇಳೆಗೆ ಈ ಪ್ರಮಾಣ ಶೇ 7ಕ್ಕೆ ಏರಲಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಸೋಮವಾರ ನಡೆದ 'ಬೆಂಗಳೂರಿನ ಗ್ರಾಮೀಣ-ನಗರ ಅಂತರ ಸಂಪರ್ಕ ಸಾಧನ:ಕೃಷಿ ಆರ್ಥಿಕತೆ ಮತ್ತು ಸಮಾಜದಲ್ಲಿ ಪರಿವರ್ತನೆ' ಶೀರ್ಷಿಕೆಯಡಿ ಇಂಡೊ-ಜರ್ಮನ್ ಸಹಭಾಗಿತ್ವದ ಎರಡನೇ ಹಂತದ ಯೋಜನೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೃಷಿಯಲ್ಲಿ ವಲಸೆ ಸಮಸ್ಯೆಯನ್ನು ನಿವಾರಿಸಲು ಕಾರ್ಯತಂತ್ರ ರೂಪಿಸುವ ಅಗತ್ಯ, ನಗರೀಕರಣದಿಂದ ಹಲವಾರು ಸಮಸ್ಯೆಗಳು ಎದುರಾಗಿದ್ದು, ಇದನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಲು ಕೃಷಿ ವಿಶ್ವವಿದ್ಯಾನಿಲಯದ 'ಇಂಡೊ-ಜರ್ಮನ್ ಯೋಜನೆ ಕಾರ್ಯನಿರ್ವಹಿಸುತ್ತಿದೆ' ಎಂದರು.

ಜರ್ಮನ್ ರಾಯಭಾರ ಕಚೇರಿಯ ಉಪ ಕಾನ್ಸುಲ್ ಜನರಲ್ ಕಾರ್ಲ್ ಎಹ್ಲೆರ್ಡಿಂಗ್,'ಹವಾಮಾನ ವೈಪರೀತ್ಯದಿಂದ ಕೃಷಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಇವುಗಳಿಗೆ ತಕ್ಕಂತೆ ಕಾರ್ಯತಂತ್ರ ರೂಪಿಸುವುದು ಸೂಕ್ತ' ಎಂದರು.

ವಿಶ್ವವಿದ್ಯಾಲಯದ ಕೃಷಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಕೆ.ಬಿ. ಉಮೇಶ್,'1960ರಲ್ಲಿ ಶೇ 18ರಷ್ಟು ಇದ್ದ ನಗರೀಕರಣ, ಪ್ರಸ್ತುತ ಶೇ.30ರಷ್ಟಕ್ಕೆ ಹೆಚ್ಚಿದೆ. ಇದನ್ನು ಎದುರಿಸುವ ಉದ್ದೇಶದಿಂದ ಯೋಜನೆಯ ರೂಪರೇಷೆಗಳನ್ನು ಸಿದ್ಧಪಡಿಸಲಾಗಿದೆ' ಎಂದು ಹೇಳಿದರು.

ಇಂಡೊಜರ್ಮನ್ ಸಹಭಾಗಿತ್ವ ಸಂಶೋಧನೆ ಯೋಜನೆಯನ್ನು (ಎಡದಿಂದ ಎರಡನೆಯವರು) ಜರ್ಮನಿಯ ಕ್ಯಾಸೆಲ್ ವಿಶ್ವವಿದ್ಯಾಲಯದ ಯೋಜನೆ ಸಂಯೋಜಕ ಆಂಡ್ರಿಯಾಸ್ ಬ್ಯುರ್ಕರ್ಟ್ ಉದ್ಘಾಟಿಸಿದರು. ಕಾರ್ಲ್ ಎಹ್ಲೆರ್ಡಿಂಗ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ರಾಜೇಂದ್ರ ಪ್ರಸಾದ್ ಸಂಶೋಧನಾ ನಿರ್ದೇಶಕ ವೈ.ಜಿ.ಷಡಕ್ಷರಿ ಹಾಗೂ ಕೆ.ಬಿ.ಉಮೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಏನಿದು ಯೋಜನೆ?

ಕೃಷಿ ವ್ಯವಸ್ಥೆಗೆ ಸಂಬಂಧಿಸಿದ ವಿವಿಧ ವಿಷಯಗಳ ಸಂಶೋಧನೆಗಾಗಿ ಕೃಷಿ ವಿಶ್ವವಿದ್ಯಾನಿಲಯವು 2016ರಲ್ಲಿ ಜರ್ಮನಿಯ ಕ್ಯಾಸೆಲ್ ಹಾಗೂ ಗೋಟ್ಟಿಂಜನ್ ವಿಶ್ವವಿದ್ಯಾಲಯಗಳ ಸಹಭಾಗಿತ್ವದಲ್ಲಿ ಮೊದಲ ಹಂತದ ಇಂಡೊ-ಜರ್ಮನ್ ಸಂಶೋಧನಾ ಯೋಜನೆ ಕೈಗೊಂಡಿತ್ತು. ಅದರ ಮುಂದುವರಿದ ಭಾಗವಾಗಿ ಎರಡನೇ ಹಂತದ ಯೋಜನೆಗೆ ಈಗ ಚಾಲನೆ ನೀಡಲಾಗಿದೆ. ಮೂರು ವರ್ಷ ಅವಧಿಯ ಯೋಜನೆಯ ಒಟ್ಟು ಮೊತ್ತ ₹934.63 ಲಕ್ಷಗಳು.

ಆರ್.ಪೂರ್ಣಿಮಾ, ಸೈಯದ್ ಇಸಾಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪುಸ್ತಕ ದಿನದ ಅಂಗವಾಗಿ ಕರ್ನಾಟಕ ಪ್ರಕಾಶಕರ ಸಂಘದಿಂದ ನೀಡಲಾಗುವ 'ಎಂ.ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾಲಕ ಪ್ರಶಸ್ತಿ'ಗೆ ಮೈಸೂರಿನ ಪುಸ್ತಕ ಪ್ರೇಮಿ ಸೈಯದ್ ಇಸಾಕ್ ಹಾಗೂ 'ನಂಜನಗೂಡು ತಿರುಮಲಾಂಬ ಪ್ರಶಸ್ತಿ'ಗೆ ಹಿರಿಯ ಪತ್ರಕರ್ತೆ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ ಅವರನ್ನು ಆಯ್ಕೆ ಮಾಡಲಾಗಿದೆ.

ಡಾ.ಆರ್. ಪೂರ್ಣಿಮಾ | ಸೈಯದ್ ಇಸಾಕ್

'ಅಂಕಿತ ಪ್ರಕಾಶನ ಹಾಗೂ ಶೃಂಗಾರ ಪ್ರಕಾಶನ ಪ್ರಾಯೋಜಿಸಿರುವ ಈ ಪ್ರಶಸ್ತಿಗಳು ತಲಾ ₹5 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ.'

'ವಿಶ್ವ ಪುಸ್ತಕ ದಿನದ ಪ್ರಯುಕ್ತ ಏ.23ರಂದು ಬೆಳಿಗ್ಗೆ 11.30ಕ್ಕೆ ಸೆಂಟ್ರಲ್ ಕಾಲೇಜಿನ ಕೇಂದ್ರ ಸಾಹಿತ್ಯ ಅಕಾಡೆಮಿ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕವಿ ಸಿದ್ಧಲಿಂಗಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷರು ಪ್ರಕಾಶ್ ಕಂಬತ್ತಳ್ಳಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಗ್ರಾಮೀಣ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಣ ಹೊಬಳಿ, ದೊಡ್ಡಚೀಮನಹಳ್ಳಿ ಗ್ರಾಮದಲ್ಲಿರುವ ಬಿ. ಎಸ್. ವಿಜಯಕುಮಾರ್ ಬಿನ್ ಕೆ.ಎನ್. ಭದ್ರಪ್ಪರವರಿಗೆ ಸೇರಿದ 2 ಎಕರೆ 34 ಗುಂಟೆ ಕೃಷಿ ಭೂಮಿಗೆ ಸಂಬಂಧಿಸಿದಂತೆ ಮಾಲೀಕತ್ವದ ದಾಖಲೆಗಳನ್ನು ಪರಿಶೀಲಿಸುತ್ತಿದ್ದೇವೆ. ಸದರಿ ಸರ್ವೇ ನಂ. ವ್ಯಾಪ್ತಿ ಮತ್ತು ಚಕ್ಕುಬಂದಿಗಳನ್ನು ಷೆಡ್ಯೂಲ್‌ನಲ್ಲಿ ವಿವರಿಸಲಾಗಿದೆ ಮತ್ತು ಇನ್ನು ಮುಂದೆ ಇದನ್ನು "ಷೆಡ್ಯೂಲ್ ಸ್ವತ್ತು" ಎಂದು ಕರೆಯಲಾಗುತ್ತದೆ.

ಷೆಡ್ಯೂಲ್ ಸ್ವತಿನಲ್ಲಿ ಯಾವುದೇ ಹಕ್ಕು, ದಾಖಲೆ ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿಯು ಈ ಪ್ರಕಟಣೆಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ ಅದರ ಸಹಿ ಮಾಡಿದ ದಾಖಲೆ ಮತ್ತು ಪುರಾವೆಗಳೊಂದಿಗೆ ತಿಳಿಸತಕ್ಕದ್ದು. ಈ ನೋಟಿಸ್ ಪ್ರಕಟವಾದ ದಿನಾಂಕದಿಂದ 10 (ಹತ್ತು) ದಿನಗಳಲ್ಲಿ ಅಂತಹ ಯಾವುದೇ ಸೂಚನೆಯನ್ನು ನಾವು ಸ್ವೀಕರಿಸದಿದ್ದರೆ, ಷೆಡ್ಯೂಲ್ ಸ್ವತ್ತಿನ ಆಯಾ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಭೂಮಾಲೀಕತ್ವದ ದಾಖಲೆಗಳು ಸ್ಪಷ್ಟವಾಗಿದೆ, ಮಾರುಕಟ್ಟೆ ಮಾಡಬಹುದಾಗಿದೆ ಮತ್ತು ಯಾವುದೇ ರೀತಿಯ ಅಡಚಣೆಯಿಂದ ಮುಕ್ತವಾಗಿರುತ್ತದೆ ಮತ್ತು ಷೆಡ್ಯೂಲ್ ಸ್ವತ್ತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ರೀತಿಯ ಮತ್ತು ಯಾವುದೇ ವ್ಯಕ್ತಿಗೆ ಯಾವುದೇ ಹಕ್ಕು ಅಥವಾ ಹಿತಾಸಕ್ತಿಯಿಲ್ಲ ಎಂದು ಭಾವಿಸಲಾಗುವುದು. ಈ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 10 ದಿನಗಳಲ್ಲಿ ಸ್ವೀಕರಿಸದ ಹಕ್ಕುಗಳು ಅಥವಾ ಆಪಾದಿತ ಆಸಕ್ತಿ ಯಾವುದಾದರೂ ಇದ್ದರೆ, ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ನಮ್ಮ ಕಕ್ಷಿದಾರರು ಬದ್ಧವಾಗಿರುವುದಿಲ್ಲ.

ಷೆಡ್ಯೂಲ್

ಬೆಂಗಳೂರು ಗ್ರಾಮೀಣ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಣ ಹೊಬಳಿ, ದೊಡ್ಡಚೀಮನಹಳ್ಳಿ ಗ್ರಾಮದಲ್ಲಿರುವ 2 ಎಕರೆ 34 ಗುಂಟೆಗಳ ಕೃಷಿ ಭೂಮಿಯ ಚಕ್ಕುಬಂದಿಯ ವಿವರಗಳು ಕೆಳಗಿನಂತ್ತಿವೆ;

(1) ಸರ್ವೇ ನಂ. 157/3 (ಹಳೆಯ ನಂ. 157/1) ವಿಸ್ತೀರ್ಣ 1 ಎಕರೆ 0 ಗುಂಟೆ ಇದರ ಚಕ್ಕುಬಂದಿ ಪೂರ್ವಕ್ಕೆ: ಜಿ.ಡಿ. ಪ್ರಭಾಕರ್‌ಗೆ ಸೇರಿದ ಸರ್ವೇ ನಂ. 157/2; ಪಶ್ಚಿಮಕ್ಕೆ: ಬಿ.ಎಸ್. ವಿಜಯ್ ಕುಮಾರ್‌ರವರ ಸ್ವತ್ತು; ಉತ್ತರಕ್ಕೆ: ಸರ್ವೇ ನಂ. 160; ದಕ್ಷಿಣಕ್ಕೆ: ಸರ್ವೇ ನಂ. 157/1 (2) ಸರ್ವೇ ನಂ. 158/2 (ಹಳೆಯ ನಂ. 158), ವಿಸ್ತೀರ್ಣ 00 ಎಕರೆ 36 ಗುಂಟೆಗಳು ಇದರ ಚಕ್ಕುಬಂದಿ ಪೂರ್ವಕ್ಕೆ; ಶಾಮಣ್ಣರವರಿಗೆ ಸೇರಿದ ಸ್ವತ್ತು; ಪಶ್ಚಿಮಕ್ಕೆ ಸರ್ಕಾರಿ ರಸ್ತೆ; ಉತ್ತರಕ್ಕೆ: ಸರ್ವೇ ನಂ. 158/4; ದಕ್ಷಿಣಕ್ಕೆ: ಮುನಿರಾಜು ಕೆ. ರವರಿಗೆ ಸೇರಿದ ಸರ್ವೇ ನಂ. 158/3; (3) ಸರ್ವೇ ನಂ. 158/4 (ಹಳೆಯ ನಂ. 158/1), ವಿಸ್ತೀರ್ಣ 00 ಎಕರೆ 38 ಗುಂಟೆಗಳು ಇದರ ಚಕ್ಕುಬಂದಿ ಪೂರ್ವಕ್ಕೆ: ಸರ್ವೇ ನಂ. 160; ಪಶ್ಚಿಮಕ್ಕೆ: ಸರ್ಕಾರಿ ರಸ್ತೆ; ಉತ್ತರಕ್ಕೆ: ಮುನಿರಾಜು ಕೆ. ರವರಿಗೆ ಸೇರಿದ ಸರ್ವೇ ನಂ. 158/1; ದಕ್ಷಿಣಕ್ಕೆ: ಸರ್ವೇ ನಂ. 158/2.

ಮಾಲಿನಿ ರಾಜು, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ವಕೀಲರು ಮತ್ತು ಸಾಲಿಸಿಟರ್ಸ್,
ಲೆವೆಲ್ 3, ಪ್ರೆಸ್ಟೀಜ್ ಒಬ್ಲಿಕ್ಸ್, ನಂ.3,
ಕಸ್ತೂರ್‌ಬಾ ರಸ್ತೆ, ಬೆಂಗಳೂರು–560 001
ಇ–ಮೇಲ್: malini.raju@jsalaw.com
ದೂರವಾಣಿ. 9840933240
ಬೆಂಗಳೂರು
ದಿನಾಂಕ: 19.04.2021

ಲಂಚ ಪ್ರಕರಣ: ಎಸಿಬಿ ಬಲೆಗೆ ಬಿಬಿಎಂಪಿ ಎಇ

ಬೆಂಗಳೂರು: ಒಬ್ಬರ ನಿವೇಶನವನ್ನು ಬೇರೊಬ್ಬರು ಅಕ್ರಮವಾಗಿ ಖರೀದಿಸಿ ಕಟ್ಟಡ ನಿರ್ಮಿಸುತ್ತಿರುವುದನ್ನು ತಡೆಯಲು ₹ 15 ಸಾವಿರ ಲಂಚ ಪಡೆಯುತ್ತಿದ್ದ ಬಿಬಿಎಂಪಿಯ ಗಾಂಧಿನಗರ ಉಪ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯ ಸಹಾಯಕ ಎಂಜಿನಿಯರ್ ಪೂಜಾರಪ್ಪ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ದೂರು ನೀಡಿದ ವ್ಯಕ್ತಿಗೆ ಸೇರಿದ ನಿವೇಶನವನ್ನು ಅವರ ಚಿಕ್ಕಮ್ಮನ ಮೂಲಕ ವ್ಯಕ್ತಿಯೊಬ್ಬರು ಖರೀದಿಸಿದ್ದರು. ಅಕ್ರಮವಾಗಿ ತಮ್ಮ ನಿವೇಶನ ಖರೀದಿಸಿ ಕಟ್ಟಡ ನಿರ್ಮಿಸುತ್ತಿದ್ದು, ಕೆಎಂಸಿ ಕಾಯ್ದೆಯಡಿ ಕ್ರಮ ಜರುಗಿಸಬೇಕು ಎಂದು ಕೋರಿ ನಿವೇಶನದ ಮಾಲೀಕರು ಬಿಬಿಎಂಪಿ ಗಾಂಧಿನಗರ ಉಪ ವಿಭಾಗದ ಕಚೇರಿಗೆ ದೂರು ನೀಡಿದ್ದರು.

ಕ್ರಮ ಜರುಗಿಸಲು ₹ 50 ಸಾವಿರ ಲಂಚ ನೀಡುವಂತೆ ಪೂಜಾರಪ್ಪ ಬೇಡಿಕೆ ಇಟ್ಟಿದ್ದರು. ₹ 15 ಸಾವಿರ ಮುಂಗಡ ನೀಡುವುದಾಗಿ ತಿಳಿಸಿದ್ದ ನಿವೇಶನದ ಮಾಲೀಕ, ಈ ಕುರಿತು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. ಸೋಮವಾರ ಲಂಚದ ಹಣ ಪಡೆಯುತ್ತಿದ್ದ ಪೂಜಾರಪ್ಪ ಅವರನ್ನು ಬಂಧಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ದುಶ್ಚಟಗಳಿಗೆ ಹಣ ಹೊಂದಿಸಲು ಮೊಬೈಲ್ ಸುಲಿಗೆ: ಬಂಧನ

ಬೆಂಗಳೂರು: ನಗರದ ಹಲವು ಕಡೆ ಸಾರ್ವಜನಿಕರನ್ನು ಬೆದರಿಸಿ ಮೊಬೈಲ್ ಸುಲಿಗೆ ಮಾಡಿದ್ದ ಆರೋಪದಡಿ ಧನುಷ್ ಅಲಿಯಾಸ್ ಡಿ.ಡಿ (18) ಎಂಬಾತನನ್ನೂ ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

'ಜೆ.ಸಿ.ನಗರ ಬೆನ್ಸನ್ ಟೌನ್ ಬಳಿಯ ಚಿನ್ನಪ್ಪ ಗಾರ್ಡನ್ ನಿವಾಸಿ ಧನುಷ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 4.50 ಲಕ್ಷ ಮೌಲ್ಯದ 32 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ದೂರುದಾರ ಪ್ರಕಾಶ್ ರಾನಡೆ ಫೆ. 10ರಂದು ಸಂಜೆ ಎ.ಇ.ಸಿ.ಎಸ್ ಲೇಔಟ್‌ನ 7ನೇ ಮುಖ್ಯರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಇಬ್ಬರು, ಮೊಬೈಲ್ ಕಿತ್ತುಕೊಂಡು ಹೋಗಿದ್ದರು. ಈ ಬಗ್ಗೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದರು.

'ಚಿಕ್ಕ ವಯಸ್ಸಿನಿಂದಲೇ ಅಪರಾಧ ಕೃತ್ಯ ಎಸಗುತ್ತಿರುವ ಧನುಷ್, ಮದ್ಯಪಾನ ಹಾಗೂ ಧೂಮಪಾನ ವ್ಯಸನಿ. ದುಶ್ಚಟಗಳಿಗೆ ಹಣ ಹೊಂದಿಸಲು ಆತ ಸುಲಿಗೆ ಮಾಡುತ್ತಿದ್ದ. ಸಂಜಯನಗರ, ಕೊಡಿಗೇಹಳ್ಳಿ, ಸದಾಶಿವನಗರ, ಡಿ.ಜೆ.ಹಳ್ಳಿ, ಕೆ.ಜಿ. ಹಳ್ಳಿ, ಹೆಬ್ಬಾಳ, ಆರ್.ಟಿ.ನಗರ, ಕೆ.ಆರ್.ಪುರ, ಎಚ್‌ಎಎಲ್ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲಿಯೂ ಧನುಷ್ ಸುಲಿಗೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ತನ್ನದೇ ಗ್ಯಾಂಗ್ ಕಟ್ಟಿಕೊಂಡಿದ್ದ ಆರೋಪಿ, ಸಹಚರರನ್ನು ಜೊತೆಯಲ್ಲಿ ಕರೆದೊಯ್ದು ಬೆಳಿಗ್ಗೆ ಹಾಗೂ ಸಂಜೆ ಒಂಟಿಯಾಗಿ ಓಡಾಡುತ್ತಿದ್ದವರನ್ನು ಸುಲಿಗೆ ಮಾಡುತ್ತಿದ್ದ. ಮೊಬೈಲ್‌ಗಳನ್ನು ಮಾರಾಟ ಮಾಡಿ ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದ. ಠಾಣೆ ವ್ಯಾಪ್ತಿಯಲ್ಲಿ ಫೆ. 16ರಂದು ಅನುಮಾನಾಸ್ಪದವಾಗಿ ಆರೋಪಿ ಓಡಾಡುತ್ತಿದ್ದ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ' ಎಂದೂ ಪೊಲೀಸರು ಹೇಳಿದರು.

ನಗರದಲ್ಲಿನ ಕೋವಿಡ್–19 ಆರೈಕೆ ಕೇಂದ್ರಗಳಲ್ಲೂ ಕೊರತೆ ಎದುರಾಗುವ ಮುನ್ಸೂಚನೆ

ಶೇ 10ರಷ್ಟು ಹಾಸಿಗೆ ಮಾತ್ರವೇ ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿತರ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಕೊರತೆ ಸಮಸ್ಯೆ ಬೆನ್ನಲ್ಲೇ, ಬಿಬಿಎಂಪಿ ಆರಂಭಿಸಿರುವ ಕೋವಿಡ್ ಆರೈಕೆ ಕೇಂದ್ರಗಳಲ್ಲೂ ಹಾಸಿಗೆ ಕೊರತೆ ಎದುರಾಗುವ ಮುನ್ಸೂಚನೆ ಇದೆ. ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಸದ್ಯ ಶೇ 10ರಷ್ಟು ಹಾಸಿಗೆಗಳು ಮಾತ್ರ ಖಾಲಿ ಉಳಿದಿವೆ.

ಉಸಿರಾಟದ ತೊಂದರೆ ಇದ್ದವರನ್ನು ಹಾಗೂ ಆಮ್ಲಜನಕ ಪೂರೈಕೆಯ ಅವಶ್ಯಕತೆ ಇರುವವರನ್ನು ಮಾತ್ರ ಆಸ್ಪತ್ರೆಗೆ ದಾಖಲಿಸಲು ಹಾಗೂ ಇನ್ನುಳಿದ ಸೋಂಕಿತರನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಿಸಲು ಸೋಮವಾರ ನಡೆದ ಸಚಿವರು, ಶಾಸಕರು ಹಾಗೂ ಸಂಸದರ ಸಭೆಯ ಬಳಿಕ ಸರ್ಕಾರ ತೀರ್ಮಾನಿಸಿದೆ. ಆದರೆ, ಈ ತೀರ್ಮಾನವನ್ನು ಜಾರಿಗೊಳಿಸಲು ಅವಶ್ಯವಿರುವಷ್ಟು ಪ್ರಮಾಣದ ಕೋವಿಡ್ ಆರೈಕೆ ಕೇಂದ್ರಗಳೂ ನಗರದಲ್ಲಿಲ್ಲ.

ಸದ್ಯಕ್ಕೆ ಹಜ್‌ಭವನ ಹಾಗೂ ಎಚ್‌ಎಎಲ್‌ನ ಸಭಾಂಗಣವನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಹಜ್‌ಭವನದಲ್ಲಿ 400 ಹಾಸಿಗೆಗಳು ಹಾಗೂ ಎಚ್‌ಎಎಲ್ ಸಭಾಂಗಣದಲ್ಲಿ 128 ಆಸ್ಪತ್ರೆಗಳ ಸೌಕರ್ಯ ಇದೆ. ಆದರೆ ಇಲ್ಲಿನ ಶೇ 90ರಷ್ಟು ಹಾಸಿಗೆಗಳು ಭರ್ತಿಯಾಗಿವೆ. ಕೇವಲ 54 ಹಾಸಿಗೆಗಳು ಮಾತ್ರ ಖಾಲಿ ಇವೆ.

ಪ್ರತಿ ವಲಯದಲ್ಲೂ ಅಲ್ಲಲ್ಲಿ 50– 60 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರು ಆಯಾ ವಲಯ ಆಯುಕ್ತರಿಗೆ ಹಾಗೂ ಜಂಟಿ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಈ ಕಾರ್ಯವೂ ನಿರೀಕ್ಷಿತ ವೇಗದಲ್ಲಿ ಸಾಗುತ್ತಿಲ್ಲ.

ಪೂರ್ವವಲಯದ ಹೆಬ್ಬಾಳದಲ್ಲಿ ಪಶುವೈದ್ಯಕೀಯ ಕಾಲೇಜಿನ ಪ್ರಾಂಗಣದಲ್ಲಿ 50 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಸಿದ್ಧವಾಗುತ್ತಿದೆ. 'ಮಂಗಳವಾರ ಸಂಜೆ ವೇಳೆಗೆ ಇದು ಸಿದ್ಧವಾಗಲಿದೆ. ಬುಧವಾರದಿಂದಲೇ ಇಲ್ಲಿಗೆ ಸೋಂಕಿತರನ್ನು ದಾಖಲಿಸಿಕೊಳ್ಳಲಿದ್ದೇವೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೋವಿಡ್ ಚಿಕಿತ್ಸೆ: ಖಾಲಿ ಇರುವ ಹಾಸಿಗೆಗಳ ವಿವರ

ಆಸ್ಪತ್ರೆ ವಿಧ	ಸಾಮಾನ್ಯ ಹಾಸಿಗೆ	ಎಚ್‌ಡಿಯು	ಐಸಿಯು	ಐಸಿಯು–ವಿ	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜು	0	33	2	2	37
ಸರ್ಕಾರಿ ಆಸ್ಪತ್ರೆಗಳು	69	3	0	0	72
ಖಾಸಗಿ ವೈದ್ಯಕೀಯ ಕಾಲೇಜುಗಳು	584	47	6	0	637
ಖಾಸಗಿ ಆಸ್ಪತ್ರೆಗಳು	404	170	16	7	597
ಒಟ್ಟು	1,057	253	24	9	1,343

ಕೋವಿಡ್ ಚಿಕಿತ್ಸೆಗೆ ಹಾಸಿಗೆ ಹಂಚಿಕೆ ವಿವರ

ಆಸ್ಪತ್ರೆ ವಿಧ	ಸಾಮಾನ್ಯ ಹಾಸಿಗೆ	ಎಚ್‌ಡಿಯು	ಐಸಿಯು	ಐಸಿಯು–ವಿ	ಒಟ್ಟು
ಸರ್ಕಾರಿ ವೈದ್ಯಕೀಯ ಕಾಲೇಜು	30	405	73	47	555
ಸರ್ಕಾರಿ ಆಸ್ಪತ್ರೆ	621	88	60	70	839
ಖಾಸಗಿ ವೈದ್ಯಕೀಯ ಕಾಲೇಜುಗಳು	1,287	1,157	82	75	2,601
ಖಾಸಗಿ ಆಸ್ಪತ್ರೆಗಳು	922	796	125	93	1,936
ಒಟ್ಟು	2,860	2,446	340	285	5,931

ಕೋವಿಡ್ ಆರೈಕೆ ಕೇಂದ್ರ ಹಾಸಿಗೆ ಲಭ್ಯತೆ (ಸೋಮವಾರ ರಾತ್ರಿ 10.15ರವರೆಗಿನ ಮಾಹಿತಿ)

ಕೇಂದ್ರ	ಒಟ್ಟು ಹಾಸಿಗೆ	ಖಾಲಿ ಇರುವುದು
ಹಜ್‌ಭವನ	400	47
ಎಚ್‌ಎಎಲ್	128	7

ಐಸಿಯು ಹಾಸಿಗೆಗಳು ಬಹುತೇಕ ಭರ್ತಿ

ನಗರದ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ (ಐಸಿಯು) ಹಾಗೂ ವೆಂಟಿಲೇಟರ್ ಸೌಕರ್ಯ ಇರುವ ಹಾಸಿಗೆಗಳೂ ಬಹುತೇಕ ಭರ್ತಿ ಆಗಿವೆ. ಸೋಮವಾರ ರಾತ್ರಿ 10.15ರವರೆಗಿನ ಮಾಹಿತಿ ಪ್ರಕಾರ ನಗರದ ವಿವಿಧ ಆಸ್ಪತ್ರೆಗಳ ಐಸಿಯುಗಳಲ್ಲಿ 33 ಹಾಸಿಗೆಗಳು ಮಾತ್ರ ಖಾಲಿ ಉಳಿದಿದ್ದವು.

ಆಮ್ಲಜನಕ ಪೂರಣ ವ್ಯವಸ್ಥೆ ಇರುವ ಎಚ್‌ಡಿ ಘಟಕಗಳಲ್ಲಿ 253 ಹಾಸಿಗೆಗಳು ಖಾಲಿ ಇದ್ದವು.

ಪ್ರಜಾವಾಣಿ facebook LIVE fb.com/prajavani.net

ರಾಮನವಮಿ ವಿಶೇಷ

ಶ್ರೀರಾಮ ಸಂಗೀತ ಮಾಧುರ್ಯ

ಹಾಡುಗಾರಿಕೆ: ವಿದುಷಿ ಬೆಂಗಳೂರು ಶುಭಲಕ್ಷ್ಮೀ ಕೃಷ್ಣಮೂರ್ತಿ (ಇಸ್ರೋ ವಿಜ್ಞಾನಿ, ಉಪ ನಿರ್ದೇಶಕಿ)
ವಯಲಿನ್: ವಿದುಷಿ ಜ್ಯೋತ್ಸ್ನಾ ಮಂಜುನಾಥ್, ಆದಾಯ ತೆರಿಗೆ ಅಧಿಕಾರಿ
ಮೃದಂಗಂ: ವಿದ್ವಾನ್ ವಿನಯ್ ನಾಗರಾಜನ್

ಜ್ಯೋತ್ಸ್ನಾ ಮಂಜುನಾಥ್

ಶುಭಲಕ್ಷ್ಮೀ ಕೃಷ್ಣಮೂರ್ತಿ

ವಿನಯ್ ನಾಗರಾಜನ್

21 ನೇ ಏಪ್ರಿಲ್, 2021 ಸಂಜೆ 7.00 ಗಂಟೆಯಿಂದ

ಜನಪ್ರತಿನಿಧಿಗಳ ಒಗ್ಗಟ್ಟಿನ ಹೋರಾಟ ಅಗತ್ಯ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆಯನ್ನು ಹಿಮ್ಮೆಟ್ಟಿಸಲು ಎಲ್ಲ ರಾಜಕೀಯ ಪಕ್ಷಗಳು ರಾಜಕೀಯ ಹಿತಾಸಕ್ತಿ ಬದಿಗೊತ್ತಿ, ಒಗ್ಗಟ್ಟಿನ ಹೋರಾಟ ನಡೆಸಬೇಕಾಗಿದೆ' ಎಂದು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಲೋಕಸಭೆ ಸಚಿವಾಲಯ, ಎಲ್ಲಾ ರಾಜ್ಯಗಳ ಸ್ಪೀಕರ್‌ಗಳು, ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಪ್ರತಿಪಕ್ಷಗಳ ನಾಯಕರ ಜೊತೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನಡೆಸಿದ ವಿಡಿಯೊ ಸಂವಾದದಲ್ಲಿ ಈ ವಿಷಯ ತಿಳಿಸಿದರು.

'ಜನಪ್ರತಿನಿಧಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು ಮತ್ತು ಸರ್ಕಾರದ ಜೊತೆ ಸಹರಿಸಬೇಕು. ಜನರಲ್ಲಿ ಜಾಗೃತಿ ಮೂಡಿಸಿ ಸರ್ಕಾರದ ನಿರ್ಧಾರಗಳಿಗೆ ಸಹಕಾರ ನೀಡಿ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವ ಮೂಲಕ ಕೋವಿಡ್ ವಿರುದ್ಧ ಸಮರ ಸಾರಬೇಕಾಗಿದೆ. ಇದು ಜನಪ್ರತಿನಿಧಿಗಳ ಕೆಲಸ' ಎಂದು ಬೊಮ್ಮಾಯಿ ಹೇಳಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೂ ಭಾಗವಹಿಸಿದ್ದರು.

ಮನೆಯಲ್ಲೇ ಪ್ರತ್ಯೇಕವಾಸ: ಸಿಗುತ್ತಿಲ್ಲ ಮಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಹಾಸಿಗೆ ಸಿಗುವುದಿರಲಿ, ಮಾತ್ರೆಗಳಿಗೂ ಪಡಿಪಾಟಲು ಎದುರಿಸುವ ದುಃಸ್ಥಿತಿ ಎದುರಾಗಿದೆ.

'ಕೋವಿಡ್ ದೃಢಪಟ್ಟವರು ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗುವಂತೆ ಬಿಬಿಎಂಪಿಯವರು ದೂರವಾಣಿ ಮೂಲಕವೇ ತಿಳಿಸುತ್ತಾರೆ. ಯಾವ ಮಾತ್ರೆಗಳನ್ನು ತೆಗೆದುಕೊಳ್ಳಬೇಕು ಎಂಬ ಸಲಹೆಯನ್ನು ವೈದ್ಯರು ದೂರವಾಣಿ ಮೂಲಕವೇ ನೀಡುತ್ತಿದ್ದಾರೆ. ಸಮೀಪದ ಆರೋಗ್ಯ ಕೇಂದ್ರದಿಂದ ಮಾತ್ರೆ ವಿತರಣೆ ಕಾರ್ಯವನ್ನೂ ಮಾಡುತ್ತಿಲ್ಲ' ಎಂದು ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಹೇಳುತ್ತಾರೆ.

'ಕೋವಿಡ್ ದೃಢಪಟ್ಟ ಬಳಿಕ ಆತಂಕಗೊಂಡು ರೋಗಿಗಳು ಮೆಡಿಕಲ್ ಶಾಪ್‌ಗಳಲ್ಲಿ ಮಾತ್ರೆ ಖರೀದಿಸಬೇಕಾದ ದುಃಸ್ಥಿತಿ ಬಂದಿದೆ. ಕೋವಿಡ್‌ಗೆ ನೀಡಲಾಗುವ ರೆಮ್‌ಡಿಸಿವಿರ್ ಅನ್ನೂ ಸಿಬ್ಬಂದಿ ಮಾರಾಟ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ಕೋವಿಡ್‌ನಿಂದ ಮೃತಪಟ್ಟವರ ಶವ ಸಂಸ್ಕಾರಕ್ಕೆ ದಿನಗಟ್ಟಲೆ ಕಾಯಬೇಕಾಗಿದೆ. ಅವಕಾಶ ಇದ್ದವರಿಗೆ ತಮ್ಮ ಖಾಸಗಿ ಜಮೀನಿನಲ್ಲೇ ಶವಸಂಸ್ಕಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದ್ದೇನೆ' ಎಂದು ಮಂಜುನಾಥ್ ಹೇಳಿದರು.

ಕ್ಷೇತ್ರಕ್ಕೊಂದು ಆರೈಕೆ ಕೇಂದ್ರಕ್ಕೆ ಬೇಕು: ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದು ಕೋವಿಡ್ ಆರೈಕೆ ಕೇಂದ್ರ ತೆರೆಯಬೇಕು ಎಂದು ಆರ್. ಮಂಜುನಾಥ್ ಒತ್ತಾಯಿಸಿದರು.

'ಖಾಸಗಿ ಆಸ್ಪತ್ರೆಗಳಲ್ಲಿ ಬಿಬಿಎಂಪಿ ಮೂಲಕ ಶೇ 50ರಷ್ಟು ಜನರಿಗೆ ಅವಕಾಶ ನೀಡಬೇಕು. 25 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್ ಲಸಿಕೆ ಹಾಕಬೇಕು. ಈ ವಿಷಯವನ್ನು ಸರ್ಕಾರದ ಗಮನಕ್ಕೂ ತಂದಿದ್ದೇನೆ' ಎಂದರು.

ಕಣ್ಣೀರಿಟ್ಟ ಸ್ವಯಂಸೇವಕ: ಸಾಮಾಜಿಕ ಜಾಲತಾಣದಲ್ಲಿ ವೈರಲ್

ಆಸ್ಪತ್ರೆಯಲ್ಲಿ ಹಾಸಿಗೆ, ಆಮ್ಲಜನಕ ಕೊರತೆಯಿಂದ ಸೋಂಕಿತರು ಎದುರಿಸುತ್ತಿರುವ ಸಮಸ್ಯೆಯನ್ನು ದಿನವೂ ಕಣ್ಣಾರೆ ಕಾಣುತ್ತಿರುವ ಸ್ವಯಂಸೇವಕರೊಬ್ಬರು ಕಣ್ಣೀರಿಟ್ಟಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್‌ನ (ಇಆರ್‌ಟಿ) ಸದಸ್ಯ, ಕೋವಿಡ್ ಹೆಲ್ಪ್‌ಲೈನ್ ಡಾಟ್ ಕಾಮ್ ನಿರ್ವಹಿಸುತ್ತಿರುವ ಅಮೀನ್ ಮುದಸ್ಸಿರ್ ಎಂಬುವರು ಬೆಂಗಳೂರಿನಲ್ಲಿ ಕೋವಿಡ್ ಸ್ಥಿತಿ ಕಂಡು ದುಃಖಿತರಾಗಿ ವಿಡಿಯೊ ಮಾಡಿದ್ದಾರೆ.

ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆಗಳು ಸಿಗುತ್ತಿಲ್ಲ, ಐಸಿಯುನಲ್ಲಿ ಇದ್ದವರಿಗೆ ಆಮ್ಲಜನಕ ಪೂರೈಕೆಯಾಗುತ್ತಿಲ್ಲ. ನಗರದ 60ಕ್ಕೂ ಹೆಚ್ಚು ಆಸ್ಪತ್ರೆಗಳ ಹೊರಗೆ ಸೋಂಕಿತರು ಕಾಯುತ್ತಿದ್ದಾರೆ. ಸೋಂಕಿತರ ಕುಟುಂಬದವರು 'ನನ್ನ ತಾಯಿ, ಸ್ನೇಹಿತ, ಮಗ ಸಾವು–ಬದುಕಿನ ನಡುವೆ ಸೆಣಸುತ್ತಿದ್ದಾರೆ. ಯಾವುದಾದರೊಂದು ಆಸ್ಪತ್ರೆಯಲ್ಲಿ ಹಾಸಿಗೆ ಕೊಡಿಸಿ' ಎಂದು ಅಕ್ಷರಶಃ ಭಿಕ್ಷೆ ಬೇಡಿದವರಂತೆ ಕೇಳಿಕೊಳ್ಳುತ್ತಾರೆ. ಯಾರಿಗೂ ಸಹಾಯ ಮಾಡಲು ನಮಗೆ ಸಾಧ್ಯವಾಗುತ್ತಿಲ್ಲ' ಎಂದು ಅವರು ಕಣ್ಣೀರಿಟ್ಟಿದ್ದಾರೆ.

'ಬೆಂಗಳೂರಿನ ಜನ ದಯವಿಟ್ಟು ಹೊರಗೆ ಓಡಾಡುವುದನ್ನು ಆದಷ್ಟು ಕಡಿಮೆ ಮಾಡಿ. ಸುರಕ್ಷಿತ ಎನ್ನುವ ಯಾವ ಜಾಗವೂ ಇಲ್ಲ. ಮನೆಯಲ್ಲೇ ಇರಿ' ಎಂದು ಅವರು ಸಲಹೆ ನೀಡಿದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,56,253 ಒಟ್ಟು ಸೋಂಕಿತರು

4,47,854 ಗುಣಮುಖರಾದವರು | 1,03,178 ಸಕ್ರಿಯ ಪ್ರಕರಣ | 5,220 ಸಾವು

ಸೋಮವಾರದ ಏರಿಕೆ
9,618 ದೃಢಪಟ್ಟ ಪ್ರಕರಣ
4,240 ಗುಣಮುಖ | 97 ಸಾವು

ಬಿ.ಯು ನಂಬರ್ ಸಿಗದೆ ಪರದಾಟ

ಕೋವಿಡ್ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟವರಿಗೆ ನೀಡಲಾಗುವ ಬಿ.ಯು ನಂಬರ್ ನಾಲ್ಕು ದಿನ ಕಳೆದರೂ ಬಾರದ ಕಾರಣ ಗಂಭೀರ ಸ್ಥಿತಿಯಲ್ಲಿದ್ದವರೂ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ.

'ಸೋಂಕಿನ ಲಕ್ಷಣ ಇದ್ದ ಕಾರಣ ನಮ್ಮ ವಾರ್ಡ್‌ನ ವ್ಯಕ್ತಿಯೊಬ್ಬರು ಏ.15ರಂದು ಕೋವಿಡ್ ಪರೀಕ್ಷೆ ಮಾಡಿಸಿದ್ದರು. ನಾಲ್ಕು ದಿನಗಳು ಕಳೆದರೂ ಬಿ.ಯು ನಂಬರ್ ಬಂದಿಲ್ಲ. ಪ್ರಯೋಗಾಲಯಗಳಲ್ಲಿ ಮಾಡುವ ತಪ್ಪಿನಿಂದ ಈ ನಂಬರ್‌ಗಳು ಬರುತ್ತಿಲ್ಲ. ನಂಬರ್ ಇಲ್ಲದ ಕಾರಣ ಆಸ್ಪತ್ರೆಗೆ ದಾಖಲಿಸಲು ಬಿಬಿಎಂಪಿ ಮುಂದಾಗುವುದಿಲ್ಲ. ಪ್ರಯೋಗಾಲಯದವರು ಮಾಡುವ ತಪ್ಪಿಗೆ ಜನ ಬಲಿಯಾಗುತ್ತಿದ್ದಾರೆ' ಎಂದು ಪಾಲಿಕೆಯ ಮಾಜಿ ಸದಸ್ಯ ಎಂ.ಶಿವರಾಜು ತಿಳಿಸಿದರು.

'ಗಂಭೀರ ಸ್ಥಿತಿಯಲ್ಲಿರುವ ವ್ಯಕ್ತಿಯೊಬ್ಬರು ಬಿ.ಯು ನಂಬರ್ ಇಲ್ಲದೆ ಮನೆಯಲ್ಲೇ ಇದ್ದಾರೆ. ವಿಳಂಬವಾದರೆ ಅವರು ಬದುಕುಳಿಯುವುದೇ ಕಷ್ಟ' ಎಂದರು.

ಆಮ್ಲಜನಕ ಕೊರತೆ ಇಲ್ಲ: ಬಿಜೆಪಿ

ಬೆಂಗಳೂರು: ಕೋವಿಡ್ ವಿರುದ್ಧ ರಾಜ್ಯ ಸರ್ಕಾರ ಸಮರ್ಥವಾಗಿ ಹೋರಾಡುತ್ತಿದ್ದು, ವೈದ್ಯಕೀಯ ಆಮ್ಲಜನಕದ ಕೊರತೆ ಇಲ್ಲ ಎಂದು ರಾಜ್ಯ ಬಿಜೆಪಿ ಹೇಳಿದೆ.

ರಾಜ್ಯದಲ್ಲಿ ಏಳು ವೈದ್ಯಕೀಯ ಆಮ್ಲಜನಕ ತಯಾರಿಕಾ ಘಟಕಗಳು ದಿನಕ್ಕೆ 812 ಟನ್ ಆಮ್ಲಜನಕ ಉತ್ಪಾದಿಸುತ್ತಿವೆ ಎಂದು ಟ್ವೀಟ್ ಮಾಡಿದೆ.

ಲಾಕ್‌ಡೌನ್‌ಗೆ ಒಮ್ಮತದ ವಿರೋಧ

ಮೊದಲ ಪುಟದಿಂದ...

ಸಭೆಯಲ್ಲಿ ಸದಸ್ಯರ ಮಧ್ಯೆ ಮಾತಿನ ಚಕಮಕಿ: ಸಭೆಯಲ್ಲಿ ಕಾಂಗ್ರೆಸ್‌ನ ಕೃಷ್ಣ ಭೈರೇಗೌಡ ಮತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮಧ್ಯೆ ಮಾತಿನ ಚಕಮಕಿ ನಡೆಯಿತು.

'ಒಂದು ವರ್ಷದಿಂದ ಸರ್ಕಾರ ಲೂಟಿ ಮಾಡಿದ್ದೇ ಸಾಧನೆ' ಎಂದು ಕೃಷ್ಣ ಭೈರೇಗೌಡ ಸರ್ಕಾರದ ವಿರುದ್ಧ ಹರಿಹಾಯ್ದರು. 'ಇಲ್ಲಿ ರಾಜಕೀಯ ಮಾಡುವುದು ಬೇಡ, ನಮಗೆ ಜನರ ಜೀವನ ಉಳಿಸುವುದು ಮುಖ್ಯ' ಎಂದು ಸುಧಾಕರ್ ತಿರುಗೇಟು ನೀಡಿದರು.

'ಕಾಲ ಮಿಂಚಿದ ಮೇಲೆ ನಮ್ಮನ್ನು ಸಭೆಗೆ ಕರೆಸಿದ್ದೀರಿ' ಎಂದು ಕೃಷ್ಣ ಭೈರೇಗೌಡ ಹೇಳಿದರು. ಸಂಸದ ಡಿ.ಕೆ. ಸುರೇಶ್ ಮಾತನಾಡಿ, 'ಸತ್ತವರ ಅಂತ್ಯಕ್ರಿಯೆಯಲ್ಲೂ ಸುಲಿಗೆ ನಡೆಯುತ್ತಿದೆ. ಆಂಬುಲೆನ್ಸ್‌ನವರೂ ಹಣ ವಸೂಲಿ ಮಾಡುತ್ತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡರು.

'ಈ ಸರ್ಕಾರಕ್ಕೆ ತಾಯಿ ಹೃದಯವಿಲ್ಲ' ಎಂದೂ ಕಾಂಗ್ರೆಸ್ ಸದಸ್ಯರು ಹರಿಹಾಯ್ದರು. ಕಂದಾಯ ಸಚಿವ ಆರ್.ಅಶೋಕ ಸದಸ್ಯರನ್ನು ಸಮಾಧಾನಪಡಿಸಿದರು.

'ಆಹಾರ ಮತ್ತು ಔಷಧಿಯನ್ನು ನ್ಯಾಯಯುತವಾಗಿ ವಿತರಿಸಿ. ರಾಜ್ಯದಲ್ಲಿ ಹಾಸಿಗೆ ಸಮಸ್ಯೆ ಇದೆ ತೀವ್ರ ನಿಗಾ ಘಟಕದಲ್ಲಿ ಸ್ಥಳಾವಕಾಶ ಇಲ್ಲ. ಆಮ್ಲಜನಕ ಇಲ್ಲ. ಒಟ್ಟಾರೆ ಭಯದ ಸ್ಥಿತಿ ಇದೆ. ಸಾರ್ವಜನಿಕ ಹಿತ ದೃಷ್ಟಿಯಿಂದ 25 ಸಾವಿರ ಹಾಸಿಗೆ ವ್ಯವಸ್ಥೆ ಮಾಡಿ. ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗಬೇಕಾದವರೂ ರಸ್ತೆಗಳಲ್ಲಿ ಓಡಾಡುತ್ತಿದ್ದಾರೆ. ಇದನ್ನು ತಡೆಯಬೇಕು. ಸೆಕ್ಷನ್ 144 ಜಾರಿ ಮಾಡುವುದು ಉತ್ತಮ. ಲಾಕ್ ಡೌನ್ ಗಿಂತಲೂ ದಂಡಪ್ರಕ್ರಿಯಾ ಸಂಹಿತೆಯ ಸೆಕ್ಷನ್ 144 ಜಾರಿ ಮಾಡಿ ಗುಂಪು ಸೇರುವುದನ್ನು ತಡೆಯುವುದು ಉತ್ತಮ'

ರಾಮಲಿಂಗಾರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ

ಚಾಮರಾಜಪೇಟೆ ಮಸೀದಿಯಲ್ಲಿ 20 ಸಾವಿರ ಜನರಿಗೆ ಅವಕಾಶ ಇದ್ದರೂ ರಮ್ಜಾನ್‌ನಲ್ಲಿ ಅದರ ಕಾಲು ಭಾಗ ಅಂದರೆ 5 ಸಾವಿರ ಜನರಿಗೆ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಿದ್ದಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಜಮೀರ್ ಅಹಮದ್ ಖಾನ್, ಶಾಸಕ

ಭಾರತದಿಂದ ಬರುವವರಿಗೆ ಪಾಕ್‌ನಲ್ಲೂ ನಿರ್ಬಂಧ

ಇಸ್ಲಾಮಾಬಾದ್ (ಪಿಟಿಐ): ಕೋವಿಡ್ -19 ಪ್ರಕರಣಗಳು ಭಾರೀ ಸಂಖ್ಯೆಯಲ್ಲಿ ಉಲ್ಬಣಿಸುತ್ತಿರುವ ಕಾರಣಕ್ಕೆ ಭಾರತದಿಂದ ಪ್ರಯಾಣಿಕರು ದೇಶದೊಳಕ್ಕೆ ಎರಡು ವಾರಗಳ ಕಾಲ ಬಾರದಂತೆ ನಿರ್ಬಂಧಿಸಲು ಪಾಕಿಸ್ತಾನ ಸೋಮವಾರ ನಿರ್ಧರಿಸಿದೆ.

'ಎರಡು ವಾರಗಳವರೆಗೆ ಭಾರತವನ್ನು 'ಸಿ' ವರ್ಗಗಳ ದೇಶಗಳ ಪಟ್ಟಿಯಲ್ಲಿ ಇರಿಸಲು ಪಾಕಿಸ್ತಾನ ನಿರ್ಧರಿಸಿದೆ. ಭಾರತದಿಂದ ವಿಮಾನ ಮತ್ತು ಭೂ ಮಾರ್ಗಗಳ ಮೂಲಕ ಬರುವ ಪ್ರಯಾಣಿಕರಿಗೆ ನಿಷೇಧ ಹೇರಲಾಗಿದೆ' ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಭಾರತಕ್ಕೆ ತೆರಳದಂತೆ ಬ್ರಿಟನ್ ಸೂಚನೆ

ನವದೆಹಲಿ: ಭಾರತದಾದ್ಯಂತ ಕೋವಿಡ್– 19 ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿರುವುದರಿಂದ ಬ್ರಿಟನ್ ಸರ್ಕಾರ, ತನ್ನ ದೇಶದ ಯಾವುದೇ ನಾಗರಿಕರು ಅನವಶ್ಯಕವಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಪ್ರವಾಸ ಕೈಗೊಳ್ಳಬಾರದೆಂದು ಸೂಚನೆ ನೀಡಿದೆ.

ಚಿತ್ರಾವಳಿ

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಸ್‌.ಎಸ್‌. ಪಾಟೀಲ ಅವರಿಗೆ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ'ಯನ್ನು ಕವಿ ಸಿದ್ದಲಿಂಗಯ್ಯ ಪ್ರದಾನ ಮಾಡಿದರು. ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕಾರ್ಯದರ್ಶಿಗಳಾದ ಕೆ. ರಾಜಕುಮಾರ್ ಹಾಗೂ ಪದ್ಮರಾಜ ದಂಡಾವತಿ ಇದ್ದರು. ಈ ಪ್ರಶಸ್ತಿಯು ₹ 25 ಸಾವಿರ ನಗದನ್ನು ಒಳಗೊಂಡಿದೆ

ಗೋವಿಂದರಾಜನಗರ ವ್ಯಾಪ್ತಿಯಲ್ಲಿ ಜಲಮಂಡಳಿ ವತಿಯಿಂದ ₹4 ಕೋಟಿ ವೆಚ್ಚದಲ್ಲಿ ನೂತನ ಪೈಪ್‌ಲೈನ್ ಅಳವಡಿಕೆ ಹಾಗೂ ಬತ್ತಿದ್ದ ಬೋರ್‌ವೆಲ್‌ಗಳಿಗೆ ಮರುಜೀವ ನೀಡುವ ಕಾಮಗಾರಿಗೆ ವಸತಿ ಸಚಿವ ವಿ.ಸೋಮಣ್ಣ ಸೋಮವಾರ ಚಾಲನೆ ನೀಡಿದರು. ಸ್ಥಳೀಯ ಮುಖಂಡರಾದ ಕೆ.ಉಮೇಶ್ ಶೆಟ್ಟಿ, ರಾಮಪ್ಪ, ಶಕುಂತಲ ದೊಡ್ಡಲಕ್ಕಪ್ಪ, ವಿಶ್ವನಾಥ ಗೌಡ ಹಾಗೂ ಅಧಿಕಾರಿಗಳು ಇದ್ದರು.

ಖಾಸಗಿ ಆಸ್ಪತ್ರೆಗಳಿಂದ ಮನೆ ಆರೈಕೆ ಪ್ಯಾಕೇಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡ ಪರಿಣಾಮ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ತಲೆದೋರಿದೆ. ಈ ನಡುವೆ ಖಾಸಗಿ ಆಸ್ಪತ್ರೆಗಳು ಮನೆ ಆರೈಕೆಗೆ ಒಳಗಾದವರಿಗೆ ವೈದ್ಯರಿಂದ ವಿಡಿಯೊ ಸಂವಾದ ಸೇರಿದಂತೆ ವಿವಿಧ ಸೇವೆ ಒಳಗೊಂಡ ಮನೆ ಆರೈಕೆ ಪ್ಯಾಕೇಜ್‌ಗಳನ್ನು ಪ್ರಾರಂಭಿಸಿವೆ.

ಸೋಂಕಿನ ಲಕ್ಷಣಗಳು ಅಷ್ಟಾಗಿ ಗೋಚರಿಸದವರಿಗೆ ಮನೆ ಆರೈಕೆಗೆ ಒಳಗಾಗಲು ಸರ್ಕಾರವು ಅವಕಾಶ ನೀಡಿದೆ. ಇದರಿಂದಾಗಿ ಕೋವಿಡ್ ಪೀಡಿತರಲ್ಲಿ ಶೇ 90ರಷ್ಟು ಮಂದಿ ಮನೆ ಆರೈಕೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, 60 ವರ್ಷ ಮೇಲ್ಪಟ್ಟವರು ಸೇರಿದಂತೆ ಕೆಲವರಿಗೆ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಇಳಿಕೆ ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಕಾರಣ ಕೆಲ ದಿನಗಳಿಂದ ಆಸ್ಪತ್ರೆಗೆ ತೆರಳುವವರ ಸಂಖ್ಯೆ ಏರಿಕೆ ಕಂಡಿದೆ. ಇದರಿಂದಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದ್ದು, ಸರ್ಕಾರಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಬಹುತೇಕ ಹಾಸಿಗೆಗಳು ಭರ್ತಿಯಾಗಿವೆ. ಸದ್ಯ ನಗರದಲ್ಲಿ 1.03 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಮನೆ ಆರೈಕೆಗೆ ಒಳಗಾದವರಿಗೆ ಕೊಲಂಬಿಯಾ ಏಷ್ಯಾ, ಮಣಿಪಾಲ್, ಅಪೋಲೊ, ಆಸ್ಟರ್, ಸಾಕ್ರಾ, ನಾರಾಯಣ ಹೆಲ್ತ್, ವಿಕ್ರಮ್ ಸೇರಿದಂತೆ ನಗರದ ಪ್ರಮುಖ ಆಸ್ಪತ್ರೆಗಳು 7ರಿಂದ 17 ದಿನಗಳ 'ಮನೆ ಆರೈಕೆ' ಪ್ಯಾಕೇಜ್ ಪರಿಚಯಿಸಿವೆ. ₹ 4 ಸಾವಿರದಿಂದ ₹ 20 ಸಾವಿರದವರೆಗೂ ದರ ನಿಗದಿ ಮಾಡಲಾಗಿದೆ. ಈ ಪ್ಯಾಕೇಜ್ ಅಡಿ ವೈದ್ಯರು ಮತ್ತು ಶುಶ್ರೂಷಕರಿಂದ ಆನ್‌ಲೈನ್ ಸಮಾಲೋಚನೆ ಒದಗಿಸಲಾಗುತ್ತಿದೆ. ಅದೇ ರೀತಿ, ಡಿಜಿಟಲ್ ಥರ್ಮಾಮೀಟರ್, ಪಲ್ಸ್ ಆಕ್ಸಿಮೀಟರ್, ಮುಖಗವಸು ಸೇರಿದಂತೆ ವಿವಿಧ ಸಾಧನಗಳನ್ನು ಒಳಗೊಂಡ ಕಿಟ್‌ಗಳನ್ನು ಒದಗಿಸಲಾಗುತ್ತಿದೆ. ದಿನದ 24 ಗಂಟೆಗಳೂ ತುರ್ತು ದೂರವಾಣಿ ಕರೆಗೆ ಅವಕಾಶ ನೀಡಲಾಗಿದೆ.

ಸೋಂಕಿತರಿಗೆ ಆಯ್ಕೆ: ಕೆಲ ಆಸ್ಪತ್ರೆಗಳು ನಾಲ್ಕರಿಂದ ಐದು ಮಾದರಿಯ ಪ್ಯಾಕೇಜ್‌ಗಳನ್ನು ನೀಡಿವೆ. ಕೊಲಂಬಿಯಾ ಏಷ್ಯಾ ಆಸ್ಪತ್ರೆಯು 7 ದಿನಗಳಿಗೆ ₹ 4,999 ದರ ನಿಗದಿಪಡಿಸಿದೆ. ಇದರಲ್ಲಿ ಮನೆ ಆರೈಕೆ ಮಾರ್ಗದರ್ಶನ, ವೈದ್ಯರು ಮತ್ತು ಆಹಾರ ತಜ್ಞರಿಂದ ಸಮಾಲೋಚನೆ ಸೇರಿದಂತೆ ಆರು ಸೇವೆಗಳನ್ನು ನೀಡಲಾಗುತ್ತಿದೆ. ಔಷಧ ಹಾಗೂ ಕಿಟ್‌ಗೆ ಹೆಚ್ಚುವರಿ ಶುಲ್ಕ ಪಾವತಿಸಬೇಕಿದೆ. ಮಣಿಪಾಲ್ ಆಸ್ಪತ್ರೆಯು 9 ಪ್ಯಾಕೇಜ್‌ಗಳನ್ನು ಪರಿಚಯಿಸಿದೆ. ₹ 3,960ರಿಂದ ₹ 17 ಸಾವಿರದವರೆಗೂ ಶುಲ್ಕ ನಿಗದಿಪಡಿಸಲಾಗಿದೆ. ವೈದ್ಯಕೀಯ ಸೇವೆ ಪ್ಯಾಕೇಜ್ ಮತ್ತು ಕೋವಿಡ್ ಕಿಟ್ ಪ್ಯಾಕೇಜ್ ಎಂದು ವಿಂಗಡಿಸಲಾಗಿದೆ. ವೈದ್ಯಕೀಯ ಸೇವೆಗಳು 17 ದಿನಗಳು ಇರಲಿವೆ. ಸಾಕ್ರಾ ಆಸ್ಪತ್ರೆಯು 14 ದಿನಗಳಿಗೆ ₹ 10,500 ನಿಗದಿಪಡಿಸಿದೆ.

'ಸೋಂಕಿನ ಲಕ್ಷಣಗಳು ಅಷ್ಟಾಗಿ ಗೋಚರಿಸದವರಿಗೆ ಮನೆ ಆರೈಕೆಗೆ ಶಿಫಾರಸು ಮಾಡಲಾಗುತ್ತಿದೆ. ಅವರನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಲ್ಲಿ ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಸಮಸ್ಯೆಯಾಗಲಿದೆ. ಮನೆ ಆರೈಕೆಗೆ ಒಳಗಾದವರಿಗೆ ವಿಡಿಯೊ ಸಮಾಲೋಚನೆ ಮೂಲಕ ಕೂಡ ಸೇವೆ ಒದಗಿಸಲಾಗುತ್ತಿದೆ' ಎಂದು ಅಪೋಲೊ ಆಸ್ಪತ್ರೆ ತಿಳಿಸಿದೆ.

ಸರ್ಕಾರಿ ವ್ಯವಸ್ಥೆಯಲ್ಲಿ ನಡೆಯದ ಸಮಾಲೋಚನೆ

ಕೋವಿಡ್ ಪೀಡಿತ ವ್ಯಕ್ತಿಗಳು ಮನೆ ಆರೈಕೆಗೆ ಒಳಪಡಲು ಇಚ್ಛಿಸಿದಲ್ಲಿ ಬಿಬಿಎಂಪಿ ಅಧಿಕಾರಿಗಳು ಮನೆ ಪರಿಶೀಲಿಸಿ, ಅಗತ್ಯ ವ್ಯವಸ್ಥೆಯಿದ್ದಲ್ಲಿ ಅವಕಾಶ ನೀಡಬೇಕು. ಅದೇ ರೀತಿ, ವೈದ್ಯರು ಸೋಂಕಿತ ವ್ಯಕ್ತಿಯ ಮೌಲ್ಯಮಾಪನ ನಡೆಸಿ, ಮನೆ ಆರೈಕೆ ಬಗ್ಗೆ ನಿರ್ಧರಿಸಬೇಕು. ಬಳಿಕ ದೂರವಾಣಿ ಕರೆ ಮಾಡಿ ಆರೋಗ್ಯದ ಬಗ್ಗೆ ವಿಚಾರಿಸಬೇಕು. ಆದರೆ, ಈಗ ಈ ಪ್ರಕ್ರಿಯೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಕೋವಿಡ್ ಸೋಂಕಿತರು ಆರೋಪಿಸಿದ್ದಾರೆ.

'ಮನೆ ಆರೈಕೆ ಒಳಗಾಗಿ 5 ದಿನಗಳಾದರೂ ಬಿಬಿಎಂಪಿಯ ಯಾವುದೇ ಅಧಿಕಾರಿ ಮನೆಗೆ ಭೇಟಿ ನೀಡಲಿಲ್ಲ. ಯಾವ ರೀತಿ ಆರೈಕೆ ಮಾಡಿಕೊಳ್ಳಬೇಕು ಎಂಬ ಮಾಹಿತಿಯನ್ನು ಕೂಡ ವೈದ್ಯರು ನೀಡಿಲ್ಲ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಿಗೆ ಹಣ ಪಾವತಿಸಿ, ಸೇವೆ ಪಡೆದುಕೊಳ್ಳಬೇಕಿದೆ. ಆದರೆ, ಬಡ ಕುಟುಂಬದ ವ್ಯಕ್ತಿಗಳಿಗೆ ₹ 10 ಸಾವಿರದಿಂದ ₹ 15 ಸಾವಿರ ಪಾವತಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಸರ್ಕಾರವು ಖಾಸಗಿ ಆಸ್ಪತ್ರೆಗಳು ನೀಡುವ ಮನೆ ಆರೈಕೆ ಸೇವೆಗೆ ಗರಿಷ್ಠ ದರ ನಿಗದಿ ಮಾಡಬೇಕು' ಎಂದು 45 ವರ್ಷದ ಕೋವಿಡ್ ಸೋಂಕಿತ ವ್ಯಕ್ತಿಯೊಬ್ಬರು ತಿಳಿಸಿದರು.

ಕೋವಿಡ್:ಶಿಕ್ಷಣ ಸಚಿವರ ಆಪ್ತ ಸಹಾಯಕ ನಿಧನ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರ ಆಪ್ತ ಸಹಾಯಕ ಎಚ್. ಜೆ. ರಮೇಶ್ ಅವರು ಕೋವಿಡ್‌ನಿಂದ ಸೋಮವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಸಚಿವರ ಮನೆಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ರಮೇಶ್ ಅವರಿಗೆ ಏ. 13ರಂದು ಕೋವಿಡ್ ದೃಢಪಟ್ಟಿತ್ತು. ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಉಸಿರಾಟ ಸಮಸ್ಯೆ ಕಾಣಿಸಿಕೊಂಡು ಸೋಮವಾರ ಬೆಳಿಗ್ಗೆ 9.30ಕ್ಕೆ ಸಾವು ಸಂಭವಿಸಿದೆ.

ರಮೇಶ್ ಸಾವಿನ ಬಗ್ಗೆ ತಮ್ಮ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿರುವ ಸುರೇಶ್‌ಕುಮಾರ್, 'ನಮ್ಮ ಕ್ಷೇತ್ರದ (ರಾಜಾಜಿನಗರ) ಅನೇಕರನ್ನು ವಿವಿಧ ಆಸ್ಪತ್ರೆಗಳಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಉಳಿಸಿದ್ದ, ರಮೇಶ್ ಇನ್ನಿಲ್ಲ. ಸುಮಾರು ಎಂಟು ವರ್ಷಗಳಿಂದ ನನ್ನೊಡನಿದ್ದು, ಜನಪರ ಕಾಳಜಿಯಿಂದ ಅವರು ಕರ್ತವ್ಯ ನಿರ್ವಹಿಸುತ್ತಿದ್ದರು' ಎಂದಿದ್ದಾರೆ.

'ರಾಜ್ಯಪಾಲರ ಆಳ್ವಿಕೆ ಬಂದಂತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ವಿಚಾರವಾಗಿ ಮಂಗಳವಾರ (ಏ. 20) ಸರ್ವಪಕ್ಷ ಸಭೆ ಕರೆದಿರುವುದಾಗಿ ರಾಜಭವನದಿಂದ ಆಹ್ವಾನ ಬಂದಿದ್ದು, ರಾಜ್ಯದಲ್ಲಿ ರಾಜ್ಯಪಾಲರ ಆಳ್ವಿಕೆ ಬಂದಂತೆ ಕಾಣುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಇದೇ ಮೊದಲ ಬಾರಿಗೆ ರಾಜ್ಯಪಾಲರು ಸರ್ವಪಕ್ಷ ಸಭೆ ಕರೆದಿದ್ದು, ಮುಂದಿನ ದಿನಗಳಲ್ಲಿ ರಾಜ್ಯಪಾಲರ ಆಳ್ವಿಕೆ ಅಧಿಕೃತವಾಗಿ ಜಾರಿಯಾಗುವ ಲಕ್ಷಣ ಗೋಚರಿಸುತ್ತಿದೆ. ಮಂಗಳವಾರ ನಡೆಯಲಿರುವ ಸಭೆಯಲ್ಲಿ ನಾವು ಭಾಗವಹಿಸುತ್ತೇವೆ' ಎಂದರು.

'ಕೊರೊನಾ ವಾಸ್ತವಾಂಶದ ಬಗ್ಗೆ ಮಾಧ್ಯಮಗಳು ವರದಿ ಮಾಡುತ್ತಿವೆ. ಈ ವಿಚಾರ ಸಭೆಯಲ್ಲಿ ಪ್ರಸ್ತಾಪಿಸುತ್ತೇವೆ. ಕೊರೊನಾ ಲಸಿಕೆ ಪೂರೈಕೆ ಗುತ್ತಿಗೆಯನ್ನು ಕೇವಲ ಎರಡು ಕಂಪನಿಗಳಿಗೆ ಯಾಕೆ ನೀಡಲಾಗಿದೆ' ಎಂದು ಪ್ರಶ್ನಿಸಿದರು.

'ಪಕ್ಷದ ಕಚೇರಿಯಲ್ಲಿ ನಾವು ವೈದ್ಯರ ಘಟಕದ ಜತೆ ಚರ್ಚೆ ಮಾಡಿ ಒಂದು ಸಹಾಯವಾಣಿ ಆರಂಭಿಸಲು ತೀರ್ಮಾನಿಸಿದ್ದೇವೆ. ಅಲ್ಲಿ ಸೋಂಕಿತರಿಗೆ ಮಾರ್ಗದರ್ಶನ ನೀಡಿ ನೆರವಾಗುತ್ತೇವೆ' ಎಂದರು.

'70 ವರ್ಷ ಕಾಂಗ್ರೆಸ್ ಏನು ಮಾಡಿದೆ ಎಂದು ಆರೋಗ್ಯ ಸಚಿವ ಕೆ.ಸುಧಾಕರ್ ಕೇಳಿದ್ದಾರೆ. ಅವರು ಕೇವಲ ಒಂದು ವರ್ಷದಿಂದಷ್ಟೇ ಬಿಜೆಪಿಯಲ್ಲಿದ್ದಾರೆ. ಉಳಿದ ಅವಧಿಯಲ್ಲಿ ಕಾಂಗ್ರೆಸ್‌ನಲ್ಲೇ ಇದ್ದರಲ್ಲ. ಅವರನ್ನು ಬೆಳೆಸಿ, ಶಾಸಕರನ್ನಾಗಿ ಮಾಡಿದ್ದು ಕಾಂಗ್ರೆಸ್ ಅಲ್ಲವೇ' ಎಂದು ತಿರುಗೇಟು ನೀಡಿದರು.

'₹ 30 ಸಾವಿರ ಕೋಟಿ ಮೀಸಲಿಡಿ'

ಬೆಂಗಳೂರು: 'ಕೊರೊನಾ ಎರಡನೇ ಅಲೆ ವ್ಯಾಪಕವಾಗುತ್ತಿರುವುದನ್ನು ನಿಯಂತ್ರಣಕ್ಕೆ ತರಲು ಆರೋಗ್ಯ ಕ್ಷೇತ್ರಕ್ಕೆ ₹ 30 ಸಾವಿರ ಕೋಟಿ ಮೀಸಲಿಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿ ಸೋಂಕಿತರಿಗೆ ಹಾಸಿಗೆಗಳು ಸಿಗುತ್ತಿಲ್ಲ. ಪ್ರತಿ ವಿಚಾರದಲ್ಲೂ ಪರಿಸ್ಥಿತಿ ಬಿಗಡಾಯಿಸುತ್ತಿದ್ದು, ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ನಿಲ್ಲಿಸಿ, ಆ ಹಣವನ್ನು ಕೊರೊನಾ ನಿಯಂತ್ರಣಕ್ಕೆ ವಿನಿಯೋಗಿಸಬೇಕು. ಸಮರೋಪಾದಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ : ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ, ಈ ಮೇಲ್ ಐಡಿ: eejbc2@gmail.com Ph:9591461212

ಸಂಖ್ಯೆ: ಕೃಭಾಜನಿನಿ/ಜೆಬಿಸಿ/ವಿ–2/ಟಿಎನ್‌ಡಿ/ಯೋಶಾ/2021–22/40 ದಿನಾಂಕ: 16/04/2021

:: ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ) ::

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ ರವರು ಇ–ಟೆಂಡರಿಂಗ್ ಮುಖಾಂತರ ಶೇಕಡಾವಾರು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ; 1) ಕಾಮಗಾರಿಗಳ ವಿವರ : ಕೃಭಾಜನಿನಿ, ಜೆಬಿಸಿ, ವಿಭಾಗ–2, ಭೀಮರಾಯನಗುಡಿ ಅಡಿಯಲ್ಲಿ ಬರುವ 2020–21 ನೇ ಸಾಲಿನ ರೇವಿನ್ಯೂ ಹೆಡ್ ಅನುದಾನ ಕಾಮಗಾರಿಗಳು, 2) ಕಾಮಗಾರಿಗಳ ಇಂಡೆಂಟ್ ಸಂಖ್ಯೆ : **Indent no : 20657, 20658, 20659,** 3) ಟೆಂಡರಗೆ ಇಟ್ಟ ಮೊತ್ತ : **ಗರಿಷ್ಟ ಮೊತ್ತ ರೂ. 169.23 ಲಕ್ಷಗಳು, ಕನಿಷ್ಟ ಮೊತ್ತ ರೂ. 51.28 ಲಕ್ಷಗಳು,** 4) ಇ–ಟೆಂಡರಿಂಗ ಲಭ್ಯವಾಗುವ ಅವಧಿ : **19.04.2021** ಮುಂಜಾನೆ 11.30 ಘಂಟೆ ರಿಂದ **27.04.2021** ಸಾಯಂಕಾಲ 05.00 ಘಂಟೆ ವರೆಗೆ, 5) ಇ–ಟೆಂಡರಿಂಗ ಕೊನೆಯ ದಿನಾಂಕ : **27.04.2021** ಸಾಯಂಕಾಲ 05.00 ಘಂಟೆ ವರೆಗೆ, 6) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ : **29.04.2021** ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ, 7) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : 02.05.2021 ಅಥವಾ ಆರ್ಥಿಕ ಟೆಂಡರ್ ಅನುಮೋದನೆಗೊಂಡ ನಂತರ, 8) ಸಂಪರ್ಕಿಸಬೇಕಾದ ಕಛೇರಿ ವಿಳಾಸ : ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http://www.eproc.Karnataka.gov.inನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ

ವಾ.ಸಾ.ಸಂ.ಇ/ಯಾದಗಿರಿ/26/ಎಂಸಿ&ಎ/2021–22

13 ದಿನಗಳನ್ನು ಪೂರೈಸಿದ ಮುಷ್ಕರ; ವಿವಿಧೆಡೆ ಸಾರಿಗೆ ನೌಕರರಿಂದ ಉಪವಾಸ ಸತ್ಯಾಗ್ರಹ

ಮುಂದುವರಿದ ಶಿಸ್ತುಕ್ರಮ: ಇನ್ನಷ್ಟು ಸಿಬ್ಬಂದಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಮುಷ್ಕರ 13 ದಿನಗಳನ್ನು ಪೂರೈಸಿದ್ದು, ಚಳವಳಿನಿರತ ನೌಕರರ ವಿರುದ್ಧ ಶಿಸ್ತುಕ್ರಮದ ಪ್ರಕ್ರಿಯೆಯೂ ಮುಂದುವರಿದಿದೆ. ಸೋಮವಾರ ಮೂರು ನಿಗಮಗಳ ಒಟ್ಟು 518 ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ.

251 ಮಂದಿ ತರಬೇತಿ ಸಿಬ್ಬಂದಿಯನ್ನು ವಜಾ ಮಾಡಿರುವುದಾಗಿ ಕೆಎಸ್‌ಆರ್‌ಟಿಸಿ ಪ್ರಕಟಿಸಿದೆ.

ಬಿಎಂಟಿಸಿ 200 ಮಂದಿ ಕಾಯಂ ಸಿಬ್ಬಂದಿಯನ್ನು ಕೆಲಸದಿಂದ ಕಿತ್ತು ಹಾಕಿದೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಇಕೆಆರ್‌ಟಿಸಿ) 67 ನೌಕರರನ್ನು ವಜಾಗೊಳಿಸಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಸೋಮವಾರ ಯಾವುದೇ ನೌಕರರ ವಿರುದ್ಧ ಕ್ರಮ ಜರುಗಿಸಿಲ್ಲ.

ನೌಕರರಿಂದ ಉಪವಾಸ ಸತ್ಯಾಗ್ರಹ: ರಾಜ್ಯದ ಹಲವು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆಗೆ ಆಗ್ರಹಿಸಿ ಮಹಾತ್ಮ ಗಾಂಧಿ ಪ್ರತಿಮೆಗಳ ಎದುರು ಸೋಮವಾರ ಉಪವಾಸ ಸತ್ಯಾಗ್ರಹ ನಡೆಸಿದರು. ಬೆಂಗಳೂರಿನಲ್ಲಿ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ನೌಕರರನ್ನು ವಶಕ್ಕೆ ಪಡೆದ ಪೊಲೀಸರು, ಸಂಜೆ ಬಿಡುಗಡೆ ಮಾಡಿದರು.

ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೋರಾಟದ ನಡುವೆಯೇ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಮಾಡಿ ಮಾತುಕತೆ ನಡೆಸಿದರು. ಪೊಲೀಸ್ ಅಧಿಕಾರಿಗಳೇ ತಮ್ಮನ್ನು ಕರೆದೊಯ್ದು ಗೃಹ ಸಚಿವರನ್ನು ಭೇಟಿ ಮಾಡಿಸಿದ್ದಾರೆ ಎಂದು ಭೇಟಿಯ ಬಳಿಕ ಅವರು ತಿಳಿಸಿದರು.

ಮಾತುಕತೆ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ, ‘ಸಾರಿಗೆ ನೌಕರರ ಬೇಡಿಕೆಗಳ ಕುರಿತು ಕೋಡಿಹಳ್ಳಿ ಚಂದ್ರಶೇಖರ್ ಪ್ರಸ್ತಾಪ ಮಾಡಿದರು. ಮೊದಲು ನೌಕರರು ಮುಷ್ಕರ ನಿಲ್ಲಿಸಿ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಅವರ ಎಲ್ಲ ಬೇಡಿಕೆಗಳನ್ನೂ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರ ಗಮನಕ್ಕೆ ತರುವುದಾಗಿ ಭರವಸೆ ನೀಡಿದ್ದೇನೆ’ ಎಂದರು.

‘ಕೋವಿಡ್ ಕಾರಣದಿಂದ ಹೋರಾಟದ ಸ್ವರೂಪದಲ್ಲಿ ಹೊಸ ಬದಲಾವಣೆಗಳಿಲ್ಲ. ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರ ಮುಂದುವರಿಸಲಾಗುವುದು. ಬೇಡಿಕೆ ಈಡೇರುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದು ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ.

ಏಳು ಬಸ್‌ಗಳಿಗೆ ಹಾನಿ: ಮುಷ್ಕರದ ನಡುವೆಯೂ ಸಂಚರಿಸಿದ ಸಾರಿಗೆ ನಿಗಮಗಳ ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿದ ಪ್ರಕರಣಗಳು ಸೋಮವಾರವೂ ನಡೆದಿವೆ. ಸೋಮವಾರ ಏಳು ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಮುಷ್ಕರ ಆರಂಭವಾದ ದಿನದಿಂದ ಈವರೆಗೆ ಒಟ್ಟು 112 ಬಸ್‌ಗಳಿಗೆ ಕಲ್ಲು ತೂರಾಟದಿಂದ ಹಾನಿಯಾಗಿದೆ ಎಂದು ಸಾರಿಗೆ ನಿಗಮಗಳ ಅಧಿಕಾರಿಗಳು ತಿಳಿಸಿದ್ದಾರೆ.

ಬಸ್‌ಗಳಿಗೆ ಹಾನಿ ಮಾಡಿರುವ ಆರೋಪದಡಿ ಸೋಮವಾರ 16 ಪ್ರಕರಣಗಳನ್ನು ದಾಖಲಿಸಲಾಗಿದೆ. ಬಸ್ ಸಂಚಾರಕ್ಕೆ ಅಡ್ಡಿಪಡಿಸಿದವರ ವಿರುದ್ಧ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಎಸ್ಮಾ) ಅಡಿಯಲ್ಲಿ ಹೊಸದಾಗಿ ಮೂರು ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಹಿಂದೆ ದಾಖಲಿಸಿದ್ದ ಪ್ರಕರಣಗಳ ಕೆಲವು ಆರೋಪಿಗಳನ್ನು ರೈತ ಸಂಘದ ಕಚೇರಿಯಿಂದ ಸೋಮವಾರ ಬೆಳಿಗ್ಗೆ ಬಂಧಿಸಿ ಕರೆದೊಯ್ಯಲಾಗಿದೆ.

ಸಾರಿಗೆ ನೌಕರರ ಮುಷ್ಕರ ಮುಂದುವರೆದಿದ್ದರಿಂದ ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಸೋಮವಾರ ಸಾರಿಗೆ ಸಂಸ್ಥೆಯ ಬಸ್‌ಗಳ ಜತೆಗೆ ಖಾಸಗಿ ಬಸ್‌ಗಳು ಕಾರ್ಯಾಚರಣೆ ನಡೆಸಿದವು. –ಪ್ರಜಾವಾಣಿ ಚಿತ್ರ

‘ಸಂಚರಿಸುತ್ತಿರುವ ಬಸ್ ಸಂಖ್ಯೆ ಕುರಿತು ಸಂಶಯ’

ಮುಷ್ಕರದ ನಡುವೆಯೂ ಸಂಚಾರ ನಡೆಸುತ್ತಿರುವ ಬಸ್‌ಗಳ ಸಂಖ್ಯೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ ಎಂದು ಸಾರಿಗೆ ನಿಗಮಗಳ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಈ ಸಂಖ್ಯೆಯ ಕುರಿತು ಸಾರಿಗೆ ನೌಕರರ ಕೂಟದ ಮುಖಂಡರು ಸಂಶಯ ವ್ಯಕ್ತಪಡಿಸಿದ್ದಾರೆ.

ಸೋಮವಾರ ಸಂಜೆಯವರೆಗೆ ನಾಲ್ಕು ನಿಗಮಗಳ ಒಟ್ಟು 5,929 ಬಸ್‌ಗಳು ಸಂಚಾರ ನಡೆಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಇದು ಸತ್ಯಾಂಶವಲ್ಲ ಎಂದಿರುವ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಆದಾಯದ ವಿವರ ಬಹಿರಂಗಪಡಿಸಲಿ ಎಂದು ಸವಾಲು ಹಾಕಿದ್ದಾರೆ. ‘ಒಂದಷ್ಟು ಬಸ್‌ಗಳು ಓಡುತ್ತಿರುವುದು ನಿಜ. ಕೆಲವು ಕಾರ್ಮಿಕ ಸಂಘಟನೆಗಳು ಮುಷ್ಕರದ ಅವಧಿಯಲ್ಲಿ ಬಸ್ ಸಂಚಾರಕ್ಕೆ ಬೆಂಬಲ ನೀಡುತ್ತಿವೆ. ಹಿರಿಯ ಅಧಿಕಾರಿಗಳೂ ಚಾಲಕ, ನಿರ್ವಾಹಕರ ಕೆಲಸ ಮಾಡುತ್ತಿದ್ದಾರೆ. ನಿವೃತ್ತರು, ಗುತ್ತಿಗೆ ಸಿಬ್ಬಂದಿಯನ್ನೂ ಬಳಸಲಾಗುತ್ತಿದೆ. ಆದರೆ, ಸಾರಿಗೆ ಇಲಾಖೆ ಅಧಿಕಾರಿಗಳು ಹೇಳಿದ ಪ್ರಮಾಣದ ಬಸ್‌ಗಳ ಸಂಚಾರ ನಡೆಯುತ್ತಿಲ್ಲ’ ಎಂದು ಚಂದ್ರಶೇಖರ್ ಹೇಳಿದರು.

ಸಂಧಾನ ಸಭೆ ನಡೆದಿಲ್ಲ: ಲಕ್ಷ್ಮಣ ಸವದಿ

ಬೆಂಗಳೂರು: ಮುಷ್ಕರನಿರತ ಸಾರಿಗೆ ನೌಕರರ ಸಂಘಟನೆಯ ಮುಖಂಡರ ಜತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸಂಧಾನ ಸಭೆ ನಡೆಸಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

‘ಕೋಡಿಹಳ್ಳಿ ಚಂದ್ರಶೇಖರ್ ಗೃಹ ಸಚಿವರನ್ನು ಭೇಟಿ ಮಾಡಿದ್ದಾರೆ. ಅಲ್ಲಿ ಯಾವ ಸಂಧಾನವೂ ನಡೆದಿಲ್ಲ. ನೌಕರರ ಸಂಘಟನೆಯ ಮುಖಂಡರು ಸುಳ್ಳು ಸುದ್ದಿ ಹರಿಯಬಿಟ್ಟಿದ್ದಾರೆ’ ಎಂದು ಹೇಳಿಕೆಯಲ್ಲಿ ದೂರಿದ್ದಾರೆ.

ಕೋವಿಡ್ ಸಂಕಷ್ಟದ ಕಾಲದಲ್ಲಿ ಮುಷ್ಕರ ನಡೆಸುವುದು ಸರಿಯಲ್ಲ. ಬಸ್‌ಗಳ ಮೇಲೆ ಕಲ್ಲು ತೂರಾಟ, ಹಾನಿ ಮಾಡುವುದು, ಹಿಂಸಾಚಾರ ಮಾಡುವುದರಿಂದ ಸಮಸ್ಯೆಗೆ ಪರಿಹಾರ ದೊರಕುವುದಿಲ್ಲ ಎಂಬುದನ್ನು ನೌಕರರು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

ಕರಪತ್ರಕ್ಕೆ ಆಕ್ಷೇಪ: ಸಭೆಯ ಸಂದರ್ಭದಲ್ಲಿ ತಾವು ಯಾವುದೇ ಭರವಸೆ ನೀಡಿಲ್ಲ. ಕೋಡಿಹಳ್ಳಿ ಚಂದ್ರಶೇಖರ್ ತಪ್ಪು ಮಾಹಿತಿಯುಳ್ಳ ಕರಪತ್ರ ಮುದ್ರಿಸಿ, ಹಂಚುವ ಮೂಲಕ ನೌಕರರನ್ನು ದಿಕ್ಕು ತಪ್ಪಿಸಲು ಯತ್ನಿಸಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ಸ್ಪಷ್ಟನೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ರಾಜಕಾರಣಿಗಳ ನಡೆಯಿಂದ ಜನರಲ್ಲಿ ಗೊಂದಲ: ಉಪೇಂದ್ರ

ಬೆಂಗಳೂರು: ‘ರಾಜಕಾರಣಿಗಳು ಟಿ.ವಿ ಮುಂದೆ ಹೇಳುವುದೊಂದು. ಜನರ ಮುಂದೆ ನಡೆದುಕೊಳ್ಳುವುದು ಮತ್ತೊಂದು ರೀತಿ. ಮಾಸ್ಕ್ ಹಾಕಿ, ಪರಸ್ಪರ ಅಂತರ ಕಾಪಾಡಿಕೊಳ್ಳಿ ಎನ್ನುವ ಅವರ ಸಭೆ, ಸಮಾರಂಭಗಳಲ್ಲೇ ಲಕ್ಷಾಂತರ ಜನರು ಸೇರುತ್ತಾರೆ. ಇದರಿಂದ ಜನರಲ್ಲಿ ಗೊಂದಲ ಉಂಟಾಗಿದೆ’ ಎಂದು ನಟ ಉಪೇಂದ್ರ ಹೇಳಿದ್ದಾರೆ.

ಸೋಮವಾರ ನಡೆದ ತಮ್ಮ ಹೊಸ ಸಿನಿಮಾ ‘ಲಗಾಮ್’ನ ಮುಹೂರ್ತ ಕಾರ್ಯಕ್ರಮದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು. ‘ಈಗ ಕಾಲಪಕ್ವವಾಗುತ್ತಿದೆ. ರಾಜಕೀಯ ಉದ್ಯಮ ಆದಾಗ ಏನೇನಾಗುತ್ತದೆ ಎನ್ನುವುದು ಜನರಿಗೆ ಅರ್ಥವಾಗುತ್ತಿದೆ. ಇದರ ಪರಿಣಾಮ ಏನು? ಯಾರನ್ನೂ ಕೇಳಲು ಆಗದ ಪರಿಸ್ಥಿತಿ ಎದುರಾಗಿದೆ. ಆಡಳಿತ ಎಂದರೆ ಜನ. ದೇಶ ಎಂದರೆ ಜನ. ದೇಶ ಉದ್ಧಾರ ಆಗಲು ಜನ ಉದ್ಧಾರ ಆಗಬೇಕು. ಜನ ಉದ್ಧಾರ ಆಗಬೇಕು ಎಂದರೆ ಅವರು ವಿಚಾರವಂತರಾಗಬೇಕು. ಚುನಾವಣೆ ಸಂದರ್ಭದಲ್ಲೇ ತಪ್ಪು ಮಾಡಿ, ಆಮೇಲೆ ಹೋರಾಟ ಮಾಡುತ್ತೇವೆ ಎಂದರೆ ಪ್ರಯೋಜನವೇನು? ನಮಗೆ ಅಧಿಕಾರ ಸಿಕ್ಕಿದಾಗ ತಪ್ಪು ಮಾಡಿಬಿಟ್ಟು, ಆ ಮೇಲೆ ಮಾತನಾಡಿ ಪ್ರಯೋಜನವಿಲ್ಲ’ ಎಂದು ಹೇಳಿದರು.

ಮೂಡಿಗೆರೆಯಲ್ಲಿ ಧಾರಾಕಾರ ಮಳೆ

ಮೂಡಿಗೆರೆ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಹಲವೆಡೆ ಸೋಮವಾರ ಧಾರಾಕಾರ ಮಳೆಯಾಗಿದೆ.

ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಶುರುವಾದ ಮಳೆ, ಒಂದು ಗಂಟೆ ಸುರಿಯಿತು. ಕಟಾವು ಮಾಡದ ಕಾಳು ಮೆಣಸು, ಮಾವಿನ ಮಿಡಿಗೆ ಹಾನಿ ಉಂಟಾಗಿದೆ. ಚಿಕ್ಕಮಗಳೂರು ಹಾಗೂ ಸುತ್ತಲಿನ ಹಲವೆಡೆ ತುಂತುರು ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಮೋಡ ಕವಿದ ವಾತಾವರಣವಿದ್ದು, ಕೆಲವೆಡೆ ತುಂತುರು ಮಳೆಯಾಗಿದೆ.

ಉತ್ತಮ ಮಳೆ: ಕೊಡಗು ಜಿಲ್ಲೆಯ ಸಿದ್ದಾಪುರ, ಗುಹ್ಯ, ಕರಡಿಗೋಡು, ಕುಶಾಲನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಗುಡುಗು–ಮಿಂಚು ಸಹಿತ ಮಳೆಯಾಗಿದೆ. ವಿರಾಜಪೇಟೆ ಭಾಗದಲ್ಲಿ ಸಾಧಾರಣ ಮಳೆ ಬಿದ್ದಿದೆ. ಹಾಸನದಲ್ಲಿ ತುಂತುರು ಮಳೆಯಾಗಿದೆ. ಕೊಪ್ಪಳ ಜಿಲ್ಲೆಯ ಅಳವಂಡಿ ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸೋಮವಾರ ಮಳೆಯಾಯಿತು.

ಜಿ.ಪಂ, ತಾ.ಪಂ ಚುನಾವಣೆ ಮುಂದೂಡಲು ಚಿಂತನೆ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವುದರಿಂದ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮುಂದೂಡಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಕೆ.ಎಸ್. ಈಶ್ವರಪ್ಪ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ‘ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಲಾಗುವುದು’ ಎಂದರು.

‘ಕೋವಿಡ್ ಸೋಂಕು ನಿರೀಕ್ಷೆಗೂ ಮೀರಿ ಹೆಚ್ಚುತ್ತಿದೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಸುಮಾರು 3.5 ಕೋಟಿ ಗ್ರಾಮೀಣ ಭಾಗದ ಮತದಾರರು ಭಾಗವಹಿಸಬೇಕಾಗುತ್ತದೆ. ಸೋಂಕು ಒಬ್ಬರಿಂದ ಒಬ್ಬರಿಗೆ ಹಬ್ಬುವ ಸಾಧ್ಯತೆ ಇರುವುದರಿಂದ ಚುನಾವಣೆ ನಡೆಸುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಹೀಗಾಗಿ, ಮುಂದೂಡಲು ಆಯೋಗಕ್ಕೆ ಮನವಿ ಮಾಡುತ್ತೇವೆ’ ಎಂದರು.

‘ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಂದರ್ಭದಲ್ಲಿ ಕೋವಿಡ್ ಸೋಂಕು ಇಷ್ಟು ಪ್ರಮಾಣದಲ್ಲಿ ಹರಡುತ್ತಿರಲಿಲ್ಲ. ಈಗ ಪರಿಸ್ಥಿತಿ ಗಂಭೀರವಾಗಿದೆ. ಬಹುತೇಕ ರಾಜಕೀಯ ಪಕ್ಷಗಳ ಮುಖಂಡರು ಚುನಾವಣೆ ಮುಂದೂಡುವಂತೆ ಮನವಿ ಮಾಡಿದ್ದಾರೆ. ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗಲೂ ಇದೇ ಅಭಿಪ್ರಾಯ ವ್ಯಕ್ತವಾಗಿದೆ’ ಎಂದರು.

‘ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರ ಅಧಿಕಾರ ಅವಧಿ ಮುಗಿಯುವುದರಿಂದ ಆಡಳಿತ ಅಧಿಕಾರಿಯನ್ನು ನೇಮಕ ಮಾಡಲಾಗುವುದು. ಪರಿಸ್ಥಿತಿ ಸಹಜ ಸ್ಥಿತಿಗೆ ಬಂದ ಬಳಿಕ ಚುನಾವಣೆ ನಡೆಸಲು ಆಯೋಗಕ್ಕೆ ಮನವಿ ಮಾಡುತ್ತೇವೆ’ ಎಂದು ಈಶ್ವರಪ್ಪ ಸ್ಪಷ್ಟಪಡಿಸಿದರು.

‘ನಾಲೆ, ಕಲ್ಯಾಣಿ, ಗೋಕಟ್ಟೆಗಳನ್ನು ನರೇಗಾ ಮೂಲಕ ಅಭಿವೃದ್ಧಿಪಡಿಸಲಿದ್ದೇವೆ. ಮಳೆ ನೀರನ್ನು ಭೂಮಿಯಲ್ಲಿ ಇಂಗಿಸುವ ಕೆಲಸ ಇಲಾಖೆ ವತಿಯಿಂದ ಮಾಡುತ್ತೇವೆ. ಕೆರೆ ಅಭಿವೃದ್ಧಿ ಹೊಣೆಯನ್ನು ಗ್ರಾಮ ಪಂಚಾಯಿತಿಗೆ ವಹಿಸುತ್ತೇವೆ’ ಎಂದು ಈಶ್ವರಪ್ಪ ಹೇಳಿದರು.

‘ದೆಹಲಿಯಲ್ಲಿ ಹೆಚ್ಚಿನ ಕೋವಿಡ್ ಪ್ರಕರಣಗಳು ಕಾಣಿಸಿಕೊಂಡಿರುವುದರಿಂದ ಅಲ್ಲಿನ ಸರ್ಕಾರ ಲಾಕ್‌ಡೌನ್ ಜಾರಿ ಮಾಡಿದೆ. ಆ ರೀತಿಯ ಪರಿಸ್ಥಿತಿ ಬೆಂಗಳೂರಿನಲ್ಲಿ ಇಲ್ಲ. ಹೀಗಾಗಿ, ಲಾಕ್‌ಡೌನ್ ಜಾರಿ ಮಾಡಬೇಕಾದ ಅಗತ್ಯವಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.

ಶೀರೂರು ಮಠಕ್ಕೆ ನೂತನ ಉತ್ತರಾಧಿಕಾರಿ ನೇಮಕ

ಉಡುಪಿ: ಶೀರೂರು ಮಠಕ್ಕೆ ನೂತನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲಾಗಿದೆ.

ಮಠದ ಹಿರಿಯ ಯತಿಗಳಾಗಿದ್ದ ಲಕ್ಷ್ಮೀವರ ತೀರ್ಥ ಸ್ವಾಮೀಜಿ ಮೃತಪಟ್ಟು 2 ವರ್ಷ 9 ತಿಂಗಳ ಬಳಿಕ ಮಠಕ್ಕೆ ಉತ್ತರಾಧಿಕಾರಿಯ ನೇಮಕ ನಡೆಯುತ್ತಿದೆ.

ನೂತನ ಮಠಾಧಿಪತಿಯ ಪರಿಚಯ ಹಾಗೂ ಪಟ್ಟಾಭಿಷೇಕದ ಕುರಿತು ಏ.21ರಂದು ಹಿರಿಯಡ್ಕ ಸಮೀಪದ ಶೀರೂರು ಮೂಲ ಮಠದಲ್ಲಿ ಮಾಹಿತಿ ನೀಡಲಾಗುವುದು ಎಂದು ಮಠದ ಸಿಬ್ಬಂದಿ ತಿಳಿಸಿದ್ದಾರೆ.

ಜುಲೈ 19, 2018ರಂದು ಶೀರೂರು ಮಠದ ಹಿರಿಯ ಯತಿ ಲಕ್ಷ್ಮೀವರ ತೀರ್ಥ ಸ್ವಾಮೀಜಿ ನಿಧನರಾಗಿದ್ದರು. ಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡಬೇಕು ಎಂಬ ಒತ್ತಾಯ ಶ್ರೀಗಳ ಅಭಿಮಾನಿಗಳಿಂದ ಕೇಳಿಬಂದಿತ್ತು.

ಅತ್ಯಾಚಾರ ಪ್ರಕರಣ; ರಮೇಶ ಜಾರಕಿಹೊಳಿ ವಿಚಾರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಆರೋಪ ಪ್ರಕರಣದ ಸಂಬಂಧ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ಮಂಗಳವಾರ (ಏ. 20) ವಿಶೇಷ ತನಿಖಾ ದಳದ (ಎಸ್‌ಐಟಿ) ಎದುರು ಹಾಜರಾಗುವ ಸಾಧ್ಯತೆ ಇದ್ದು, ಅವರನ್ನು ವಿಚಾರಣೆಗೆ ಒಳಪಡಿಸಲು ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

‘ಕೊರೊನಾ ಸೋಂಕು ತಗುಲಿದ್ದರಿಂದಾಗಿ ಈ ಹಿಂದೆ ವಿಚಾರಣೆಗೆ ರಮೇಶ ಗೈರಾಗಿದ್ದರು. ಕೆಲ ದಿನಗಳ ಹಿಂದೆಯೇ ಅವರು ಆಸ್ಪತ್ರೆಯಿಂದ ಮನೆಗೆ ಹೋಗಿದ್ದಾರೆ. ಏಪ್ರಿಲ್ 20ರಂದು ಸಂಜೆ 4 ವಿಚಾರಣೆಗಾಗಿ ಬೆಂಗಳೂರು ಆಡುಗೋಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಬರುವಂತೆ ನೋಟಿಸ್ ನೀಡಲಾಗಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ನೋಟಿಸ್ ಪ್ರತಿ ನೀಡಲು ರಮೇಶ ಮನೆ ಇರುವ ಗೋಕಾಕಗೆ ಅಧಿಕಾರಿಗಳು ಹೋಗಿದ್ದರು. ಆದರೆ, ಅವರು ಲಭ್ಯರಾಗಲಿಲ್ಲ. ಹೀಗಾಗಿ, ರಮೇಶ ಸಹೋದರರೂ ಆಗಿರುವ ಶಾಸಕ ಬಾಲಚಂದ್ರ ಜಾರಕಿಹೊಳಿ ಕಚೇರಿಗೆ ನೋಟಿಸ್ ಪ್ರತಿ ಅಂಟಿಸಿ ಬರಲಾಗಿದೆ. ಪರ್ಯಾಯ ಮಾರ್ಗದಲ್ಲೂ ನೋಟಿಸ್ ಕಳುಹಿಸಲಾಗಿದೆ’ ಎಂದೂ ತಿಳಿಸಿವೆ.

‘ಇದೊಂದು ಗಂಭೀರ ಪ್ರಕರಣ. ಸಂತ್ರಸ್ತೆಯು ತನಿಖೆಗೆ ಸಹಕಾರ ನೀಡುತ್ತಿದ್ದಾರೆ ಆದರೆ, ಆರೋಪಿ ವಿಚಾರಣೆಗೆ ಬಂದಿಲ್ಲ. ಈ ಬಾರಿಯೂ ಅವರು ವಿಚಾರಣೆಗೆ ಹಾಜರಾಗದಿದ್ದರೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದೂ ಎಸ್‌ಐಟಿ ಮೂಲಗಳು ಹೇಳಿವೆ.

ಕಬ್ಬನ್ ಪಾರ್ಕ್ ಠಾಣೆ ಪ್ರಕರಣ: ಮಾರ್ಚ್ 2ರಂದು ಸಿ.ಡಿ. ಪ್ರಕರಣ ಬಯಲಿಗೆ ಬರುತ್ತಿದ್ದಂತೆ ಅಜ್ಞಾತ ಸ್ಥಳಕ್ಕೆ ಹೋಗಿದ್ದ ಸಂತ್ರಸ್ತೆ, ವಕೀಲರ ಮೂಲಕ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಅತ್ಯಾಚಾರ ಆರೋಪದಡಿ ರಮೇಶ ಜಾರಕಿಹೊಳಿ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಮಾ. 30ರಂದು ನ್ಯಾಯಾಲಯದ ಎದುರು ಹಾಜರಾಗಿದ್ದರು. ‘ಕೆಲಸದ ಆಮಿಷವೊಡ್ಡಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಆರೋಪಿಸಿ ಸಿಆರ್‌ಪಿಸಿ 164ರಡಿ ಹೇಳಿಕೆ ಸಹ ನೀಡಿದ್ದರು. ಅದೇ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಿರುವ ತನಿಖಾಧಿಕಾರಿ ಎಂ.ಸಿ. ಕವಿತಾ, ಸಂತ್ರಸ್ತೆ ಹೇಳಿಕೆ ಸಂಗ್ರಹ ಹಾಗೂ ವೈದ್ಯಕೀಯ ಪರೀಕ್ಷೆ ಪ್ರಕ್ರಿಯೆಗಳನ್ನು ಈಗಾಗಲೇ ಪೂರೈಸಿದ್ದಾರೆ.

ಆರೋಪಿಯನ್ನೂ ವಿಚಾರಣೆಗೆ ಒಳಪಡಿಸುವುದಕ್ಕಾಗಿ ರಮೇಶ ಜಾರಕಿಹೊಳಿ ಅವರಿಗೆ ಹಲವು ಬಾರಿ ನೋಟಿಸ್ ನೀಡಲಾಗಿತ್ತು. ಕೊರೊನಾ ಸೋಂಕು ತಗುಲಿದ್ದರಿಂದಾಗಿ ರಮೇಶ ಅವರು, ವಕೀಲರ ಮೂಲಕ ಕಾಲಾವಕಾಶ ಕೋರಿದ್ದರು.

‘ಇದು ನನ್ನ ಡೆತ್ ನೋಟ್’

ಪ್ರಜಾವಾಣಿ ವಾರ್ತೆ

ಗುರುಪ್ರಸಾದ್

ಬೆಂಗಳೂರು: ನಿರ್ದೇಶಕ ಗುರುಪ್ರಸಾದ್ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಈ ಸಂದರ್ಭದಲ್ಲಿ ಫೇಸ್‌ಬುಕ್‌ನಲ್ಲಿ ವಿಡಿಯೊವೊಂದನ್ನು ಅಪ್‌ಲೋಡ್ ಮಾಡಿ ‘ಇದು ನನ್ನ ಡೆತ್ ನೋಟ್’ ಎಂದಿದ್ದಾರೆ. ‘ಕರ್ನಾಟಕದಲ್ಲಿ ಕೋವಿಡ್‌ನಿಂದ ಸತ್ತ ಪ್ರತಿಯೊಂದು ಸಾವಿಗೂ ಡಾ.ಸುಧಾಕರ್, ಯಡಿಯೂರಪ್ಪ ಹಾಗೂ ವಿಜಯೇಂದ್ರ ಕಾರಣ. ನನ್ನ ಸಾವಿಗೂ ಇವರೇ ಕಾರಣ’ ಎಂದು ಆಕ್ರೋಶ ಹೊರಹಾಕಿದ್ದಾರೆ.

‘ಇದು ಕೊನೆಯ ಕ್ಷಣಗಳ ಕೊನೆಯ ಮಾತು. ನನಗೆ ಕೋವಿಡ್ ದೃಢಪಟ್ಟಿದೆ. ನನ್ನ ಮನೆಯವರೆಗೂ ಕೊರೊನಾ ತಂದ ಯಡಿಯೂರಪ್ಪ, ವಿಜಯೇಂದ್ರ ಇವರುಗಳಿಗೆ ಧನ್ಯವಾದ. ನಾನು ಸತ್ತರೆ ಒಂದು ಇರುವೆ ಸತ್ತಂತೆ. ನನ್ನ ಸಾವಿಗೆ ಮುನ್ನುಡಿ ಬರೆದಿದ್ದೀರಿ. ಕೋವಿಡ್ ಪಾಸಿಟಿವ್ ಆದ ನೋವಿನಿಂದ ಮಾತನಾಡುತ್ತಿದ್ದೇನೆ. ನಾ ಸತ್ತರೂ ಕೂಡಾ, ಈ ಶಾಪ, ನೋವು ಕಳ್ಳತನದ ದುಡ್ಡು ಮಾಡಿರುವವರಿಗೆ ತಟ್ಟಲಿ ಎಂದು ಮಾತನಾಡುತ್ತಿದ್ದೇನೆ’ ಎಂದು ಉಲ್ಲೇಖಿಸಿದ್ದಾರೆ.

‘ಸಾವನ್ನು ಸಂಭ್ರಮಿಸುವ ವ್ಯಕ್ತಿ’: ಕಾಂಗ್ರೆಸ್–ಬಿಜೆಪಿ ಟ್ವೀಟ್ ಕದನ

ಬೆಂಗಳೂರು: ಕೋವಿಡ್ ಪ್ರಕರಣ ಹೆಚ್ಚಾಗುತ್ತಿರುವ ಬೆನ್ನಲ್ಲೇ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಟ್ವೀಟ್ ಸಮರ ತಾರಕಕ್ಕೆ ಏರಿದೆ.

‘ಸಾವನ್ನು ಸಂಭ್ರಮಿಸುವ ವ್ಯಕ್ತಿ’ ಎಂದು ಪರೋಕ್ಷವಾಗಿ ಪ್ರಧಾನಿ ಮೋದಿ ವಿರುದ್ಧ ಕಾಂಗ್ರೆಸ್ ಮಾಡಿರುವ ಟ್ವೀಟ್‌ಗೆ ಬಿಜೆಪಿ ಕಿಡಿ ಕಾರಿದೆ.

‘ಗುಜರಾತ್ ಗಲಭೆ ಸಾವಿರ ಜನ, ನೋಟ್ ಬ್ಯಾನ್ ನೂರಾರು ಜನ, ರೈತ ಹೋರಾಟ 300 ಕ್ಕೂ ಹೆಚ್ಚು ಜನ, ವಲಸೆ ಕಾರ್ಮಿಕರು ಸಾವಿರಾರು ಜನ. ಸಾವಿನ ಮೆರವಣಿಗೆಯನ್ನೇ ಮಾಡಿದ ಇತಿಹಾಸ ಹೊಂದಿದ ಕೊಲೆಗಡುಕ ಫಕೀರನಿಗೆ ಕೊರೋನಾ ಸಾವುಗಳಿಂದ ಹೃದಯ ಕರಗದು. ಆತ ಸಾವುಗಳನ್ನು ಸಂಭ್ರಮಿಸುವ ವಿಕೃತ ವ್ಯಕ್ತಿ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಸಿಖ್ ಹತ್ಯಾಕಾಂಡ ನಿಮ್ಮದಲ್ಲವೇ: ಇದಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, ‘ಇಂತಹ ಮಾತುಗಳಿಂದ ಮೋದಿ ವಿಚಲಿತರಾಗುತ್ತಾರೆ ಎನ್ನುವ ಭ್ರಮೆಯಿಂದ ಕಾಂಗ್ರೆಸ್ ಹೊರಗೆ ಬರಬೇಕು. ನಕಲಿ ಗಾಂಧಿ ಪರಿವಾರದ ಇಟಲಿ ಪ್ರಜೆ ಈ ಹಿಂದೆ, ಮೋದಿ ಅವರನ್ನು ಸಾವಿನ ವ್ಯಾಪಾರಿ ಎಂದಿದ್ದರು. ಈ ಮಾತಿಗೆ ಜನರೇ ತಕ್ಕ ಉತ್ತರ ನೀಡಿದ್ದರು. ಇಂದಿರಾ ಗಾಂಧಿಯ ಹತ್ಯೆಯ ನಂತರ ಕಾಂಗ್ರೆಸ್ ಮಾಡಿದ ಸಿಖ್ ಹತ್ಯಾಕಾಂಡವನ್ನು ದೇಶ ಮರೆತಿಲ್ಲ’ ಎಂದು ಕುಟುಕಿದೆ.

‘ಕೃಷ್ಣ ಟಾಕೀಸ್’ ಪ್ರದರ್ಶನ ಸ್ಥಗಿತ

ನಟ ಅಜೇಯ್ ರಾವ್ ಹಾಗೂ ನಟಿ ಅಪೂರ್ವ

ಬೆಂಗಳೂರು: ಕಳೆದ ಶುಕ್ರವಾರವಷ್ಟೇ ತೆರೆಕಂಡಿದ್ದ ನಟ ಅಜೇಯ್ ರಾವ್ ಅಭಿನಯದ ‘ಕೃಷ್ಣ ಟಾಕೀಸ್’ ಚಿತ್ರವನ್ನು ಏಪ್ರಿಲ್ 22ರವರೆ ಪ್ರದರ್ಶಿಸಿ, ನಂತರ ಸ್ಥಗಿತಗೊಳಿಸಲು ಚಿತ್ರತಂಡವು ತೀರ್ಮಾನಿಸಿದೆ.

ಚಿತ್ರ ಒಳ್ಳೆಯ ಆರಂಭ ಪಡೆದುಕೊಂಡು ಪ್ರೇಕ್ಷಕರ ಮನಗೆದ್ದಿದೆ. ಆದರೆ ಕೊರೊನಾ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಜನರ ಆರೋಗ್ಯದ ಹಿತದೃಷ್ಟಿಯಿಂದ ಪ್ರದರ್ಶನವನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ ಎಂದು ನಿರ್ಮಾಪಕ ಗೋವಿಂದರಾಜು ಹೇಳಿದ್ದಾರೆ.

3 ಹಸುಗಳ ಹತ್ಯೆ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ತಿತಿಮತಿ ಸಮೀಪದ ದೇವರಪುರ ಪಂಚಾಯಿತಿಗೆ ಒಳಪಡುವ ಹೆಬ್ಬಾಲೆ ಕಾಯಂಬೆಟ್ಟ ಎಸ್ಟೇಟ್‌ನಲ್ಲಿ ಮೂರು ಹಸುಗಳಿಗೆ ಗುಂಡಿಕ್ಕಿ, ಕತ್ತಿನ ಭಾಗವನ್ನು ಕೊಯ್ದು ಹತ್ಯೆ ಮಾಡಲಾಗಿದೆ.

ಕಳೇಬರ ಅಲ್ಲೇ ಬಿಟ್ಟು ಹೋಗಿದ್ದು, ಮಾಂಸಕ್ಕಾಗಿ ಈ ಕೃತ್ಯ ಎಸಗಲಾಗಿದೆ ಎಂದು ಸ್ಥಳೀಯರು ಶಂಕಿಸಿದ್ದಾರೆ. ಈ ಹಸುಗಳು ಕಳ್ಳಿಚಂಡ ಪುಣಚ್ಚ, ಕಳ್ಳಿಚಂಡ ಗಣಪತಿ, ಸುಬ್ರ ಅವರಿಗೆ ಸೇರಿವೆ. ಭಾನುವಾರ ಸಂಜೆ ಆರು ಗಂಟೆಗೆ ಎಸ್ಟೇಟ್ ಒಳಗೆ ಗುಂಡಿನ ಸದ್ದು ಕೇಳಿತು ಎಂದು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಈಚೆಗೆ ಕೈಕೇರಿಯ ಗುಡ್ಡೆಮನೆ ಪ್ರಾಣೇಶ್, ಹಸು ಕಾಣೆಯಾಗಿದ್ದಾಗಿ ದೂರು ನೀಡಿದ್ದರು.

ಬಾವಗಿ: ಸ್ವಯಂಪ್ರೇರಿತ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

ಜನವಾಡ (ಬೀದರ್ ಜಿಲ್ಲೆ): ಕೋವಿಡ್ ಹೆಚ್ಚುತ್ತಿರುವ ಕಾರಣ ಬೀದರ್ ತಾಲ್ಲೂಕಿನ ಬಾವಗಿ ಗ್ರಾಮಸ್ಥರು ಸ್ವಯಂ ಪ್ರೇರಿತ ಲಾಕ್‌ಡೌನ್ ವಿಧಿಸಿಕೊಂಡಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯರಾದ ಶಾಂತವೀರ ಹಜ್ಜರಗಿ, ತಾಜೊದ್ದಿನ್ ಹಾಗೂ ಗುರು ಭದ್ರೇಶ್ವರ ಸಂಸ್ಥಾನ ಮಠದ ಶಿವಕುಮಾರ ಸ್ವಾಮಿ ಮೊದಲಾದವರ ಜಾಗೃತಿ ಪರಿಣಾಮ ಸದ್ಯ ಗ್ರಾಮದಲ್ಲಿ ಕಿರಾಣಿ ಅಂಗಡಿಗಳನ್ನು ಹೊರತುಪಡಿಸಿ ಉಳಿದ ಅಂಗಡಿಗಳು ಬಂದ್ ಆಗಿವೆ.

‘ಕಿರಾಣಿ ಅಂಗಡಿಗಳು ಬೆಳಿಗ್ಗೆ 6 ರಿಂದ 8 ಹಾಗೂ ಸಂಜೆ 6ರಿಂದ 8 ಗಂಟೆ ವರೆಗೆ ಮಾತ್ರ ತೆರೆದಿರುತ್ತವೆ. ಕೋವಿಡ್ ಸೋಂಕಿನಿಂದಾಗಿ ಜನಸಂದಣಿಯಿಂದ ಆದಷ್ಟು ದೂರ ಇರುವುದು ಒಳ್ಳೆಯದು. ಪಂಚಾಯಿತಿ ಸದಸ್ಯರು ಹಾಗೂ ಗ್ರಾಮದ ಪ್ರಮುಖರ ಮನವೊಲಿಕೆ ಕಾರಣ ವ್ಯಾಪಾರಿಗಳು ಹೋಟೆಲ್ ಮತ್ತು ಅಂಗಡಿಗಳನ್ನು ಮುಚ್ಚಿಟ್ಟದ್ದಾರೆ. ಜನ ಗುಂಪು ಗುಂಪಾಗಿ ಓಡಾಡುವುದನ್ನು ಕಡಿಮೆ ಮಾಡಿದ್ದಾರೆ’ ಎಂದು ಶಿವಕುಮಾರ ಸ್ವಾಮಿ ತಿಳಿಸಿದರು.

‘ಕೋವಿಡ್ ಸಾವು ನೋವುಗಳಿಗೆ ಕಾರಣವಾಗಿದೆ. ಗ್ರಾಮದಲ್ಲಿ ಯಾರಿಗೂ ಸಮಸ್ಯೆ ಆಗಬಾರದು ಎನ್ನುವುದೇ ಸ್ವಯಂ ಪ್ರೇರಿತ ಲಾಕ್‌ಡೌನ್ ಉದ್ದೇಶವಾಗಿದೆ’ ಎಂದು ಹೇಳಿದರು.

ಬಾವಗಿ ಗ್ರಾಮದಲ್ಲಿ 600 ಮನೆಗಳಿದ್ದು, 2400 ಜನಸಂಖ್ಯೆ ಇದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಸಂ.ಜಿಪಂಬ/ಆಡಳಿತ/191/2017–18 ದಿನಾಂಕ: 19.04.2021
ಟೆಂಡರ್ ಪ್ರಕಟಣೆ
(1) **ಸಂಗ್ರಹಣೆ ಮಾಡಬೇಕಾದ ವಿವರ:** ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡುವ ಕುರಿತು. (2) **ಟೆಂಡರ್ ಸಂಖ್ಯೆ:** NO/ZPB/ADMIN/191/2017-18 (3) **ಟೆಂಡರಿಗೆ ಇಟ್ಟ ಮೊತ್ತ: ರೂ.163.00 ಲಕ್ಷಗಳು** (4) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04.05.2021 @ 17.30 PM** (5) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ–ಸಂಗ್ರಹಣಾ ವೇದಿಕೆಯ ಅಧಿಕೃತ ಜಾಲತಾಣದ ವಿಳಾಸ: **https://eproc.karnataka.gov.in**
ಸಹಿ/–
ಉಪ ಕಾರ್ಯದರ್ಶಿ (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/47/2021–22

ಕರ್ನಾಟಕ ಸರಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 08372–297213,
ಇ–ಮೇಲ್: gimsgadag@gmail.com
ಪ್ರಿಕ್ವಾಲಿಫಿಕೇಷನ್‌ಗೆ ‘ಇ’ – ಟೆಂಡರ ಪ್ರಕಟಣೆ
ನಿರ್ದೇಶಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಇವರು ಗದಗ ಆವರಣದಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಅರ್ಹ ಗುತ್ತೇದಾರರನ್ನು ಗುರುತಿಸಲು ಪ್ರಿಕ್ವಾಲಿಫಿಕೇಷನ್‌ಗಾಗಿ ‘ಇ’ ಟೆಂಡರ ಮೂಲಕ ತಾಂತ್ರಿಕ ಅರ್ಹತೆಯ ದಾಖಲೆಗಳನ್ನು ಸಲ್ಲಿಸಲು ಟೆಂಡರಗಳನ್ನು ಆಹ್ವಾನಿಸಲಾಗಿದೆ.
1. Repair of electrical works to Block A & Block B Quarters at GIMS meidcal college at GADAG.
2. Providing additional 2nd 5 MVA, 33/11 KV Power Transformer at 33/11 KV Sub-station Medical College Gadag.
ಈ ಮೇಲಿನ ಕಾಮಗಾರಿಗಳಿಗೆ ಟೆಂಡರ ಪ್ರಕಟಣೆ ವಿವರಗಳನ್ನು ಹಾಗೂ ಗುತ್ತೇದಾರರು ಕಾಮಗಾರಿಯ ಟೆಂಡರ ಪುಸ್ತಕ ಕೆಡಬ್ಲ್ಯು–4 ರ ಪ್ರಕಾರ ತಾಂತ್ರಿಕ ಅರ್ಹತೆ ಪಡೆಯಲು ಲಗತ್ತಿಸಿರುವ ಎಲ್ಲಾ ದಾಖಲೆಗಳನ್ನು ಕರ್ನಾಟಕ ಸರ್ಕಾರದ “ಇ ಪ್ರೊಕ್ಯುರಮೆಂಟ್” ವೆಬ್ ಸೈಟ್‌ನಲ್ಲಿ ಲಾಗಿನ್ ಆಗಿ **https://eproc.karnataka.gov.in** ಪಡೆದು ಟೆಂಡರಗಳನ್ನು ಸಲ್ಲಿಸಬಹುದು.
(i) ಟೆಂಡಗಳನ್ನು ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ : **30.04.2021** ಕ್ಕೆ 4.00 ಸಂಜೆ (ii) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಅಂತಿಮ ದಿನಾಂಕ ಮತ್ತು ಸಮಯ : **02.05.2021** ಕ್ಕೆ 11.00 ಮುಂಜಾನೆ
ಸಹಿ/– ನಿರ್ದೇಶಕರು,
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ.
ವಾಸಾಸಂಇ/ಗದಗ/ಎಂ.ಸಿ.ಎ/32/2021–22

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ ಕ್ಯಾಂಪಸ್, ಬೆಂಗಳೂರು – 560 065.
ಸಂಖ್ಯೆ: ಆಅ/ಟಿ.ಎನ್/447/2021–22 ದಿನಾಂಕ: 15–04–2021
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ **ಕ್ರಮ ಸಂಖ್ಯೆ–1ರ** ಕೆಲಸಕ್ಕೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: www.eproc.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿ ಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.
ಕಾಮಗಾರಿಯ ಪ್ರೀ–ಬಿಡ್ ಮೀಟಿಂಗ್ ದಿನಾಂಕ: **10–05–2021ರಂದು ಬೆಳಿಗ್ಗೆ 10:30 ಗಂಟೆ** ಆಗಿರುತ್ತದೆ. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **26–05–2021ರಂದು ಅಪರಾಹ್ನ 4 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: **28–05–2021ರಂದು ಬೆಳಿಗ್ಗೆ 10:30ಕ್ಕೆ** ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು ದಿನಾಂಕ: **07–06–2021ರಂದು ಬೆಳಿಗ್ಗೆ 10:30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080–23332765 ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ–hphelpdesk.blr@intarvo.com ಮತ್ತು 080-23010900 / 01 ಮತ್ತು 080–38013000.
ಸಹಿ/–
ಆಸ್ತಿ ಅಧಿಕಾರಿಗಳು
ವಾಸಾಸಂಇ/ಬೆಂನ/186/MAA Comm/2021–22
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತೋಟಗಾರಿಕೆ ಇಲಾಖೆ, ವಿಜಯಪುರ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ, ಕಛೇರಿ (ರಾ.ವ) ವಿಜಯಪುರ.
ಬಹಿರಂಗ ಹರಾಜು
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ.) ವಿಜಯಪುರ ರವರ ಕಛೇರಿ ಅಧೀನ ದೇವರ ಹಿಪ್ಪರಗಿ ತೋಟಗಾರಿಕೆ ಕ್ಷೇತ್ರದಲ್ಲಿ ಫಸಲು ಬಿಟ್ಟು ಚಿಕ್ಕು 203 ಗಿಡಗಳ ಬಹಿರಂಗ ಹರಾಜನ್ನು **ದಿನಾಂಕ : 21.04.2021ರಂದು ಬುಧವಾರ ಬೆಳಿಗ್ಗೆ 11.00** ದೇವರ ಹಿಪ್ಪರಗಿ ತೋಟಗಾರಿಕೆ ಕ್ಷೇತ್ರದಲ್ಲಿ ಏರ್ಪಡಿಸಲಾಗಿದ್ದು ಆಸಕ್ತರು ಸದರಿ ಚಿಕ್ಕು ಫಸಲಿನ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ದೇವರ ಹಿಪ್ಪರಗಿ ತೋಟಗಾರಿಕೆ ಕ್ಷೇತ್ರಕ್ಕೆ ಭೇಟಿ ನೀಡಲು ಕೋರಿದೆ. ದೂರವಾಣಿ ಸಂಖ್ಯೆ 9606751828, 9740485256 ಸಂಪರ್ಕಿಸಲು ಕೋರಿದೆ.
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ರಾ.ವ) ವಿಜಯಪುರ,
ವಾಸಾಸಂಇ/ವಿಜಯಪುರ/ಆರ್.ಓ.ಸಂಖ್ಯೆ 33 ಎಂ.ಸಿ.ಎ/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ದೂ: 080–23360108/109
ಸಂಖ್ಯೆ: ವೈ2 (ಇ.ಪ)ವಾ.ಸ.ಬ/32/2020–21/ಕರೆ–2 ದಿನಾಂಕ: 15.04.2021
ಪರೀಕ್ಷಾ ಸಾಮಗ್ರಿಗಳ ಸಾಗಾಣಿಕೆಗೆ ಹಾಗೂ ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಒದಗಿಸುವ ಕುರಿತು ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದ ಪರೀಕ್ಷಾ ಸಾಮಗ್ರಿಗಳ ಸಾಗಾಣಿಕೆಗೆ ಹಾಗೂ ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಒದಗಿಸುವ ಕುರಿತು ಅರ್ಹ ಸಂಸ್ಥೆಗಳಿಂದ ‘‘**ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ**’’ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು **ದಿನಾಂಕ: 19.04.2021ರಿಂದ 29.04.2021ರವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬೇಕಾಗಿರುತ್ತದೆ. ನಿಗದಿಪಡಿಸಿದ ಟೆಂಡರ್ ಮೌಲ್ಯ **ರೂ.12.00 ಲಕ್ಷ** ಹಾಗೂ ಇಎಂಡಿ ಮೊತ್ತ **ರೂ.24,000/–** ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.
ಸಹಿ/- (ಗೀತಾ ಎಸ್), ನಿರ್ದೇಶಕರು (ಇತರೆ ಪರೀಕ್ಷೆಗಳು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕೆರೆಗಳು, ವಿಭಾಗ-2, ಕೊಠಡಿ ನಂ.309, 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು-560 002.
ಸಂಖ್ಯೆ:ಕಾಪಾಅ-2(ಕೆರೆಗಳು)/ಟೆಂಡರ್-01/2021-22 ದಿನಾಂಕ: 19-04-2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು-2, ಕೆರೆಗಳು ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳಕಂಡ ಯೋಜನೆಗಳಿಗೆ ವಿವರವಾದ ಯೋಜನಾ ವರದಿ (ತಾಂತ್ರಿಕ ಮತ್ತು ಆರ್ಥಿಕ) ತಯಾರಿಸಲು ಸಲಹಾಗಾರರನ್ನು ನೇಮಕ ಮಾಡಲು ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು	ಯೋಜನಾ ಮೊತ್ತ (ರೂ.ಲಕ್ಷಗಳಲ್ಲಿ)
01	ತಾವರೆಕೆರೆ ಕೆರೆಯ ಸುಧಾರಣೆ ಹಾಗೂ ಅಭಿವೃದ್ಧಿ ಕಾಮಗಾರಿಗೆ ವಿವರವಾದ ಯೋಜನಾ ವರದಿ ಸೇವೆಯನ್ನು ಒದಗಿಸುವುದು.	510.00

ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಪ್ರಕಾರ ಟೆಂಡರ್‌ಗಳು ಇಎಂಡಿ ಘೋಷಣೆ ಪತ್ರ ಜೊತೆಗೂಡಿರಬೇಕು ಸರ್ಕಾರ ಆದೇಶದ ಸಂಖ್ಯೆ: ಎಫ್‌ಡಿ 675 ವೆಚ್ಚ-12/2020 ದಿನಾಂಕ: 22-12-2020ರ ಪ್ರಕಾರ ಒಳಗೊಂಡಿರಬೇಕು.
ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆಯ ದಿನಾಂಕ: **23–04–2021ರ ನಂತರ.** 2) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರವರ ಕಛೇರಿ (ಕೆರೆಗಳು) ಇಲ್ಲಿ ದಿನಾಂಕ: **30–04–2021 ರಂದು ಸಂಜೆ 3:00 ಗಂಟೆಗೆ** ನಡೆಸಲಾಗುವುದು. 3) ಪ್ರಸ್ತಾವನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **07–05–2021 ರಂದು ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ: **10–05–2021 ರಂದು ಬೆಳಗ್ಗೆ 11:00 ಗಂಟೆಗೆ.** 5) ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆ ನಂತರ ಆರ್ಥಿಕ ಪ್ರಸ್ತಾವನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ-2, ಬೃಬೆಂಮಪಾ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಟಿ ಕಚ್ಚಿ ಹಿಡಿಯದಿರು ದುಃಖ...

ಎಸ್ಸೆಚ್

ಕೋವಿಡ್‌ನಿಂದಾಗಿ ಲಕ್ಷಾಂತರ ಮಂದಿ ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದಾರೆ. ಈ ನೋವನ್ನು ಕಡಿಮೆ ಮಾಡುವುದು ಕಷ್ಟವೇ. ಆದರೆ ನಿಮ್ಮದೇ ಆದ ಒಂದಿಷ್ಟು ವಿಧಾನಗಳನ್ನು ಅಳವಡಿಸಿಕೊಂಡರೆ ಕೊಂಚ ಸಮಾಧಾನ ಮನಸ್ಸಿಗಾಗಬಹುದು.

ಕೋವಿಡ್‌–19ನಿಂದಾಗಿ ಸಂಭವಿಸಿದ ಸಾವನ್ನು ಲೆಕ್ಕ ಹಾಕಬಹುದು; ಆದರೆ ನೋವನ್ನು? ಕುಟುಂಬದಲ್ಲಿ, ಬಂಧುಗಳಲ್ಲಿ ಅಥವಾ ಸ್ನೇಹಿತರ ವಲಯದಲ್ಲಿ ಒಬ್ಬರನ್ನು ಕಳೆದುಕೊಂಡರೆ ಅದರಿಂದ ಸೃಷ್ಟಿಯಾಗುವ ಶೂನ್ಯವಿದೆಯಲ್ಲ, ಅದನ್ನು ಭರ್ತಿ ಮಾಡುವುದಂತೂ ಕಷ್ಟಸಾಧ್ಯ. ಆದರೆ ಆ ದುಃಖದಿಂದ ಹೊರಬರುವ ಮಾರ್ಗವನ್ನು ಒಂದು ಹಂತದವರೆಗೆ ಕಂಡುಕೊಳ್ಳಬಹುದು ಎನ್ನುತ್ತಾರೆ ತಜ್ಞರು.

ನೋವನ್ನು ಮರೆಯುವ ವಿಧಾನಗಳು ಬಹಳಷ್ಟಿವೆ. ಇವುಗಳಲ್ಲಿ ಯಾವುದಾದರೊಂದು ವಿಧಾನ ನಿಮಗೆ ನೆರವಾಗಬಹುದು.

ಸಾವು ಸಂಭವಿಸಿದ ಆರಂಭದ ದಿನಗಳಲ್ಲಿ ಆ ವ್ಯಕ್ತಿಯ ಹತ್ತಿರದ ಬಂಧುಗಳು ಸಾಂತ್ವನಕ್ಕಾಗಿ ಬೇರೆಯವರ ಬಳಿ ದುಃಖ ತೋಡಿಕೊಳ್ಳುವುದು ಸಹಜ. ಸಾವಿನಿಂದ ಒಂಟಿತನದ ಭಾವನೆ ಉದ್ಭವಿಸುವುದು ಇದಕ್ಕೆ ಕಾರಣ. ಆದರೆ ಕೋವಿಡ್ ಪಿಡುಗಿರುವ ಈ ಸಂದರ್ಭದಲ್ಲಿ ಇಂತಹ ನೆರವನ್ನು ವೈಯಕ್ತಿಕವಾಗಿ ಪಡೆಯುವುದು ಕೂಡ ಸವಾಲೆನಿಸಿಬಿಟ್ಟಿದೆ. ಹೀಗಾಗಿ ವಿಡಿಯೊ ಮೂಲಕ ಸ್ನೇಹಿತರು ಅಥವಾ ಬಂಧುಗಳ ಜೊತೆ ಮಾತನಾಡಿ ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು.

ದುಃಖ ಹಂಚಿಕೊಳ್ಳಿ

ಬಂಧುಗಳ ಬಳಿ ಏನು ಹೇಳಿಕೊಳ್ಳುವುದು ಎಂಬ ಭಾವನೆಯಿರುವವರು ಆನ್‌ಲೈನ್‌ನಲ್ಲಿ ಹುಟ್ಟಿಕೊಂಡಿರುವ ಕೆಲವು ವೆಬ್‌ಸೈಟ್ ತೆರೆದು ಅಲ್ಲಿರುವ ಅಪರಿಚಿತರು, ಆಪ್ತ ಸಮಾಲೋಚಕರ ಬಳಿ ಮಾತನಾಡಬಹುದು. 'ಗ್ರೀವಿಂಗ್. ಕಾಂ.', 'ಗ್ರೀಫ್ ಹೀಲಿಂಗ್ ಗ್ರೂಪ್'ನಂತಹ ವೆಬ್‌ಸೈಟ್‌ಗಳು ನಿಮಗೆ ಸಹಾಯ ಮಾಡಬಹುದು. ನಿಮ್ಮ ಅನುಭವ ಹೇಳಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು.

ಈ ಕೋವಿಡ್ ಸಂದರ್ಭದಲ್ಲಿ ಪೂಜೆ, ಪ್ರಾರ್ಥನಾ ಮಂದಿರಗಳಿಗೆ, ಧಾರ್ಮಿಕ ಸ್ಥಳಗಳಿಗೆ ಹೋಗುವುದು ಕಷ್ಟವೇ. ಆದರೆ ಕೆಲವೊಂದು ಧಾರ್ಮಿಕ ಸಂಸ್ಥೆಗಳು ಪ್ರಾರ್ಥನೆಗಳನ್ನು ಫೇಸ್‌ಬುಕ್ ಲೈವ್ ಮಾಡುತ್ತಿವೆ. ಅಂಥವುಗಳ ಪಟ್ಟಿ ಮಾಡಿಕೊಂಡು ಆ ಸಮಯದಲ್ಲಿ ವೀಕ್ಷಿಸಿ ದುಃಖ ಮರೆಯುವ ಪ್ರಯತ್ನ ಮಾಡಬಹುದು. ಯೂಟ್ಯೂಬ್‌ನಲ್ಲಿ ಕೂಡ ವಿವಿಧ ಧರ್ಮಗಳ ಪ್ರಾರ್ಥನೆಗಳು ಲಭ್ಯ. ಅವುಗಳಿಂದ ಶಾಂತಿ, ಸಮಾಧಾನ ಲಭಿಸುವುದಿದ್ದರೆ ನಿತ್ಯ ಕೆಲವು ಸಮಯ ಅದಕ್ಕಾಗಿ ಮೀಸಲಿಡಬಹುದು.

ಹೊಸ ವಿಷಯ ಕಲಿಯಿರಿ

ದುಃಖವನ್ನು ಮರೆಯಲು ನೆರವು ನೀಡುವ ಇನ್ನೊಂದು ವಿಧಾನವೆಂದರೆ ಹೊಸ ವಿಷಯದ ಕಲಿಕೆ. ಇದರಿಂದ ನಮ್ಮ ಮಿದುಳಿಗೆ ಕೊಂಚ ಚೈತನ್ಯ ದೊರಕುವುದಲ್ಲದೇ, ನಮ್ಮ ಮನಸ್ಸನ್ನು ಬೇರೆಡೆ ತಿರುಗಿಸುತ್ತದೆ. ಹೊಸ ಹವ್ಯಾಸವನ್ನು ಆರಂಭಿಸಬಹುದು; ಮುದ್ದು ಪ್ರಾಣಿಯನ್ನು ಸಾಕಬಹುದು; ಯಾರಿಗಾದರೂ ನೆರವು ಬೇಕಿದ್ದರೆ ಸಹಾಯ ಹಸ್ತ ಚಾಚಿ ನಿಮ್ಮ ನೋವನ್ನು ಮರೆಯಬಹುದು.

ಇತ್ತೀಚೆಗೆ 70ರ ತಂದೆಯನ್ನು ಕೋವಿಡ್‌ನಿಂದಾಗಿ ಕಳೆದುಕೊಂಡ ಗೃಹಿಣಿ ನಂದಿನಿ ರಮೇಶ್ ಹೊಸ ರುಚಿಯ ಅಡುಗೆಯ ವಿಡಿಯೊಗಳನ್ನು ಮಾಡಿ ಆನ್‌ಲೈನ್‌ನಲ್ಲಿ ಬಿಡುತ್ತಿದ್ದಾಳೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಆಕೆ, 'ದುಃಖ ಮರೆಯಲು ಈ ಹೊಸ ಹವ್ಯಾಸ ನೆರವಿಗೆ ಬಂದಿದ್ದಂತೂ ಹೌದು' ಎನ್ನುತ್ತಾಳೆ.

ಯಾವುದಾದರೂ ಕೆಲಸವನ್ನು ಪದೆ ಪದೆ ಮಾಡುತ್ತಿದ್ದರೆ, ಕಾಡುವ ದುಃಖವನ್ನು ಮಾತ್ರವಲ್ಲ, ಕೋವಿಡ್ ಆತಂಕವನ್ನು ಕೂಡ ಮರೆಯಬಹುದು ಎನ್ನುತ್ತಾರೆ ತಜ್ಞರು.

ಇದೇ ರೀತಿ ನೋವನ್ನು ಮರೆಯಲು ಮಾಡಿದಂತಹ ಪಾಡ್‌ಕಾಸ್ಟ್ ಕೂಡ ಹಲವರಿಗೆ ನೆಮ್ಮದಿ ತಂದಿದೆ. ಹಾಗೆಯೇ ಈ ಬಗ್ಗೆ ತಜ್ಞರು ಬರೆದಿರುವ ಬೇಕಾದಷ್ಟು ಪುಸ್ತಕಗಳೂ ಆನ್‌ಲೈನ್‌ನಲ್ಲಿ ಲಭ್ಯ.

ನಿಮ್ಮಷ್ಟಕ್ಕೇ ನೀವು ದುಃಖ ಮರೆಯುವ ಪ್ರಯತ್ನ ಮಾಡಿದರೂ ಸಫಲರಾಗದಿದ್ದರೆ ಆಪ್ತ ಸಮಾಲೋಚಕರ ಜೊತೆ ಮಾತನಾಡಿ. ಧ್ಯಾನ ಮಾಡಿ. ಯೋಗವನ್ನು ಪ್ರಯತ್ನಿಸಿ.

ಆದರೆ ದುಃಖ ಮರೆಯಲು ಮದ್ಯ, ಮಾದಕದ್ರವ್ಯದಂತಹ ವ್ಯಸನಕ್ಕೆ ಮಾತ್ರ ಹೋಗಬೇಡಿ. ಅದು ತಾತ್ಕಾಲಿಕವಾಗಿ ಎಲ್ಲವನ್ನೂ ಮರೆಯುವಂತೆ ಮಾಡಬಹುದು. ಆದರೆ ಅದರ ನೆರವಿಲ್ಲದೇ ಇನ್ನಷ್ಟು ದುಃಖಕ್ಕೆ ಈಡಾಗುವುದರಿಂದ ಮತ್ತೆ ಮತ್ತೆ ವ್ಯಸನದ ಮೊರೆ ಹೋಗಿ ನಿಮ್ಮನ್ನೇ ನೀವು ಹಾಳು ಮಾಡಿಕೊಳ್ಳುತ್ತೀರಿ ಎಂದು ಎಚ್ಚರಿಸುತ್ತಾರೆ ತಜ್ಞರು.

(ಪೂರಕ ಮಾಹಿತಿ: ಪ್ರಮೀಳಾ ಎಸ್., ಆಪ್ತಸಮಾಲೋಚಕರು, ಬೆಂಗಳೂರು)

ಕ್ರಿಯಾಶೀಲ ಹಗಲಿಗೆ ಉಲ್ಲಾಸದ ಮುಂಜಾವು

ಮನಸ್ವಿ

ನಮ್ಮ ದಿನ ಕ್ರಿಯಾಶೀಲವಾಗಿರಬೇಕು ಎಂದರೆ ಮುಂಜಾನೆ ಎದ್ದ ಕೂಡಲೇ ಮನಸ್ಸು ಉಲ್ಲಸಿತವಾಗಿರಬೇಕು. ಹಾಗಿದ್ದಾಗ ಮಾತ್ರ ಬೆಳಗಿನಿಂದ ಸಂಜೆಯವರೆಗೆ ಚಟುವಟಿಕೆಯಿಂದಿರಲು ಸಾಧ್ಯ, ಜೊತೆಗೆ ನಾವು ಮಾಡುವ ಕೆಲಸಗಳು ಸಕಾರಾತ್ಮಕವಾಗಿರುತ್ತವೆ.

ಬೆಳಿಗ್ಗೆ ಎದ್ದ ಕೂಡಲೇ ಮನಸ್ಸು ಉಲ್ಲಸಿತವಾಗಿರಲು 'ರೈಸ್ ಅಪ್ ವಿಧಾನ' ಅನ್ನು ಅನುಸರಿಸಬೇಕು ಎನ್ನುತ್ತಾರೆ ತಜ್ಞರು. ಈ ವೈಜ್ಞಾನಿಕ ವಿಧಾನವು 2018ರಿಂದ ಪ್ರಚಲಿತದಲ್ಲಿದೆ. ಇದು ನಮ್ಮಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಿ ದೈಹಿಕ ಕ್ಷಮತೆ ಹೆಚ್ಚಲು ಸಹಾಯ ಮಾಡುತ್ತದೆ.

'ಕೊರೊನಾ ಕಾರಣದಿಂದ ಹೆಚ್ಚು ಸಮಯ ಮನೆಯ ಒಳಗೇ ಇರುವುದು, ಚಿಂತೆ, ಆತಂಕದ ಕಾರಣದಿಂದ ನಿದ್ದೆಯ ಜಡತ್ವ ನಮ್ಮನ್ನು ಹೆಚ್ಚು ಕಾಡುತ್ತಿದೆ. ನಿದ್ದೆಯ ಮಧ್ಯೆ ಮಧ್ಯೆ ಎಚ್ಚರವಾಗುವುದರಿಂದ ಕಾರ್ಯಕ್ಷಮತೆಯ ಕಡಿಮೆಯಾಗುತ್ತಿದೆ. ಅಲ್ಲದೇ ನಿದ್ದೆಯ ಕ್ರಮದಲ್ಲೂ ವ್ಯತ್ಯಾಸವಾಗಿದೆ. ಜೊತೆಗೆ ಅಲಸ್ಯವೂ ಹೆಚ್ಚಿದೆ. ಹಾಗಾಗಿ ಮುಂಜಾವಿನಲ್ಲಿ ನಿದ್ದೆಯ ಮಂಪರನ್ನು ಹೋಗಲಾಡಿಸಿ ಕ್ರಿಯಾಶೀಲತೆ ಹೆಚ್ಚಲು ರೈಸ್ ಅಪ್ ವಿಧಾನ ಉತ್ತಮ' ಎನ್ನುತ್ತಾರೆ ಆಪ್ತಸಮಾಲೋಚಕಿ ಜಾಹ್ನವಿ ಪಿ.

ಈ ರೈಸ್ ಅಪ್ ವಿಧಾನದಲ್ಲಿ 6 ತಂತ್ರಗಳಿವೆ. ಅದನ್ನು ತಪ್ಪದೇ ಪಾಲಿಸಿದರೆ ಬೆಳಗಿನಿಂದ ರಾತ್ರಿವರೆಗೆ ಚಟುವಟಿಕೆಯಿಂದ ದಿನ ಕಳೆಯಬಹುದು.

ಅಲಾರ್ಮ್ ಆಫ್ ಮಾಡಿ ಮಲಗುವ ಅಭ್ಯಾಸಕ್ಕೆ ಬ್ರೇಕ್ ಹಾಕಿ: ಪ್ರತಿದಿನ ಒಂದೇ ಸಮಯಕ್ಕೆ ಮಲಗಿ ಒಂದೇ ಸಮಯಕ್ಕೆ ಎದ್ದೇಳಬೇಕು. ದಿನಕ್ಕೊಂದು ಸಮಯಕ್ಕೆ ಎದ್ದೇಳುವುದು ತಪ್ಪು. ಅಲ್ಲದೇ ಅಲಾರ್ಮ್ ಇರಿಸಿಕೊಂಡು ಮಲಗಿದರೆ ಸ್ನೂಜ್ ಮಾಡಿ ಮಲಗುವುದನ್ನು ಬಿಡಬೇಕು. ಈ ರೀತಿ ಮಾಡುವುದರಿಂದ ಮತ್ತೆ ಮತ್ತೆ ಎಚ್ಚರವಾಗಿ ಪರಿಪೂರ್ಣ ನಿದ್ದೆಗೆ ತೊಂದರೆಯಾಗುತ್ತದೆ. ಅಲ್ಲದೇ ಪುನಃ ಎದ್ದು ಮಲಗುವುದರಿಂದ ಮನಸ್ಸಿಗೆ ಮಂಕು ಕವಿದಂತಾಗುತ್ತದೆ. ಪ್ರತಿದಿನ ಬೇರೆ ಬೇರೆ ಸಮಯದಲ್ಲಿ ಎದ್ದೇಳುವುದರಿಂದ ನಮ್ಮ ದೈಹಿಕ ವ್ಯವಸ್ಥೆಯಲ್ಲಿನ ಬದಲಾವಣೆಗೂ ಕಾರಣವಾಗುತ್ತದೆ. ಒಂದು ವೇಳೆ ರಾತ್ರಿ ಮಲಗುವ ಸಮಯದಲ್ಲಿ ವ್ಯತ್ಯಾಸವಾಗಿದ್ದರೆ ಬೆಳಿಗ್ಗೆ ತಡವಾಗಿ ಏಳುವುದೂ ತಪ್ಪು.

ಬೆಳಗಿನ ಚಟುವಟಿಕೆಗೆ ನೀಡದಿರಿ ವಿರಾಮ: ಬೆಳಗಿನ ಚಟುವಟಿಕೆಗಳು ಎಂದಿಗೂ ನಮಗೆ ಭಾರವಾಗಬಾರದು. ಪ್ರತಿದಿನ ಬೆಳಿಗ್ಗೆ ಎದ್ದ ಕೂಡಲೇ ಒಂದು ಗಂಟೆಕಾಲ ದೈಹಿಕ ಚಟುವಟಿಕೆಗೆ ಸಮಯ ಮೀಸಲಿಡಬೇಕು. ಯಾವುದೇ ಕಾರಣಕ್ಕೂ ಚಟುವಟಿಕೆಯನ್ನು ತಪ್ಪಿಸಬಾರದು. ನಾಯಿಯನ್ನು ವಿಹಾರಕ್ಕೆ ಕರೆದ್ಯೊಯುವುದು, ಕಾಫಿ ಶಾಪ್‌ಗೆ ನಡೆದುಕೊಂಡು ಹೋಗುವುದು, ಹಾಲು, ಮೊಸರು, ತರಕಾರಿ ತರಲು ದೂರದ ಅಂಗಡಿಗಳಿಗೆ ನಡೆದುಕೊಂಡು ಹೋಗುವುದು ಮಾಡಬೇಕು. ಈ ರೀತಿಯ ಚಟುವಟಿಕೆಗಳು ಸುಗಮ ರಕ್ತಸಂಚಾರಕ್ಕೆ ನೆರವಾಗುತ್ತವೆ. ಅಲ್ಲದೇ ದೇಹದಲ್ಲಿ ಹೊಸ ಚೈತನ್ಯ ಮೂಡಿಸುತ್ತವೆ. ಇದರಿಂದ ನಿದ್ದೆಯ ಮಂಪರು ದೂರಾಗುತ್ತದೆ ಎನ್ನುತ್ತಾರೆ ಜಾಹ್ನವಿ.

ಬೆಳಗಿನ ಸ್ನಾನ: ಪ್ರತಿದಿನ ಬೆಳಿಗ್ಗೆ ಎದ್ದ ಕೂಡಲೇ ತಣ್ಣೀರು ಅಥವಾ ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದು ಅವಶ್ಯ. ಇದರಿಂದ ದೇಹ ಹಾಗೂ ಮನಸ್ಸು ಎರಡೂ ಸಂತಸದಿಂದಿರುತ್ತದೆ. ಅಲ್ಲದೇ ನಿದ್ದೆಯ ಮಂಪರನ್ನು ದೂರ ಮಾಡಿ ಚಟುವಟಿಕೆಯಿಂದಿರಲು ಸಹಾಯ ಮಾಡುತ್ತದೆ. ದೈಹಿಕ ಚಟುವಟಿಕೆಯ ನಂತರ ತಪ್ಪದೇ ಸ್ನಾನ ಮಾಡಬೇಕು.

ಸಂಗೀತ ಆಲಿಸುವುದು: ಸಂಗೀತಕ್ಕೆ ಎಲ್ಲಾ ನೋವನ್ನು ಮರೆಸುವ ಶಕ್ತಿಯಿದೆ. ನಮ್ಮ ಮುಂಜಾನೆಯು ಖುಷಿಯಿಂದ ಆರಂಭವಾಗಬೇಕು ಎಂದರೆ ಬೆಳಿಗ್ಗೆ ಲಘುವಾದ ಸಂಗೀತ ಆಲಿಸಬೇಕು. ಸಂಗೀತವು ಮನಸ್ಸು ಹಾಗೂ ದೇಹ ಎರಡರಲ್ಲೂ ಉತ್ಸಾಹ ಹೆಚ್ಚುವಂತೆ ಮಾಡುತ್ತದೆ. ವಾಕಿಂಗ್ ಅಥವಾ ರನ್ನಿಂಗ್ ಮಾಡುವಾಗ ಲಘು ಸಂಗೀತ ಆಲಿಸಬೇಕು. ಮನೆಯಲ್ಲಿಯೂ ಸಣ್ಣ ಧ್ವನಿಯಲ್ಲಿ ಸಂಗೀತ ಕೇಳಬಹುದು.

ಆಪ್ತರಿಗೆ ಕರೆ ಮಾಡಿ ಮಾತನಾಡಿ: ಈಗ ಕೊರೊನಾ ಹೆಚ್ಚುತ್ತಿರುವ ಕಾರಣ ನಮ್ಮ ಆಪ್ತರನ್ನು ಭೇಟಿ ಮಾಡುವುದು ಕಷ್ಟ. ಅಕ್ಕಪಕ್ಕದ ಬೀದಿಯ ಪ್ರತಿದಿನ ಸಿಗುವ ಸ್ನೇಹಿತರನ್ನೂ ಭೇಟಿ ಮಾಡುವುದು ಕಷ್ಟವಾಗಬಹುದು. ಆ ಕಾರಣಕ್ಕೆ ಬೆಳಗಿನ ಹೊತ್ತು ಬಿಡುವಿನ ವೇಳೆ ನಿಮ್ಮ ಆಪ್ತರಿಗೆ ಕರೆ ಮಾಡಿ ಮಾತನಾಡಿ. ಅವರೊಂದಿಗೆ ವಿಷಯಗಳನ್ನು ಹಂಚಿಕೊಳ್ಳುವುದರಿಂದ ಮನಸ್ಸಿಗೆ ಖುಷಿ ಸಿಗುತ್ತದೆ.

ಸೂರ್ಯನ ಬೆಳಕಿಗೆ ಮೈ ಒಡ್ಡಿ

ಸೂರ್ಯನ ಎಳೆ ಬಿಸಿಲಿಗೆ ಮೈ ಒಡ್ಡುವುದರಿಂದ ದೇಹಕ್ಕೆ ಬೇಕಾದ ವಿಟಮಿನ್ ಅಂಶಗಳು ಸಿಗುವುದಲ್ಲದೇ ಚುರುಕುತನ ಮೂಡುತ್ತದೆ. ದೇಹದಲ್ಲಿ ಅಂತರಿಕ ಶಕ್ತಿ ಹೆಚ್ಚಲು ಬಿಸಿಲಿಗೆ ಮೈ ಒಡ್ಡುವುದು ತುಂಬಾ ಅಗತ್ಯ. ಎಳೆ ಬಿಸಿಲಿನಲ್ಲಿ ಅರ್ಧ ಗಂಟೆ ಕಾಲ ಓಡಾಟ ನಡೆಸುವುದರಿಂದ ಮನಸ್ಸು ಉಲ್ಲಾಸದಿಂದಿರುತ್ತದೆ.

– **ಜಾಹ್ನವಿ ಪಿ.,** ಆಪ್ತಸಮಾಲೋಚಕಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

COLOURS OF SILENCE – National Trust Book of India

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

"**Colours of Silence**", a motivational story of Satish Gujral, was extracted from the National Trust Book of India. Throughout this lesson, we can observe how strong determination, strong willpower leads to success.

On one of the holidays, Satish went to Kashmir with his father and brother Inder. There, they were crossing a rickety bridge over some rapids. The boys stood there and looked down at the swirling water. Satish was a little amazed and he asked his brother to look down. At once, Satish's foot slipped, he lost his balance and fell into the rapids. After the accident, Satish got several operations on his leg. Though his legs healed, they remained weak. Satish got terrible headaches and sometimes he felt as if everything was going dark and silent. He felt as if, some huge weight was pressing upon his head.

He suffered frequently from bouts of fever. He felt helpless and upset being confined to the bed. For the 8 years old boy, this was terrible. Due to his frequent absence and his health problem, the school Satish was attending till then informed his father, Mr. Avatar Narayan, that they could not keep Satish in their school. After a lot of persuasion, Satish agreed to go to a new school. But these schools also rejected admission for the same reason. Satish's father felt helpless but did not give up his hope.

After rejection from schools, Satish became moody. He could not talk freely with anyone, because he was unable to hear a single word. His brother Inder sat for hours with him, talked to him, teaching words and pronunciation. His father gave him armful books, the life of Garibaldi, the works of Munshi Premchand and Sharad Chandra, and several others. Satish read them all. Books had a great impact on Satish. He became a voracious reader. Through the books, he came to know the outside world. The world with suffering and anguish. In comparison, he felt that his life was comfortable.

The Turning point in Satish's Life.

One day Satish was looking gloomily into the far corner of the garden. At once, he saw a bird that was unlike any he had ever seen before. It had a longish tail and a black crest. The most interesting thing about the bird was its restless energy. Its eyes kept darting here and there. The bird was ready to fly at any moment. For a long time, Satish stared at the beautiful bird, and it flew away. Satish jumped from his bed, took out his notebook and pencil, and sketched the bird from his memory with few deft strokes. After the bird's incident, Satish found out another pass time activity.

He spent most of his time painting, drawing, and sketching. But his father was not amused with Satish's attitude. His father wanted him to read the books. Despite the father's opposition, Satish continued his efforts in painting. Seeing the passion of Satish towards the painting, Satish's father encouraged finally by giving him an armful of paints, brushes of all shapes and sizes, and several rolls of drawing sheets. He filled confidence in Satish by saying that he would find out the new school of art for Satish.

Now, Satish Gujral is among the foremost artist of India. He is one of the few artists who accomplished in several art forms like painting, sculpture, and architecture. Satish Gujral is also a writer. He had published four books of his works, in various arts. Exhibitions of his works have been held all over the world and displayed in prestigious museums. Satish Gujral is honored with the Padmavibhushana.

His life of achievement is ample proof that physical disability is no barrier to success.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಸ್ಟ್ಯಾಟಿಸ್ಟಿಕ್ಸ್ ಮೋಡ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3alqPtm

ಸಂಗಮ ದೂರ ಮತ್ತು ವಕ್ರತಾ ತ್ರಿಜ್ಯಗಳ ನಡುವಿನ ಸಂಬಂಧ

ಭೌತಶಾಸ್ತ್ರ

ದ್ವಿತೀಯ ಪಿಯುಸಿ



(a)



(b)

ವಕ್ರತಾ ಕೇಂದ್ರ C ಯನ್ನು ಹೊಂದಿರುವ ನಿಮ್ನ/ಪೀನ ದರ್ಪಣದ ವಕ್ರತಾ ತ್ರಿಜ್ಯವನ್ನು R ಎಂದು ಪರಿಗಣಿಸಿ.ದರ್ಪಣಕ್ಕೆ M ನಲ್ಲಿ ಸಂಧಿಸುವ ಪ್ರಧಾನಾಕ್ಷಕ್ಕೆ ಸಮಾನಾಂತರವಾದ ಕಿರಣವೊಂದನ್ನು ಪರಿಗಣಿಸಿದರೆ, CM ದರ್ಪಣಕ್ಕೆ M ನಲ್ಲಿ ಲಂಬವಾಗಿರುತ್ತದೆ.

ಆಪಾತ ಕೋನವಾಗಿರಲಿ ಮತ್ತು MD θ ಯು M ಬಿಂದುವಿನಲ್ಲಿ ಪ್ರಧಾನಾಕ್ಷಕ್ಕೆ ಎಳೆದ ಲಂಬವಾಗಿರಲಿ.

ಈಗ $\angle MCP = \theta$ ಮತ್ತು $\angle MFP = 2\theta$

ಹಾಗೆಯೇ $\tan\theta = \frac{MD}{CD}$ ಮತ್ತು $\tan 2\theta = \frac{MD}{FD}$ – –(1)

θ ವು ಸಣ್ಣ ಕೋನವಾಗಿರುವಾಗ $\tan\theta \approx \theta$, $\tan 2\theta \approx 2\theta$ ಆದ್ದರಿಂದ ಸಮೀಕರಣ $\frac{MD}{FD} = \frac{2MD}{CD}$

ಅಥವಾ $FD = \frac{CD}{2}$ – –(2)

ಸಣ್ಣ ಆಪಾತ ಕೋನಕ್ಕೆ D ಯು Pಗೆ ಅತೀ ಹತ್ತಿರವಿರುತ್ತದೆ.

ಆದ್ದರಿಂದ $FD = F$ ಮತ್ತು $CD = R$

ಸಮೀಕರಣ (2) ರ ಪ್ರಕಾರ

$$F = \frac{R}{2}$$

ದರ್ಪಣದ ಸಮೀಕರಣ



ಒಂದು ಬಿಂದುವಿನಿಂದ ಹೊರಸೂಸುವ ಕಿರಣಗಳು ಪ್ರತಿಫಲನಗೊಂಡು ನಂತರ ಒಂದು ಬಿಂದುವಿನಲ್ಲಿ ಸಂಧಿಸಿ ಸ್ಥಾಪಿತವಾದ ವಸ್ತುವಿನ ಬಿಂದು-ಬಿಂದು ತದ್ರೂಪವೇ ಬಿಂಬವಾಗಿದೆ.

ಬಿಂಬವನ್ನು ಪಡೆಯಲು ಈ ಕೆಳಗಿನ ಕಿರಣಗಳನ್ನು ಅನುಕರಿಸಲಾಗುತ್ತದೆ.

- ಬಿಂದುವಿನಿಂದ ದೊರೆವ ಪ್ರಧಾನಾಕ್ಷಕ್ಕೆ ಸಮಾಂತರವಾಗಿರುವ ಕಿರಣ ಪ್ರತಿಫಲಿತಗೊಂಡು ಸಂಗಮ ಹಾದುಹೋಗುತ್ತದೆ.
- ನಿಮ್ನ ದರ್ಪಣದ ವಕ್ರತಾ ಕೇಂದ್ರದ ಮೂಲಕ ಹಾದು ಹೋಗುವ ಕಿರಣ ಅಥವಾ ಪೀನ ದರ್ಪಣದ ವಕ್ರತಾ ಕೇಂದ್ರದ ಮುಖಾಂತರ ಹಾದು ಹೋಗುವಂತೆ ಭಾಸವಾಗುವ ಕಿರಣ, ಪ್ರತಿಫಲಿತ ಕಿರಣ ಬಂದ ದಾರಿಯಲ್ಲೆ ಹಿಂದಿರುವುದು.
- ಯಾವುದೇ ಕೋನದಿಂದ ಧ್ರುವದ ಮೇಲೆ ಆಪಾತವಾಗುವ ಕಿರಣ ಪ್ರತಿಫಲಿತ ಕಿರಣ. ಇಲ್ಲಿ A^1B^1 ಯು ನಿಮ್ನ ದರ್ಪಣವು ಉಂಟು ಮಾಡಿದ ಪ್ರತಿಬಿಂಬವಾಗಿದೆ.

ದರ್ಪಣ ಸೂತ್ರವು ವಸ್ತುವಿನ ದೂರ (U), ಬಿಂಬದ ದೂರ (V) ಮತ್ತು ಸಂಗಮದೂರ (F) ಗಳ ನಡುವಿನ ಸಂಬಂಧವಾಗಿದೆ.

ಎರಡು ಲಂಬಕೋನ ತ್ರಿಭುಜಗಳಾದ A^1B^1F ಮತ್ತು MPF ಗಳು ಸಮರೂಪದ ತ್ರಿಭುಜಗಳಾಗಿವೆ.

ಆದ್ದರಿಂದ

$$\frac{B^1A^1}{PM} = \frac{B^1F}{FP} \text{ – –(1)}$$

$$\frac{B^1A^1}{BA} = \frac{B^1F}{FP} \text{ — (2)} \quad (PM = AB)$$

ಹಾಗೆಯೇ $\angle APB = \angle A^1PB^1$ ಆಗಿರುವುದರಿಂದ ಲಂಬಕೋನ ತ್ರಿಭುಜಗಳಾದ A^1B^1P ಮತ್ತು APB ಕೂಡ ಸಮರೂಪದ ತ್ರಿಭುಜಗಳಾಗಿವೆ.

ಆದ್ದರಿಂದ

$$\frac{B^1A^1}{BA} = \frac{B^1P}{BP} \text{........(3)}$$

$$\frac{B^1F}{FP} = \frac{B^1P}{BP} = \frac{B^1PFP}{FP} \text{----(4)}$$

ವಸ್ತು AB, ಪ್ರತಿಬಿಂಬ A^1B^1 ಮತ್ತು ಸಂಗಮ ಬಿಂದು F ಇವುಗಳನ್ನು ಧ್ರುವ P ಯಿಂದ ತಲುಪಲು ಆಪಾತ ಕಿರಣದ ವಿರುದ್ಧ ದಿಕ್ಕಿನಲ್ಲಿ ಚಲಿಸಬೇಕಾಗಿರುವುದರಿಂದ ಇವು ಮೂರೂ ದೂರಗಳು ಋಣಾತ್ಮಕವಾಗಿರುತ್ತದೆ.

ಆದ್ದರಿಂದ

$B^1P = -V$, $FP = -f$ and $BP = -u$

ಇವುಗಳನ್ನು ಸಮೀಕರಣ (4) ರಲ್ಲಿ ಆದೇಶಿಸಲಾಗಿ,

$$\frac{-v}{-u} = \frac{-v-(-f)}{-f}$$

$$\frac{-v}{u} = \frac{-v+f}{-f}$$

ಅಥವಾ

$$\frac{v}{u} = \frac{v+f}{-f}$$

$$\frac{v}{u} = \frac{v}{f} - 1$$

$$\frac{1}{u} + \frac{1}{4} = \frac{1}{F} \text{----(5)}$$

ಈ ಸಂಬಂಧವನ್ನು ದರ್ಪಣ ಸೂತ್ರವೆಂದು ಕರೆಯುತ್ತಾರೆ.

ರೇಖೀಯ ವರ್ಧನ (M)

ಪ್ರತಿಬಿಂಬದ ಎತ್ತರ (h1) ಮತ್ತು ಬಿಂಬದ ಎತ್ತರ (h) ನಡುವಿನ ನಿಷ್ಪತ್ತಿಯನ್ನು ರೇಖೀಯ ವರ್ಧನ (M) ಎನ್ನುತ್ತಾರೆ.

$$M = \frac{h^1}{h} \text{---(6)}$$

h1 ಮತ್ತು h ಗಳನ್ನು ಧನ ಅಥವಾ ಋಣ ಎಂದು ಪರಿಗಣಿಸಲಾಗುವುದು.

ತ್ರಿಭುಜ A^1B^1P ಮತ್ತು ABP ಗಳಲ್ಲಿ

$$\frac{B^1A^1}{BA} = \frac{B^1P}{BP} \text{........(7)}$$

ರೂಢಿಗತ ಚಿಹ್ನೆಗಳನ್ನು ಅದೇಶಿಸಿದಾಗ

$$\frac{-h^1}{h} = \frac{-v}{u} \text{........(8)}$$

ಅದರಂತೆ

$$n = \frac{-h^1}{h} = \frac{-v}{u} \text{........(9)}$$

ಸಮೀಕರಣ (9) ನಿಮ್ನ ದರ್ಪಣವು ನೈಜ ಮತ್ತು ತಲೆಕೆಳಗಾದ ಪ್ರತಿಬಿಂಬವನ್ನು ಉಂಟು ಮಾಡುತ್ತದೆ ಎಂದು ತಿಳಿಸುತ್ತದೆ.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ರೇ ಆಪ್ಟಿಕ್ಸ್ & ಆಪ್ಟಿಕಲ್ ಇನ್‌ಸ್ಟ್ರುಮೆಂಟ್ ರಿಫ್ರ್ಯಾಕ್ಷನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3stn5fH

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು
ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ
ನಿದ್ರಾ ಸ್ಖಲನ
ಶೀಘ್ರ ಸ್ಖಲನ
ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ
ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ
ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
100% NO SIDE EFFECTS
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259



ಸುಭಾಷಿತ

ನಿಜವಾದ ಸೋಲು ಪ್ರತಿಸ್ಪರ್ಧಿಗಳಿಂದ ಸಂಭವಿಸುವ ಪರಾಜಯವಲ್ಲ. ನಮ್ಮಲ್ಲಿ, ನಮ್ಮ ಸಾಹಸದಲ್ಲಿ, ನಮ್ಮ ಶ್ರದ್ಧೆಯಲ್ಲಿ ನಮಗೆ ನಂಬಿಕೆ ಹೋಗುವುದು. -ತ.ರಾ.ಸು.

ಅವ್ಯವಸ್ಥೆಗಳ ಮಹಾತಾಂಡವದಲ್ಲಿ ಆಮ್ಲಜನಕಕ್ಕೂ ಅಭಾವ

ನೀರಿನ ಕೊರತೆ, ವಿದ್ಯುತ್ ಕೊರತೆ, ಸಂಚಾರ ಸೌಲಭ್ಯ ಕೊರತೆಯಂಥ ಕಷ್ಟಗಳನ್ನು ಕಾಲಕಾಲಕ್ಕೆ ಹೇಗೋ ನೀಗಿಕೊಂಡು ಪುಟಿದೇಳುತ್ತ ಬಂದ ಭಾರತಕ್ಕೆ ಈಗ ಆಮ್ಲಜನಕದ್ದೇ ಕೊರತೆಯನ್ನು ಕೊರೊನಾ ಮಹಾಮಾರಿ ತಂದೊಡ್ಡಿದೆ. ಆಸ್ಪತ್ರೆಗಳಿಗೆ, ಗೃಹಶುಶ್ರೂಷೆಯಲ್ಲಿರುವವರಿಗೆ ತುರ್ತಾಗಿ ಬೇಕೇಬೇಕಿದ್ದ ಆಮ್ಲಜನಕ ಸಿಗುತ್ತಿಲ್ಲವೆಂದರೆ ನಮ್ಮ ಆಡಳಿತ ವ್ಯವಸ್ಥೆಯಲ್ಲಿನ ಲೋಪಗಳತ್ತ ಬೊಟ್ಟು ಮಾಡಬೇಕೆ ವಿನಾ ಮಹಾಮಾರಿಯನ್ನು ದೂಷಿಸಿ ಪ್ರಯೋಜನವಿಲ್ಲ. ಯುದ್ಧಕಾಲೇ ಶಸ್ತ್ರಾಭ್ಯಾಸ ಎಂಬಂತೆ ಈಗೇನೋ 'ತುರ್ತಾಗಿ ಆಮ್ಲಜನಕದ ಉತ್ಪಾದನೆಗೆ ಮತ್ತು ಆಮದಿಗೆ ಕ್ರಮ ಕೈಗೊಳ್ಳುತ್ತೇವೆ; ರೈಲುಗಳ ಮೂಲಕ ಆಮ್ಲಜನಕದ ಟ್ಯಾಂಕರ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇವೆ; ಕಬ್ಬಿಣ, ಉಕ್ಕು ಮತ್ತಿತರ ಔದ್ಯಮಿಕ ಉತ್ಪಾದನೆಗಳಿಗೆ ಬೇಕಿದ್ದ ಆಮ್ಲಜನಕವನ್ನೂ ಆಸ್ಪತ್ರೆಗಳತ್ತ ತಿರುಗಿಸುತ್ತೇವೆ; ದ್ರವರೂಪದ ಸಾರಜನಕ ಮತ್ತು ಆರ್ಗೋನ್ ಅನಿಲಗಳನ್ನು ಸಾಗಿಸುತ್ತಿದ್ದ ಟ್ಯಾಂಕರುಗಳಲ್ಲಿ ಆಮ್ಲಜನಕವನ್ನು ಸಾಗಿಸುತ್ತೇವೆ' ಎಂದೆಲ್ಲ ಸರ್ಕಾರಿ ವಕ್ತಾರರು ಹೇಳುತ್ತಿದ್ದಾರೆ. ಇವೆಲ್ಲ ಕ್ರಮಗಳೂ ಬಣವೆಗೆ ಬೆಂಕಿ ಬಿದ್ದಾಗ ಬಾವಿ ತೋಡುವಂತಹ ತರಾತುರಿಯ ಕ್ರಮಗಳಂತೆ ಕಾಣುತ್ತವೆ. ಕೇಂದ್ರ ಆರೋಗ್ಯ ಸಚಿವರೇನೊ 162 ಹೊಸ ಘಟಕಗಳನ್ನು ವಿವಿಧ ರಾಜ್ಯಗಳಿಗೆ 'ಸ್ಯಾಂಕ್ಷನ್' ಮಾಡಲಾಗಿದೆ ಎಂದೂ ಅವುಗಳಲ್ಲಿ 33 ಘಟಕಗಳು ಈಗಲೇ ಕೆಲಸ ಆರಂಭಿಸುತ್ತವೆಂದೂ ಹೇಳಿದ್ದಾರೆ. ಈ ದಿಢೀರ್ ನಿರ್ಧಾರಗಳೆಲ್ಲ ಸರ್ಕಾರದ ಶ್ಲಾಘನೀಯ ಕ್ರಮಗಳೆಂದು ಮೇಲ್ನೋಟಕ್ಕೆ ಕಾಣುತ್ತವಾದರೂ ಅನುಮತಿಗಾಗಿ ಕಾಯುತ್ತ ಕೂತಿದ್ದ ಕಡತಗಳಿಗೆ ಇದೀಗ ತುರ್ತು ಬಿಡುಗಡೆ ಸಿಕ್ಕಿತು ಎಂಬುದೇ ನಿಜವಾದ ಅರ್ಥವಾಗಿದೆ. ಏಕೆಂದರೆ, ಆಮ್ಲಜನಕ ಘಟಕಗಳೆಂದರೆ ಎಲ್ಲೆಂದರಲ್ಲಿ ಹೊತ್ತೊಯ್ದು ಹೂಡಬಹುದಾದ ಯಂತ್ರಗಳೇನಲ್ಲ. ಅವಕ್ಕೆ ದೊಡ್ಡ ಪ್ರಮಾಣದ ವಿದ್ಯುತ್ ಬೇಕು; ಗಾಳಿಯನ್ನು ಕಡುತಂಪು ಮಾಡುವ ಕ್ರಯೊಜೆನಿಕ್ ವ್ಯವಸ್ಥೆ ಬೇಕು; ಆಮ್ಲಜನಕದ ದ್ರವವನ್ನು ಸಾಗಿಸಬಲ್ಲ ಹೊಸ ಕ್ರಯೊ-ಟ್ಯಾಂಕರ್‌ಗಳ ಸಾಲು ಸಜ್ಜಾಗಿರಬೇಕು; ಸಾಗಿಸಿದ್ದನ್ನು ತುಂಬಲು ಸಾಲುಸಾಲು ಖಾಲಿ ಸಿಲಿಂಡರುಗಳು ಬೇಕು.

ಎಲ್ಲ ಸೌಕರ್ಯಗಳೂ ಎಲ್ಲ ಬಗೆಯ ತಜ್ಞರೂ ಇರುವ ಮಹಾನಗರಗಳಲ್ಲೇ ಈ ದುರವಸ್ಥೆ ಮಡುಗಟ್ಟಿದೆ ಎಂದರೆ, ಚಿಕ್ಕಪುಟ್ಟ ಹಳ್ಳಿ–ಪಟ್ಟಣಗಳತ್ತ ಕೋವಿಡ್–19 ವ್ಯಾಪಿಸಿದರೆ ಆ ಸ್ಥಿತಿ ಹೇಗಿರಬೇಡ?

ಕೋವಿಡ್ ಪರೀಕ್ಷಾ ಸೌಕರ್ಯಗಳ ಅಭಾವ, ಪಿಪಿಇ ಕಿಟ್‌ಗಳ ಅಭಾವ, ಆಂಬುಲೆನ್ಸ್ ಅಭಾವ, ಆಸ್ಪತ್ರೆಗಳ ಅಭಾವ, ಹಾಸಿಗೆಗಳ ಅಭಾವ, ವೆಂಟಿಲೇಟರ್ಸ್ ಅಭಾವ, ರೆಮ್‌ಡಿಸಿವಿರ್ ಔಷಧದ ಅಭಾವ, ಸ್ಮಶಾನದಲ್ಲಿ ಸ್ಥಳಾಭಾವ, ವ್ಯವಸ್ಥೆಯಲ್ಲಿ ಹೊಂದಾಣಿಕೆ ಅಭಾವ ಇತ್ಯಾದಿಗಳೆಲ್ಲ ಮಹಾಮಾರಿಯ ಮೊದಲ ದಾಳಿಯಲ್ಲಿ ಅನಿರೀಕ್ಷಿತವೆಂದು ಕೆಲಮಟ್ಟಿಗೆ ಹೇಳಬಹುದಿತ್ತು (ಇಂದಿನ ಮಾಹಿತಿ ಯುಗದಲ್ಲಿ ಅದೂ ಅನಿರೀಕ್ಷಿತವೇನಲ್ಲ; ಬರಲಿರುವ ಮಹಾಮಾರಿಯನ್ನು ತಡೆಯಲು ಬೇಕಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ವಿಶ್ವ ಆರೋಗ್ಯ ಸಂಸ್ಥೆ ತಿಂಗಳು ಮೊದಲೇ ತಿಳಿಸಿತ್ತು). ತಡವಾಗಿಯಾದರೂ ಅವುಗಳಿಗೆಲ್ಲ ವ್ಯವಸ್ಥೆ ಮಾಡಿದ್ದೇನೊ ಸರಿ. ಆದರೆ ಮಾರಿಯ ಅಬ್ಬರ ತುಸು ತಗ್ಗಿತೆಂದು ವಿರಮಿಸಿದ್ದು, ಔಷಧ-ಲಸಿಕೆಗಳ ರಫ್ತಿಗೆ ಒಪ್ಪಿಗೆ ಕೊಟ್ಟಿದ್ದು, ಇತ್ತ ಉತ್ಪಾದನೆ ಹೆಚ್ಚಿಸುವತ್ತ ಲಕ್ಷ್ಯ ಕೊಡದೆ, ಹಳಿ ಹತ್ತಿದ ವ್ಯವಸ್ಥೆಯನ್ನು ಮತ್ತೆ ಕಡೆಗಣಿಸಿದ್ದು ಸರಿಯಲ್ಲ. ಎರಡನೇ ಅಲೆ ಆರಂಭವಾಗಿದ್ದರ ಬಗ್ಗೆ ವಿದೇಶಗಳಿಂದ ಸುದ್ದಿ ಬರುತ್ತಿದ್ದಾಗ, ನಮ್ಮಲ್ಲೂ ಕಾಯಿಲೆ ಬೀಳುತ್ತಿದ್ದವರ ಸಂಖ್ಯೆ ಮತ್ತೆ ಏರುತ್ತಿದೆ ಎಂಬುದು ಗೊತ್ತಾಗುತ್ತಿದ್ದಾಗ ಲಗಾಮು ಸಡಿಲವಾಯಿತು. ಕಳೆದ ವರ್ಷ 'ಗೋ ಕೊರೊನಾ ಗೋ' ಎಂದು ಭಜನೆ ಹೇಳಿಸಿದವರೇ ಇತ್ತ ಚುನಾವಣಾ ಪ್ರಚಾರ, ಅತ್ತ ಕುಂಭಮೇಳಗಳಲ್ಲಿ ತಮ್ಮನ್ನು ಮುಳುಗಿಸಿಕೊಂಡು 'ಬಾ ಕೊರೊನಾ, ಬಾ' ಎಂಬಂತೆ ವರ್ತಿಸಿದ್ದು ಜನನಾಯಕರ ಆದ್ಯತೆಯನ್ನು ತೋರಿಸುತ್ತದೆ. ಮಧ್ಯಪ್ರದೇಶದಲ್ಲಿ ಆಮ್ಲಜನಕವಿಲ್ಲದೆ ಸರಣಿ ಸಾವು ಸಂಭವಿಸುತ್ತಿರುವಾಗ ತುರ್ತಾಗಿ ಆಮ್ಲಜನಕ ತರುತ್ತಿದ್ದ ಟ್ಯಾಂಕರನ್ನೂ ಅಡ್ಡಗಟ್ಟಿ ಗಣ್ಯರು ಹೂಮಾಲೆ, ಆರತಿ, ಸೆಲ್ಫಿಯಲ್ಲಿ ತೊಡಗಿದ್ದು ತುರ್ತುಮೌಢ್ಯದ ಚಾರಿತ್ರಿಕ ದಾಖಲೆ-ಗಳಾಗುತ್ತವೆ. ಎಲ್ಲ ಸೌಕರ್ಯಗಳೂ ಎಲ್ಲ ಬಗೆಯ ತಜ್ಞರೂ ಇರುವ ಮಹಾನಗರಗಳಲ್ಲೇ ಈ ದುರವಸ್ಥೆ ಮಡುಗಟ್ಟಿದೆ ಎಂದರೆ, ಚಿಕ್ಕಪುಟ್ಟ ಹಳ್ಳಿ–ಪಟ್ಟಣಗಳತ್ತ ಕೋವಿಡ್–19 ವ್ಯಾಪಿಸಿದಾಗಿನ ಸ್ಥಿತಿ ಊಹೆಗೂ ನಿಲುಕದಂತಾಗುತ್ತದೆ. ಮನೆಗಳಲ್ಲಿ ಶುಶ್ರೂಷೆಗೆ ಬೇಕಿದ್ದ ಕನಿಷ್ಠ ಸೌಲಭ್ಯಗಳನ್ನೂ ಸರ್ಕಾರ ಹಿಂತೆಗೆದುಕೊಂಡಿದೆ. ಆಮ್ಲಜನಕದ ಸಾಂದ್ರೀಕರಣ ಯಂತ್ರಗಳೂ ತುರ್ತು ಔಷಧಗಳೂ ಕಾಳಸಂತೆ ಸೇರಿವೆ. ತುರ್ತುಸೇವೆಗೆ ನಿಯೋಜಿತರಾಗಿದ್ದ ಗೃಹರಕ್ಷಕ ದಳವನ್ನೂ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಇತ್ತ ಲಸಿಕೆಯ ಅಭಾವವೂ ತಲೆದೋರಿದ್ದು ಅದರ ಉತ್ಪಾದನೆಗೆ ಬೇಕಿದ್ದ ಉಪದ್ರವ್ಯಗಳನ್ನು ಅಮೆರಿಕವು ಹೊರಗೆ ಸಾಗಿಸಲು ಅವಕಾಶ ನೀಡದಿರುವುದರಿಂದ ಹೊಸದೊಂದು ಬಿಕ್ಕಟ್ಟು ಕ್ಷಿತಿಜದಲ್ಲಿ ಕಾಣಿಸಿಕೊಂಡಿದೆ. ಇಂಥ ಗಂಭೀರ ಸಂದರ್ಭದ ಮಧ್ಯೆಯೇ ಪ್ರಧಾನಿಯವರು ಪಶ್ಚಿಮ ಬಂಗಾಳದ ಚುನಾವಣಾ ಸಭೆಯಲ್ಲಿ ಒತ್ತೊತ್ತಿ ನಿಂತ ಜನಸ್ತೋಮಕ್ಕೆ ಶಹಭಾಸ್ ಎಂದಿದ್ದು ಸರಿಯೇ?

ದಿನದ ಟ್ವೀಟ್

ಭರವಸೆ ಇರಲಿ

ಮುಂಬೈನಲ್ಲಿ ಕೋವಿಡ್‌ಪೀಡಿತರಾಗಿದ್ದ ನನ್ನ ಆತ್ಮೀಯ ಸೋದರಸಂಬಂಧಿಯೊಬ್ಬರು ಮನೆಯಲ್ಲೇ ಕ್ವಾರಂಟೈನ್ ಆಗಿದ್ದು ಚೇತರಿಸಿಕೊಂಡಿದ್ದಾರೆ. ಒಂದು ಭರವಸೆಯ ಕಥೆಯನ್ನಾಗಿ ಇದನ್ನು ಹಂಚಿಕೊಳ್ಳಲು ಬಯಸುತ್ತೇನೆ. ಅಂತಹ ಸ್ಥಿತಿ ಅತ್ಯಂತ ಒತ್ತಡದಾಯಕ, ಆದರೆ ಬಹುಪಾಲು ಮಂದಿ ಚೇತರಿಸಿಕೊಳ್ಳುತ್ತಾರೆ. ದಯವಿಟ್ಟು ಇದನ್ನು ನೆನಪಿನಲ್ಲಿ ಇಡಿ ಮತ್ತು ಉತ್ಸಾಹದಿಂದ ಇರಿ. ಎಲ್ಲ ಬಗೆಯ ಸುರಕ್ಷಾ ಕ್ರಮಗಳನ್ನೂ ಅನುಸರಿಸಿ. ಅನಗತ್ಯವಾಗಿ ಹೊರಹೋಗುವುದನ್ನು ತಪ್ಪಿಸಿ.

ಅದ್ವೈತ ಕಲಾ, ಲೇಖಕಿ

25 ವರ್ಷಗಳ ಹಿಂದೆ

ಶನಿವಾರ, 20-4-1996

• **ಬಾಡಿಗೆ ಹಂತಕನಿಂದ ಶಾಸಕ ಚಿತ್ತರಂಜನ್ ಹತ್ಯೆ**

ಬೆಂಗಳೂರು, ಏ. 19– ಭಟ್ಕಳದ ಬಿಜೆಪಿ ಶಾಸಕ ಡಾ. ಚಿತ್ತರಂಜನ್ ಅವರ ನಿಗೂಢ ಕೊಲೆಯ ಹಿಂದಿನ ರಹಸ್ಯವನ್ನು ಭೇದಿಸುವ ಹಾದಿಯಲ್ಲಿ ರಾಜ್ಯದ ಸಿಒಡಿ ಪೊಲೀಸರು ಸ್ವಲ್ಪಮಟ್ಟಿಗೆ ಯಶಸ್ಸು ಸಾಧಿಸಿದ್ದಾರೆ.

ಚಿತ್ತರಂಜನ್ ಅವರ ದಿನಚರಿಯನ್ನು ಅಧ್ಯಯನ ಮಾಡಿದ ಬಾಡಿಗೆ ಹಂತಕನೊಬ್ಬ ದೇಶಿ ಕಾರ್ಖಾನೆಯೊಂದರಲ್ಲಿ ತಯಾರಾದ 12 ಬೋರ್ ಬಂದೂಕು ಬಳಸಿ ಅವರ ಕೊಲೆ ಮಾಡಿದ್ದಾನೆ.

ಭಟ್ಕಳದ ಗಲಭೆಗೂ ಚಿತ್ತರಂಜನ್ ಕೊಲೆಗೂ ಸಂಬಂಧವಿಲ್ಲ. ಹಾಗೆಯೇ ಮುಂಬೈ ಭೂಗತ ಜಗತ್ತು ಅಥವಾ ಪಾಕಿಸ್ತಾನದ ಐಎಸ್‌ಐ ಕೈವಾಡ ಇದರ ಹಿಂದಿಲ್ಲ ಎಂಬ ಅಂಶ ಸಿಒಡಿಯ ಪ್ರಾಥಮಿಕ ತನಿಖೆಯಿಂದ ಬೆಳಕಿಗೆ ಬಂದಿದೆ.

• **ಚುನಾವಣೆ ಬಳಿಕ ಮತ್ತೆ ಕಾಂಗ್ರೆ ಹೋಳು: ವಿ.ಪಿ**

ಬೆಂಗಳೂರು, ಏ. 19– ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ಪಕ್ಷ ಒಡೆದು ಅಲ್ಲಿಂದ ಒಂದಷ್ಟು ಮಂದಿ, ಅತಿದೊಡ್ಡ ಶಕ್ತಿಯಾಗಿ ಬೆಳೆಯುತ್ತಿರುವ 'ತೃತೀಯ ರಂಗ'ವನ್ನು ಸೇರಲಿದ್ದಾರೆ ಎಂದು ದಳ ನಾಯಕ ವಿ.ಪಿ.ಸಿಂಗ್ ಅವರು ಇಂದು ಇಲ್ಲಿ ಭವಿಷ್ಯ ನುಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 20-4-1971

• **ಬೆಂಗಳೂರು ಬಿಟ್ಟು ಬೇರೆಡೆ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲು ಸೂಚನೆ**

ಬೆಂಗಳೂರು, ಏ. 19– ಬೆಂಗಳೂರಿನಲ್ಲಿಯೇ ಕೈಗಾರಿಕೆಗಳನ್ನು ಕೇಂದ್ರೀಕರಿಸು-ವುದನ್ನು ರಾಜ್ಯಪಾಲ ಶ್ರೀ ಧರ್ಮವೀರರವರು ವಿರೋಧಿಸುತ್ತಾರೆ.

'ಕಲಕತ್ತೆಯ ಪರಿಸ್ಥಿತಿ ಬೆಂಗಳೂರಿನಲ್ಲಿಯೂ ಆಗುವುದು ನನಗಿಷ್ಟವಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿ, ರಾಜ್ಯದ ಬೇರೆ ಬೇರೆ ಪಟ್ಟಣಗಳಲ್ಲಿ ಕೈಗಾ-ರಿಕೆಗಳನ್ನು ಸ್ಥಾಪಿಸುವಂತೆ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಹೇಳಿದರು.

• **ಇಡೀ ಸಿಲ್ಹೆಟ್ ಜಿಲ್ಲೆ ಮುಕ್ತಿಫೌಜ್ ವಶ**

ಶಿಲ್ಲಾಂಗ್, ಏ. 19– ಸಿಲ್ಹೆಟ್ ಪಟ್ಟಣದಿಂದ ಸುಮಾರು ಹತ್ತು ಕಿಲೊ ಮೀಟರ್ ದೂರದಲ್ಲಿರುವ ಆಯಕಟ್ಟಿನ ಷಾಲೂಟಕಾರ್ ವಿಮಾನ ನಿಲ್ದಾಣವನ್ನು ಇಂದು ಮಧ್ಯಾಹ್ನ ಬಾಂಗ್ಲಾದೇಶದ ವಿಮೋಚನಾ ಸೇನೆಯು ವಶಪಡಿಸಿಕೊಂಡಿತು.

ವಿಮಾನ ನಿಲ್ದಾಣ ವಶವಾದ್ದರಿಂದ ಇಡೀ ಸಿಲ್ಹೆಟ್ ಜಿಲ್ಲೆಯಿಂದ ಪಾಕಿಸ್ತಾನಿ ಸೈನಿಕರನ್ನು ಹೊಡೆದಟ್ಟಿದಂತಾಗಿದೆ.

ಅಸಮರ್ಥನೀಯ, ವಿಫಲ ಯುದ್ಧಗಳ ಕಾರಣದಿಂದ ಅಮೆರಿಕದ ಶಕ್ತಿ, ಭವ್ಯತೆಗೆ ಪೆಟ್ಟುಬಿದ್ದಿದೆ

ಬಲಾಢ್ಯ ಅಮೆರಿಕ ಆಫ್ಗನ್‌ನಲ್ಲಿ ಸೋತಿದ್ದೇಕೆ?

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಬಲಿಷ್ಠ ಸಾಮ್ರಾಜ್ಯಗಳು ಕುಸಿಯಲು ಆರಂಭವಾಗುವುದು ಏಕೆ, ಹೇಗೆ ಮತ್ತು ಯಾವಾಗ? ಇತಿಹಾಸ ಎರಡು ಪಾಠಗಳನ್ನು ಹೇಳುತ್ತದೆ. ಮೊದಲನೆಯದು, ಸಾಮ್ರಾಜ್ಯಗಳು ತಮ್ಮ ಶಕ್ತಿಯನ್ನು ಮೀರಿ ಬೆಳೆಯಲು ಯತ್ನಿಸಿದಾಗ, ದುರಾಸೆಯಿಂದ ತಮ್ಮ ಗಡಿಗಳನ್ನು ದಾಟಿ ಹೊರಟಾಗ ಈ ರೀತಿ ಆಗುತ್ತದೆ. ಎರಡನೆಯದು, ಮನುಷ್ಯನ ಜೀವಕ್ಕೆ, ನ್ಯಾಯಕ್ಕೆ ಗೌರವವಿಲ್ಲದೆ, ಸತ್ಯನಿಷ್ಠೆ ಇಲ್ಲದೆ ಕೊನೆಯಿಲ್ಲದ ಯುದ್ಧ ನಡೆಸಿದಾಗಲೂ ಹೀಗಾಗುತ್ತದೆ. ಒಂದು ಪುರಾತನ ನಿದರ್ಶನ, ಇನ್ನೊಂದು ಈಚೆಗಿನ ನಿದರ್ಶನ ಈ ಅಂಶವನ್ನು ಒತ್ತಿಹೇಳಲು ಸಾಕು. ಭಾರತವನ್ನು ಗೆಲ್ಲಬೇಕು ಎಂದು ಸಾಮ್ರಾಟ ಅಲೆಕ್ಸಾಂಡರ್‌ಗೆ ಕ್ರಿ.ಪೂ. 326ರಲ್ಲಿ ಇದ್ದ ಹಟ ಒಂದು ನಿದರ್ಶನವಾದರೆ, ಅಫ್ಗಾನಿಸ್ತಾನದ ಮೇಲೆ 1979ರಲ್ಲಿ ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ಸಾಮ್ರಾಜ್ಯ ನಡೆಸಿದ ಆಕ್ರಮಣ ಇನ್ನೊಂದು ನಿದರ್ಶನ.

ಭಾರತದ ಜಾನಪದ ತತ್ವಜ್ಞರು ಅಲೆಕ್ಸಾಂಡರ್‌ಗೆ ಹೇಳಿದ ಮಾತುಗಳನ್ನು ಎರಡನೆಯ ಶತಮಾನದ ಗ್ರೀಕ್ ಇತಿಹಾಸಕಾರ ಎರ್‍ರಿಯನ್ ದಾಖಲಿಸಿದ್ದಾನೆ. ಅಲೆಕ್ಸಾಂಡರ್‌ನ ಸೇನೆಯು ತಕ್ಷಶಿಲಾ ನಗರದತ್ತ ಧಾವಿಸುತ್ತಿದ್ದಾಗ, ಸಾಧುಗಳ ಗುಂಪೊಂದು ಎದುರಾಯಿತು. ಆ ಸಾಧುಗಳು ತಮ್ಮ ಕಾಲುಗಳನ್ನು ಅಲೆಕ್ಸಾಂಡರ್‌ನ ಎದುರಿನಲ್ಲಿ ನೆಲಕ್ಕೆ ಬಡಿಯುತ್ತಿದ್ದರು. ಈ ವಿಚಿತ್ರ ವರ್ತನೆ ಏಕೆಂದು ಅಲೆಕ್ಸಾಂಡರ್ ಕೇಳಿದಾಗ ಅವರು, 'ಅಯ್ಯಾ ಸಾಮ್ರಾಟ, ಪ್ರತೀ ಮನುಷ್ಯ ತಾನು ನಿಲ್ಲಬಲ್ಲಷ್ಟು ನೆಲವನ್ನು ಮಾತ್ರ ತನ್ನದಾಗಿಸಿಕೊಳ್ಳಬಲ್ಲ. ನೀನು ನಮ್ಮಂತೆಯೇ ಮನುಷ್ಯ. ಆದರೆ, ನೀನು ತಾಯ್ನಾಡಿನಿಂದ ಸಹಸ್ರಾರು ಮೈಲಿ ದೂರ ಬಂದಿದ್ದೀಯ, ಬೇರೆಯವರನ್ನು ಪೀಡಿಸು-ತ್ತಿದ್ದೀಯಾ. ನೀನು ಶೀಘ್ರವೇ ಮರಣ ಹೊಂದುವೆ, ಆಗ ನಿನ್ನನ್ನು ಹೂತುಹಾಕಲು ಎಷ್ಟು ಬೇಕೋ ಅಷ್ಟು ನೆಲವನ್ನು ಮಾತ್ರ ಹೊಂದಿರುತ್ತೀಯ' ಎಂದರು. ಅಲೆಕ್ಸಾಂಡರ್‌ನ ಸೈನಿಕರು ಬಸವಳಿದಿದ್ದರು. ಅಲೆಕ್ಸಾಂಡರ್ ಮರಳಿ ಹೊರಟಾಗ ಅವರಿಗೆ ತಾಯ್ನಾಡು ಗ್ರೀಸ್ ತಲುಪಲು ಆಗಲಿಲ್ಲ. 32ನೇ ವಯಸ್ಸಿನಲ್ಲಿ ಅಲೆಕ್ಸಾಂಡರ್ ಬ್ಯಾಬಿ-ಲೋನ್‌ನಲ್ಲೇ ತೀರಿಕೊಂಡ.

ಸೋವಿಯತ್ ಒಕ್ಕೂಟ ಹಿಂದಡಿ ಇಟ್ಟಿದ್ದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿ. ಆಗ 'ದಿ ಸಂಡೇ ಅಬ್ಸರ್ವರ್' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದ ನಾನು 1988ರಲ್ಲಿ ಮತ್ತು 1989ರಲ್ಲಿ ಅಫ್ಗಾನಿಸ್ತಾನಕ್ಕೆ ಹೋಗಿದ್ದೆ. ಯುದ್ಧಪೀಡಿತ ಆ ದೇಶದಿಂದ ಸೋವಿಯತ್ ಸೈನಿಕರು ಮರಳಿದ್ದನ್ನು ನಾನು 1989ರ ಫೆಬ್ರುವರಿಯಲ್ಲಿ ವರದಿ ಮಾಡಿದ್ದೇನೆ. ಸಹಸ್ರಾರು ಅಫ್ಗನ್ ಸೈನಿಕರನ್ನು ಸಮಾಧಿ ಮಾಡಿದ್ದ, ಕಾಬೂಲ್ ಬಳಿಯ ಸಮಾಧಿಸ್ಥಳಕ್ಕೆ ಭೇಟಿ ನೀಡಿದ್ದೆ. ನಂತರ ಒಮ್ಮೆ ರಷ್ಯಾಕ್ಕೆ ಭೇಟಿ ನೀಡಿದ್ದಾಗ, ಅಫ್ಗಾನಿಸ್ತಾನದಲ್ಲಿನ ಯುದ್ಧದಲ್ಲಿ ಕಾಲು ತುಂಡರಿಸಿಕೊಂಡಿದ್ದ ಸೈನಿಕನೊಬ್ಬನನ್ನು ಭೇಟಿ ಮಾಡಿದ್ದೆ. ಸೋವಿಯತ್ ನಾಯಕ ಲಿಯೋನಿಡ್ ಬ್ರೆಜ್ನೆವ್‌ಗೆ ಅಫ್ಗಾನಿಸ್ತಾನದಲ್ಲಿ ಅಮೆರಿಕವನ್ನು ಸೋಲಿಸಬೇಕಿತ್ತು. ಹಾಗಾಗಿ, 1978ರಲ್ಲಿ ಒಂದು ಕ್ಷಿಪ್ರಕ್ರಾಂತಿಯನ್ನು ಬೆಂಬಲಿಸಿ ಅಲ್ಲಿ ಎಡಪಂಥೀಯ, ಸೋವಿಯತ್ ಪರ ಸರ್ಕಾರ ರಚನೆಯಾಗಲು ಸಹಾಯ ಮಾಡಿದ. ಆದರೆ, ನಂತರ ಪರಿಸ್ಥಿತಿ ಕೈಮೀರಿತು. ಅಶಿಸ್ತಿನ ಅಫ್ಗನ್ ಹೋರಾಟಗಾರರು ಅವರಿಗಿಂತ ಶಕ್ತಿಯುತವಾಗಿದ್ದ ಸೋವಿಯತ್ ಸೈನ್ಯವನ್ನು ಸೋಲಿಸಿದರು. ಅವರಿಗೆ ಅಮೆರಿಕ–ಸೌದಿ–ಪಾಕ್ ಸಹಾಯವಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಗೆಲ್ಲಲಾಗದ ಈ ಯುದ್ಧವನ್ನು ಸಂಭಾಳಿಸುವುದೂ ಆಗದು ಎಂಬುದು ಅರಿವಾದಾಗ ಸುಧಾರಣಾವಾದಿ ಸೋವಿಯತ್ ನಾಯಕ ಮಿಖಾಯಿಲ್ ಗೊರ್ಬಚೆವ್ ಅವರು ಸೇನೆಯನ್ನು ಹಿಂದಕ್ಕೆ ಕರೆಸಿಕೊಂಡರು. ಅಫ್ಗನ್‌ನಲ್ಲಿ ಇರಿಸಿದ ತಪ್ಪು ನಡೆಯು ಸೋವಿಯತ್ ಒಕ್ಕೂಟದ ಪತನಕ್ಕೆ ವೇಗ ನೀಡಿತು. ಎರಡನೆಯ ಸೂಪರ್ ಪವರ್ ಆಗಿದ್ದ ಸೋವಿಯತ್ ಒಕ್ಕೂಟದ ಹೆಸರು ಈಗ ಇತಿಹಾಸದ ಪುಸ್ತಕಗಳಲ್ಲಿ ಮಾತ್ರ ಕಾಣಿಸುತ್ತದೆ.

ಹಿಂದೆ ನಾನು ಕಾಬೂಲ್‌ನಲ್ಲಿ ಅಫ್ಗಾನಿಸ್ತಾನದ ಅಧ್ಯಕ್ಷ ಡಾ. ಮೊಹಮ್ಮದ್ ನಜೀಬುಲ್ಲಾ ಅವರನ್ನು ಸಂದರ್ಶಿಸಿದ್ದೆ. ಅವರು ಭಾರತದ ದೊಡ್ಡ ಸ್ನೇಹಿತರು. ದೇಶದಲ್ಲಿ ಶಾಂತಿ ಸ್ಥಾಪನೆ ಸಾಧ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು ಅವರು. ಆದರೆ 1992ರಲ್ಲಿ ಮುಜಾಹಿದ್ದೀನ್‌ಗಳು ಅವರ ನೇತೃತ್ವದ ಸರ್ಕಾರವನ್ನು ಕಿತ್ತುಹಾಕಿದರು. ನಾಲ್ಕು ವರ್ಷಗಳ ನಂತರ ನಜೀಬುಲ್ಲಾ ಅವರನ್ನು ಅತ್ಯಂತ ಕ್ರೂರವಾಗಿ ಕೊಲ್ಲಲಾಯಿತು. 'ಇತಿಹಾಸದಿಂದ ಪಾಠ ಕಲಿಯದವರು ಇತಿಹಾಸದಲ್ಲಿನ ತಪ್ಪುಗಳನ್ನು ಮತ್ತೆ ಮಾಡುತ್ತಾರೆ' ಎಂಬ ಮಾತಿದೆ. ಸೋವಿಯತ್ ಒಕ್ಕೂಟ ಮಾಡಿದ ತಪ್ಪನ್ನೇ ತಾನೂ ಮಾಡಿದ ಅಮೆರಿಕ, ಅದರಂತೆ ಶೀಘ್ರವೇ ಕುಸಿದುಬೀಳಲಿಕ್ಕಿಲ್ಲ. ಆದರೆ, ಅಮೆರಿಕ ಪತನವು ಸ್ಪಷ್ಟವಾಗುತ್ತಿದೆ. ಅಫ್ಗಾನಿಸ್ತಾನ ಹಾಗೂ ಇರಾಕ್‌ನಲ್ಲಿನ ಅಸಮರ್ಥನೀಯ, ವಿಫಲ ಯುದ್ಧಗಳ ಕಾರಣದಿಂದಾಗಿ ಅಮೆರಿಕದ ಶಕ್ತಿ, ಭವ್ಯತೆ ಕೊನೆಗೊಳ್ಳುವುದಕ್ಕೆ ವೇಗ ದೊರಕಿತು ಎಂದು ಮುಂದಿನ ಇತಿಹಾಸಕಾರರು ದಾಖಲಿಸುತ್ತಾರೆ.

ಸೆಪ್ಟೆಂಬರ್ 11ಕ್ಕೆ ಮೊದಲು ಅಫ್ಗಾನಿಸ್ತಾನ-ದಿಂದ ಅಮೆರಿಕದ ಸೈನಿಕರು ಮರಳಲಿದ್ದಾರೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡೆನ್ ಅವರು ಈಚೆಗೆ ಹೇಳಿದ್ದಾರೆ. ತಾಲಿಬಾನೀಯರು ಅಲ್‌ಕೈದಾ ಮುಖ್ಯಸ್ಥ ಒಸಾಮಾ ಬಿನ್ ಲಾಡೆನ್‌ಗೆ ಆಶ್ರಯ ನೀಡಿದ್ದ ಕಾರಣ, 2001ರಲ್ಲಿ ಅಮೆರಿಕದ ಸೈನಿಕರು ಅಫ್ಗಾನಿಸ್ತಾನದ ಮೇಲೆ ದಾಳಿ ನಡೆಸಿದಾಗ ಇದ್ದ ಗುರಿ ಅಲ್ಲಿ ತಾಲಿಬಾನ್ ಆಡಳಿತ ಕೊನೆಗೊಳಿಸುವುದಾಗಿತ್ತು. ಹತ್ತು ವರ್ಷಗಳ ನಂತರ ಅಮೆರಿಕದ ಸೈನಿಕರು ಲಾಡೆನ್‌ನನ್ನು ಹತ್ಯೆ ಮಾಡಿದರು. ಆದರೆ, ತಾಲಿಬಾನೀಯರನ್ನು ಸೋಲಿಸಲು ಅಮೆರಿಕಕ್ಕೆ ಸಾಧ್ಯವಾಯಿತೇ? ಇಲ್ಲ. ಬದಲಿಗೆ, 'ಅಫ್ಗನ್ ನೆಲದಿಂದ ವಿದೇಶಿ ಅಮೆರಿಕನ್ನರನ್ನು ಹೊರದಬ್ಬುತ್ತೇವೆ' ಎಂದು ತಾಲಿಬಾನೀಯರು ಪಣತೊಟ್ಟರು. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಅಮೆರಿಕವು ತಾಲಿಬಾನ್ ನಾಯಕರ ಜೊತೆ ಅಧಿಕಾರ ಹಂಚಿಕೆ ಕುರಿತು ಹಲವು ಬಾರಿ ಮಾತುಕತೆ ನಡೆಸಿದೆ. ಒಂದಂತೂ ಸತ್ಯ: ಅಮೆರಿಕದ ಕಟ್ಟಕಡೆಯ ಸೈನಿಕ ಅಫ್ಗಾನಿಸ್ತಾನದಿಂದ ಹೊರನಡೆದ ನಂತರ ಯಾವುದೇ ಸರ್ಕಾರದಲ್ಲಿ ತಾಲಿಬಾನೀಯರು ಮಹತ್ವದ, ಪ್ರಬಲ ಪಾತ್ರ ವಹಿಸಲಿದ್ದಾರೆ.

ಹಾಗಾದರೆ, 20 ವರ್ಷಗಳ ಯುದ್ಧದಿಂದ ಅಮೆರಿಕ ಗಳಿಸಿದ್ದೇನು? ಅಮೆರಿಕ ತನ್ನ 2,400 ಯೋಧರನ್ನು ಕಳೆದುಕೊಂಡಿತು. ಮೃತಪಟ್ಟ ಅಫ್ಗನ್ ಯೋಧರು, ಹೋರಾಟಗಾರರು, ನಾಗರಿಕರ ಸಂಖ್ಯೆ ಎರಡು ಲಕ್ಷಕ್ಕೂ ಅಧಿಕ. 2003ರಲ್ಲಿ ಇರಾಕ್ ಮೇಲಿನ ದಾಳಿಗೆ ಅಮೆರಿಕ ನೀಡಿದ್ದ ಕಾರಣ ಅಲ್ಲಿ ಸಮೂಹನಾಶಕ ಶಸ್ತ್ರಾಸ್ತ್ರಗಳು ಇವೆ ಎಂಬುದು. ಆದರೆ, ನಂತರದಲ್ಲಿ ಅದು ಸುಳ್ಳು ಎಂಬುದು ಗೊತ್ತಾಯಿತು.

ಇವೆಲ್ಲ ನಮಗೆ ಹೇಳುವುದೇನು? ಅಮೆರಿಕವು ಸಂಪದ್ಭರಿತ ದೇಶ, ಮುಕ್ತ ಹಾಗೂ ಸ್ವತಂತ್ರ ಸಮಾಜ ಅಲ್ಲಿದೆ. ಜಗತ್ತಿನ ಎಲ್ಲೆಡೆಗಳಿಂದ ವಲಸಿಗರು ಆ ನಾಡಿನತ್ತ ಆಕರ್ಷಿತರಾದರು. ಹೀಗಿದ್ದರೂ, ಎರಡನೆಯ ವಿಶ್ವಯುದ್ಧ ಕೊನೆಗೊಂಡ ನಂತರ ಅಮೆರಿಕದ ಮಿಲಿಟರಿ–ಉದ್ದಿಮೆಯು ಜಗತ್ತಿನ ಒಂದಲ್ಲ ಒಂದು ಕಡೆ ಯುದ್ಧದಲ್ಲಿ ನಿರತವಾಗಿಯೇ ಇದೆ. ವಿಯೆಟ್ನಾಂ ಯುದ್ಧದಲ್ಲಿ (1964–75) ಕಂಡ ಸೋಲಿನಿಂದ ಅಮೆರಿಕ ಯಾವ ಪಾಠವನ್ನೂ ಕಲಿಯಲಿಲ್ಲ. ಮಿಲಿಟರಿ ಶಕ್ತಿಯೊಂದೇ ಯುದ್ಧದಲ್ಲಿ ಗೆಲುವು ತಂದುಕೊಡುತ್ತದೆ ಎನ್ನಲಾಗದು. ಭೂಮಂಡಲದಲ್ಲಿನ ಅತ್ಯಂತ ಶಕ್ತಿಶಾಲಿ ಮಿಲಿಟರಿ ಅಮೆರಿಕದ ಬಳಿಯಿದೆ. ಹೀಗಿದ್ದರೂ ವಿಯೆಟ್ನಾಂ, ಅಫ್ಗಾನಿಸ್ತಾನ ಅಥವಾ ಇರಾಕ್‌ನಲ್ಲಿ ಯುದ್ಧ ಗೆಲ್ಲಲು ಅಮೆರಿಕಕ್ಕೆ ಆಗಲಿಲ್ಲ. ಮಿಲಿಟರಿ ಮೇಲಿನ ಅತಿಯಾದ ವೆಚ್ಚಗಳ ಕಾರಣದಿಂದಾಗಿ ಅಸಮಾನತೆ, ಬಡತನ ಹಾಗೂ ಸಾಮಾಜಿಕ ಸಂಘರ್ಷಗಳು ಅಮೆರಿಕದಲ್ಲಿ ತೀವ್ರವಾಗುತ್ತಿವೆ. ಇವೆಲ್ಲವೂ ಅಮೆರಿಕದ ಪ್ರಜಾತಂತ್ರದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ – ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರು ಕ್ಯಾಪಿಟಲ್ ಹಿಲ್ ಮೇಲೆ ದಂಗೆ ಎದ್ದ ರೀತಿಯಲ್ಲಿ ದಾಳಿ ನಡೆಸಿದ್ದನ್ನು ಕಂಡಿದ್ದೇವೆ. ಚೀನಾ ಮತ್ತು ಭಾರತ ಪ್ರವರ್ಧಮಾನಕ್ಕೆ ಬರಲು ಆರಂಭಿಸಿದ ನಂತರದಲ್ಲಿ ಅಮೆರಿಕವು ಜಾಗತಿಕ ಸೂಪರ್ ಪವರ್ ಆಗಿ ಉಳಿದಿಲ್ಲ.

ಅಫ್ಗಾನಿಸ್ತಾನದಲ್ಲಿ ಆದ ಎಲ್ಲ ವಿನಾಶಗಳಿಗೆ ಅಮೆರಿಕವೊಂದೇ ಕಾರಣವಲ್ಲ. ತಾಲಿಬಾನ್ ಹಾಗೂ ತಾಲಿಬಾನ್ ವಿರೋಧಿ ಗುಂಪುಗಳ ನಡುವಿನ ತಿಕ್ಕಾಟ ಕೂಡ ಅಲ್ಲಿನ ಜನರನ್ನು ಕಷ್ಟಕ್ಕೆ ದೂಡಿದೆ. ಹಾಗಾಗಿ, ಎಲ್ಲ ವಿರೋಧಿ ಗುಂಪುಗಳು ಅಲ್ಲಿ ಒಟ್ಟಾಗಿ, ಮಾತುಕತೆ, ರಾಜಿ ಹಾಗೂ ಒಗ್ಗಟ್ಟಿನ ಸೂತ್ರದಲ್ಲಿ ದೇಶವನ್ನು ಮತ್ತೆ ಕಟ್ಟಬೇಕು.

ಚುರುಮುರಿ



ಕೋವಿಡ್ ಮಾರ್ಗಸೂಚಿ

• ಲಿಂಗರಾಜು ಡಿ.ಎಸ್.

ಬೋದರೆಗುದ್ದನಹಳ್ಳಿ ಕ್ಷೇತ್ರದ ಜನಪ್ರಿಯ ರಾಜಕಾರಣಿಗಳು ಬೇಜಾರಲ್ಲಿ ಕೂತುದ್ದು ಕಂಡು 'ಯಾಕಣ್ಣ?' ಅಂತ ಇಚಾರಿಸಿದೆ.

'ನೋಡ್ಲಾ, ನಮ್ಮ ಪಿಎಂ, ಸಿಎಮ್ಮು ಸೇರಿ ಜನಸಂಪರ್ಕದಲ್ಲಿರೋ ಹಿರಿ-ಕಿರಿ ನಾಯಕರಿಗೆಲ್ಲಾ ಕೋವಿಡ್ ಸೋಂಕಾಯ್ತಾದೆ. ನನಗೆ ಇಲ್ಲೀಗಂಟಾ ಕೊರೊನಾ ಬಂದುಲ್ಲ. ಜನಸಂಪರ್ಕ ಕಮ್ಮಿ ಆಯ್ತಾ ಇರದೇ ಕಾರಣ ಅಂತ ನಮಗಾಗದೋರು ಆಡಿಕ್ಯತಾವ್ರೆ' ಅಂತ ಬ್ರೇಕಿಂಗ್ ನ್ಯೂಸ್ ಬುಟ್ಟರು.

'ನಿನ್ನ ಆರೋಗ್ಯ ಚೆನ್ನಾಗದಲ್ಲ ಅದುಕ್ಕೆ ಕುಸಿಪಡಣ್ಣ' ಅಂದೆ. 'ಲೇಯ್, ನಮ್ಮ ಪಕ್ಸದೋನೆ ಒಬ್ಬ 'ನಾನು ಜನದ ಮಧ್ಯೆನೇ ಇರೋವೊತ್ಗೆ ಮೂರು ಸಾರಿ ಕೊರೊನಾ ಬಂದದೆ. ಜನಪ್ರಿಯತೆ ಮಾರ್ಗಸೂಚಿ ಪ್ರಕಾರ ಮುಂದ್ಲ ಎಲೆಕ್ಸನ್ನಲ್ಲಿ ನನಗೇ ಸೀಟು ಕೊಡಬೇಕು' ಅಂತ ಹೈಕಮಾಂಡಿಗೆ ಅಪ್ಲಿಕೇಸನ್ ಹಾಕ್ಯಂಡವನೆ. ಅದುಕ್ಕೆ ಕೌಂಟ್ರು ಮಾಡಲೇಬೇಕು! ನೀನು ಇಲ್ಲಿದ್ದೋನಂಗೇ ವೋಗಿ ಕೊರೊನಾ ಟೆಸ್ಟ್ ಮಾಡಕ್ಕೆ ಒಬ್ಬ ಡಾಕ್ಟರು ಕರಕಬರೋಗು!' ಅಂದ್ರು.

'ಯಾವ ಡಾಕ್ಟ್ರು ಬಂದಾರಣ್ಣ!' ಅಂದೆ.

'ಲೇಯ್, ನಿನ್ನ ಫ್ರೆಂಡು ಮನ್ನೆ ಪಿಂಕಿ ವೀನಿವರ್ಸಿಟಿಯಿಂದ ಡಾಕ್ಟ್ರಾದನಲ್ಲೋ ಅವುನ್ನೇ ಕರಕಬರೋಗು' ಅಂತ ಜುಲುಮೆ ಮಾಡತೊಡಗಿದರು.

'ಯಣ್ಣಾ, ಅವರು ಗೌರವ ಡಾಕ್ಟರೇಟ್ ತಗಂಡಿರಾ ಆಲೆಮನೆ ಓನರು ಕನಣ್ಣಾ' ಅಂದೆ.

ನಾಯಕರು ಸಿಟ್ಟಾಗಿ 'ಲೋ ಜನಕ್ಕೇನು ಗೊತ್ತಾದದ್ಲಾ? ಅವುರುನ್ನೇ ಕರಕಬಂದು 'ನಾಯಕರಿಗೆ ಕೊರೊನಾ ಅಟಕಾಯಿಸಿ-ಕ್ಯಂಡದೆ. ಈಗ ಮನೇಲೇ ಕ್ವಾರಣ್ಯದಲ್ಲವರೆ. ಅವರ ಆರೋಗ್ಯ ಸ್ಥಿರವಾಗದೆ' ಅಂತ ಹೆಲ್ತ್ ಬುಲೆಟಿನ್ ಬುಡ್ಸು. ಕೊರೊನಾ ಬಂದೋರಿಗೆ ವಸಾ ಬ್ರಾಂಡು ರಮ್ಮು ಡಿಸಿವರ್ ಅಂತಾ ಕೊಟ್ಟಾರಂತಲ್ಲೋ! ಅದೀಗ ಸಿಕ್ತಿಲ್ಲವಂತೆ. ಸರ್ವರೋಗಕ್ಕೂ ಸಾರಾಯಿ ಮದ್ದು ಅಂತ ಗೊತ್ತಾಯ್ತಲ್ಲ! 'ಕೊರೊನಾ ಮ್ಯಾಳ ಮಾಡ್ತುದವಿ. ಟೆಸ್ಟ್ ಮಾಡಿಸಿಗ್ಯಳಿ, 90 ರಮ್ಮು ತಗಳಿ, ಮಾಸ್ಕಾಕ್ಕಳಿ' ಅಂತ ಪಾಂಪ್ಲೆಟ್ ಹೊಡಸು' ಅಂದು, ಕೊರೊನಾ ಸೋಂಕಿತರ ಥರಾ ಪ್ರಾಕ್ಟೀಸ್ ಮಾಡತೊಡಗಿದರು.

ನಾಯಕರಿಗೆ ಜನರ ಮೇಲಿರೋ ರೋಗ ದ್ವೇಷ ನೋಡಿ ನನಗೆ ಕಣ್ಣಲ್ಲಿ ನೀರು ಕಡದೋ!

ಸಂಗತ

'ತೊಡಕು' ಎಂಬ ಶುಭ ಹಾರೈಕೆ

ಎಲ್ಲ ತೊಡಕುಗಳು ನಿವಾರಣೆಯಾಗಲಿ ಎನ್ನುವುದು, ಯುಗಾದಿಯ ಮರುದಿನ ಆಚರಿಸುವ ವರ್ಷದ ತೊಡಕುವಿನ ಅಂತರಾರ್ಥ

• ಹೊರೆಯಾಲ ದೊರೆಸ್ವಾಮಿ

ಯುಗಾದಿ ಮರುದಿನದ 'ವರ್ಷ ತೊಡಕು'ವಿನ ಪದ ನಿಷ್ಪತ್ತಿ ಮತ್ತು ಆಚರಣೆಯ ಬಗ್ಗೆ ಡಾ. ಟಿ.ಗೋವಿಂದರಾಜು ಅವರು ಜನಪದ ಹಿನ್ನೆಲೆಯನ್ನು ವಿವರಿಸುತ್ತ (ವಾ.ವಾ., ಏ. 16), 'ಕೆಲವರು ಹೊಸ ವರ್ಷದ ಆರಂಭದಲ್ಲಿ ಸೇವಿಸುವ ಅಡಗು (ಅಂದರೆ ಮಾಂಸ) ಎಂಬುದೇ ಕಾಲಾಂತರದಲ್ಲಿ ಅವರವರಿಗೆ ತೋಚಿದ ರೂಪದ ಅಪಭ್ರಂಶಗಳಾಗಿದೆ. ಇದು ಮಾಂಸ ಪ್ರಧಾನವಾದು-ದೆಂಬುದನ್ನು ಗ್ರಹಿಸಿದರೆ ಮಿಕ್ಕದ್ದು ತಾನೇ ಅರ್ಥವಾ-ಗುತ್ತದೆ' ಎಂದಿದ್ದಾರೆ. ಅವರ ಈ ಅಭಿಪ್ರಾಯ ಚರ್ಚಾ-ಸ್ಪದವಾದುದು. ಈ ಬಗ್ಗೆ ಕೊಂಚ ವಿವರ ಅವಶ್ಯಕ.

ಯುಗಾದಿ ಎಂಬುದು ಒಂದು ಹಬ್ಬಕ್ಕಿಂತಲೂ ಮಿಗಿಲಾಗಿ ಕಾಲಗಣನೆಯ ಒಂದು ಘಟ್ಟ ಅಥವಾ ವಿಧಾನ. ಹಿಂದೂ ಸಂಪ್ರದಾಯದಲ್ಲಿ ಕಾಲಗಣನೆಯ ಈ ದಿನವನ್ನು (ಇದರಲ್ಲಿ ಎರಡು ಬಗೆಗಳಿವೆ-ಚಾಂದ್ರಮಾನ ಮತ್ತು ಸೌರಮಾನ) ಯುಗಾದಿ ಎಂಬ ಹೆಸರಿನಲ್ಲಿ ಪ್ರಥಮ ದಿನವನ್ನಾಗಿ ಆಚರಿಸುತ್ತಾರೆ. ಅಂದು ಯಾವುದೇ ಒಂದು ನಿರ್ದಿಷ್ಟ ದೇವರ ಪೂಜೆ ಇರುವುದಿಲ್ಲ ಎಂಬುದನ್ನೂ ನಾವು ಗಮನಿಸಬೇಕು. ಮುಖ್ಯವಾಗಿ ಪ್ರಕೃತಿ ಆಧಾರಿತವಾದ ಆಚರಣೆ ಇರುತ್ತದೆ.

ಯುಗಾದಿಯ ಮಾರನೆಯ ದಿನವನ್ನು ಕೆಲವೆಡೆ 'ವರ್ಷ ತೊಡಕು' ಎಂದೂ ಇನ್ನು ಕೆಲವು ಕಡೆಗಳಲ್ಲಿ 'ವರ್ಷ ತುಡುಕು', 'ವರ್ಷ ದುಡುಕು' ಎಂದೂ ಮತ್ತು 'ವರ್ಷದ ಹೆಚ್ಚು' ಎಂದೂ ಹೆಸರಿಸಿ ಆಚರಿಸುವುದುಂಟು. ಆ ದಿನ, ಗೋವಿಂದರಾಜು ಅವರು ಹೇಳಿರುವಂತೆ ಮಾಂಸಾಹಾರಿಗಳ ಮನೆಯಲ್ಲಿ ಮಾಂಸ ಪ್ರಧಾನವಾದ ಅಡುಗೆ ಇದ್ದರೆ, ಸಸ್ಯಾಹಾರಿಗಳ ಮನೆಯಲ್ಲಿ ಪಾಯಸ ಪ್ರಧಾನವಾದ ಸಿಹಿ ಅಡುಗೆ ಮಾಡುವುದು ವಾಡಿಕೆ (ಅವರು ಸ್ಥಿತಿವಂತರಾಗಿ ಇದ್ದರೆ ಮಾತ್ರ ಇದು ಇಬ್ಬರಿಗೂ ಅನ್ವಯಿಸುತ್ತದೆ). ಈ 'ತೊಡಕು' ಎಂಬ ಪದದ ನಿಷ್ಪತ್ತಿಯನ್ನು 'ಅಡಗು' (ಮಾಂಸ) ಎಂಬ ಪದದ ಮೂಲದಲ್ಲಿ ಕಂಡುಕೊಳ್ಳಲು ತಮ್ಮ ಬರಹದಲ್ಲಿ ಅವರು ಪ್ರಯತ್ನಿಸಿದ್ದಾರೆ.

ಪದ ಸಾಮ್ಯದ ವಾಸ್ತವ ದೃಷ್ಟಿಯಿಂದ ನೋಡಿದರೆ 'ಅಡಗು'ವಿನಿಂದ 'ತೊಡಕು' ಅಪಭ್ರಂಶವಾಗಿ ಹೊಮ್ಮಿಬರುವುದು ದೂರಾನ್ವಯ ಮತ್ತು ಭಾಷಾಶಾಸ್ತ್ರದ ಪ್ರಕಾರ ಅಸಂಭವ. ಅಲ್ಲದೆ ಇವೆರಡೂ ಅಚ್ಚ ಕನ್ನಡ ಪದಗಳೇ ಆಗಿರುವುದರಿಂದ ರೂಪಾಂತರಕ್ಕೆ ಅವಕಾಶ ಕಡಿಮೆ ಅಥವಾ ಅದರ ಅವಶ್ಯಕತೆ ಇಲ್ಲ. ಯುಗಾದಿಯ ಮಾರನೆಯ ದಿನ ಹೊಸ ವರ್ಷದ ಸಂಭ್ರಮದ ದಿನವಾಗಿ, ಕಷ್ಟಗಳನ್ನು ಮರೆಯುವ ಕುರುಹಾಗಿ ಅನೇಕ ಬಗೆಯ ಮನರಂಜನೆಯ ಕಾರ್ಯಕ್ರಮಗಳು ಈ ಹಿಂದೆ ಇದ್ದವು. ಉದಾಹರಣೆಗೆ, ಗಟ ಆಟ (ಚೌಕಾಬಾರ ಅಥವಾ ಹುಣಸೆಪಚ್ಚಿ ಆಟ), ಹುಲಿಕಲ್ಲಿನ ಆಟ, ತೂಗುಯ್ಯಾಲೆ ಆಟ, ತೆಂಗಿನಕಾಯಿ ಒಡೆಯುವುದು ಮುಂತಾದವು (ಆಮೇಲೆ ಜೂಜು, ಇಸ್ಪೀಟಾಟದ ದಂಧೆ ಶುರುವಾಯಿತು). ಆ ದಿನದಂದು ವರ್ಷದ ತೊಡಕು, ಅಂದರೆ ಅಡ್ಡಿ, ಕಷ್ಟಗಳು ದೂರವಾಗಲೆಂದು ಹಾರೈಸುವ ಒಂದು ಆಶಾಭಾವವಾಗಿ 'ತೊಡಕು' ಅನ್ನು ಆಚರಿಸುವ ಪದ್ಧತಿ ಜಾರಿಗೆ ಬಂದಿದೆಯಲ್ಲದೆ 'ಅಡಗು'ವಿನ ಅಥವಾ 'ಮಾಂಸ' ಸೇವನೆಯ ಕಾರಣದಿಂದಲ್ಲ.

ಇದೊಂದು ಭಾವಸಂಬಂಧಿಯಾದ ಪದ ಅನ್ನಬಹುದು. ಯಾಕೆಂದರೆ, ಮಾಂಸ ಸೇವನೆ ಇಲ್ಲದಿರುವ ಅನೇಕ ಜನಸಮುದಾಯಗಳು ಕೂಡ ಈ 'ತೊಡಕು' ಅನ್ನು ಆಚರಿಸುತ್ತವೆ. 'ತೊಡಕು'ವಿಗೆ 'ಮಾಂಸ' ಎಂಬ ಅರ್ಥ ತೆಗೆದುಕೊಂಡರೆ, ಅಲ್ಲಿ ಈ ಪದ ಬಿದ್ದು ಹೋಗುತ್ತದೆ. ಅಂದರೆ, ಇಡೀ ಜನಪದ ಜನಸಮುದಾಯಕ್ಕೆ ಅನ್ವಯವಾಗುವುದಿಲ್ಲ. ಹಾಗಾಗಿ ತೊಡಕು = ಮಾಂಸ ಎಂಬುದು ಅರೆಸತ್ಯವಾಗುತ್ತದೆ. ಆದರೆ, ಭಾಷಾಶಾಸ್ತ್ರದಲ್ಲಿ ಈ ಬಗೆಯ ಅರೆಸತ್ಯಗಳಿಗೆ ಅವಕಾಶವಿರುವುದಿಲ್ಲ.

ಇನ್ನು 'ವರ್ಷದ ಹೆಚ್ಚು' ಎಂಬ ಪದದ ಬಗ್ಗೆ. ಹೆಚ್ಚು ಎಂಬುದು ಜನರ ಸಂಪತ್ತು, ಆಯುರಾರೋಗ್ಯ, ಸುಖಸಂಪತ್ತು ವೃದ್ಧಿಸಲಿ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ವರ್ಷಕಾಲದ ಮಾರನೆಯ ದಿನ ಹಾಗೆ ಹಾರೈಸುವುದನ್ನು 'ವರ್ಷದ ಹೆಚ್ಚು' ಎಂದು ಹೆಸರಿಸಲಾಗಿದೆ-ಯಲ್ಲದೆ ಅನ್ಯತ್ರ ಅಲ್ಲ. ಈ ಹಿಂದೆ ನಮ್ಮ ಹಳ್ಳಿಗಾಡುಗಳಲ್ಲಿ ದವಸಧಾನ್ಯಗಳನ್ನು ಅಳೆಯುವಾಗ ಮೊದಲನೆಯ ಅಳತೆಯನ್ನು 'ಒಂದು' ಎಂಬುದಕ್ಕೆ 'ಹೆಚ್ಚು', 'ಹೆಚ್ಚಳ' ಎಂದೂ 'ಮೂರು' ಎಂಬುದಕ್ಕೆ 'ಮತ್ತೊಂದು' ಎಂದು ಹೆಸರಿಸಿ ಅಳತೆ ಮಾಡುತ್ತಿದ್ದುದು ವಾಡಿಕೆಯಲ್ಲಿತ್ತು (ಇದು ಪ್ರಾದೇಶಿಕವಾಗಿ ಭಿನ್ನವಾಗಿಯೂ ಇತ್ತು). ಒಟ್ಟಾರೆ ಇವೆಲ್ಲ ಮನುಷ್ಯ ಬದುಕಿಗೆ ಒಳಿತನ್ನು ಬಯಸುವ ಭಾವಸಂಬಂಧಿಯಾದ ಪದಗಳು ಮತ್ತು ಆಚರಣೆಗಳಾಗುತ್ತವೆಯೇ ಹೊರತು ಬೇರೇನಲ್ಲ.

ಅದೇ 'ಹೆಚ್ಚುಕಟ್ಟಳೆ' ಎಂಬುದು ನಮ್ಮ ಜನರ ಬಾಯಲ್ಲಿ 'ತಿಥಿ'ಗೆ ಬದಲಾಗಿ ಬಳಕೆಯಾಗುತ್ತಿದ್ದ, ಇಂದಿಗೂ ಬಳಕೆಯಾಗುತ್ತಿರುವ ಪದವಾಗಿದೆ. ಇಲ್ಲಿ 'ಕಟ್ಟಳೆ'ಗಳು ಅಂದರೆ 'ನಿಯಮ'ಗಳು ಹೆಚ್ಚು ಎಂಬ ಅರ್ಥವಿದೆ. ಇಲ್ಲಿಯೂ 'ಹೆಚ್ಚಿನ' ಮನಃಸ್ಥಿತಿಯೇ ಕೆಲಸ ಮಾಡಿದರೂ ಪರಿಕಲ್ಪನೆ ಬೇರೆಯಾಗುತ್ತದೆ.

ಇಡಿಯಾಗಿ ಹೇಳುವುದಾದರೆ, ವರ್ಷದ ತೊಡಕೆಲ್ಲ ಈ ದಿನ (ವರ್ಷದ ತೊಡಕುವಿನ ದಿನ) ನಿವಾರಣೆಯಾಗಿ, ಜನಮನಕ್ಕೆ ಸುಖಸಮೃದ್ಧಿ ಬರಲಿ ಎಂಬುದು ಇದರ ಅಂತರಾರ್ಥವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ನೋಡಿದಾಗ ತೊಡಕು, ತಡಕು... ಈ ಎಲ್ಲ ಪದಗಳ ಮೂಲ ಅಡಗು = ಮಾಂಸ ಎಂದಾಗುವುದಿಲ್ಲ.

ವಾಚಕರ ವಾಣಿ

ನಿಘಂಟು ಬ್ರಹ್ಮನಿಗೆ ಭಾಷ್ಪಾಂಜಲಿ

ಕನ್ನಡ ಭಾಷೆಯ ಶಬ್ದಪ್ರಯೋಗದ ಸಂದರ್ಭದಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯದಲ್ಲಿ ಮೂಡಿಬಂದ ಬದಲಾವಣೆಗಳ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಪ್ರೊ. ಜಿ.ವೆಂಕಟಸುಬ್ಬಯ್ಯ ಅವರು ನೀಡಿದ ತಿಳಿವಳಿಕೆ ಅನನ್ಯ. ಸ್ವತಃ ಪ್ರಾಧ್ಯಾಪಕರಾಗಿದ್ದ ಅವರು ತಮ್ಮ ಇಳಿವಯಸ್ಸಿನಲ್ಲಿ 'ಪ್ರಜಾವಾಣಿ' ಪತ್ರಿಕೆಯ 'ಇಗೋ ಕನ್ನಡ' ಅಂಕಣದ ಮೂಲಕ ವಿವಿಧ ಶಬ್ದ, ನಾಣ್ನುಡಿಗಳ ಹುಟ್ಟು, ಪದಪ್ರಯೋಗಗಳನ್ನು ಜನರಿಗೆ ತಿಳಿಸಿಕೊಟ್ಟರು. ಕನ್ನಡ ಶಬ್ದ ಭಂಡಾರವನ್ನು ನಿಘಂಟು ರೂಪದಲ್ಲಿ ಸಂಗ್ರಹಿಸಿ 'ನಿಘಂಟು ಬ್ರಹ್ಮ' ಎಂದು ಕರೆಸಿಕೊಂಡರು. ಅಂಕಣ ಬರಹಗಾರ, ಭಾಷಾತಜ್ಞ ವೆಂಕಟಸುಬ್ಬಯ್ಯನವರು ವಿಧಿವಶರಾದುದು ಕನ್ನಡ ಓದುಗರಿಗೆ, ಕನ್ನಡ ಸಾಹಿತ್ಯಲೋಕಕ್ಕೆ ತುಂಬಲಾರದ ನಷ್ಟ ಉಂಟುಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ಚುನಾವಣಾ ಆಯೋಗ ಅಭಿನಂದಿಸಲಿ

ಬೀದರ್ ಜಿಲ್ಲೆಯ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆ ಸಂದರ್ಭದಲ್ಲಿ, ಕ್ಷೇತ್ರ ವ್ಯಾಪ್ತಿಯ ತ್ರಿಪುರಾಂತ ಎಂಬ ಹಳ್ಳಿಯಲ್ಲಿ ಮತದಾರರಿಗೆ ಹಣ ಹಂಚಲು ಮುಂದಾದ ವ್ಯಕ್ತಿಯೊಬ್ಬರನ್ನು ಗ್ರಾಮಸ್ಥರು ಹಿಡಿದು ಥಳಿಸಿರುವುದು ವರದಿಯಾಗಿದೆ (ಪ್ರ.ವಾ., ಏ. 17). ಗ್ರಾಮಸ್ಥರು ಕಾನೂನನ್ನು ಕೈಗೆ ತೆಗೆದುಕೊಂಡಿದ್ದು ತಪ್ಪಾದರೂ 'ರಾಜಕೀಯ ಪಕ್ಷಗಳೇ ಮತದಾರರನ್ನು ಭ್ರಷ್ಟರನ್ನಾಗಿ ಮಾಡುತ್ತಿವೆ. ನಮ್ಮಲ್ಲಿ ಹಣ ಇಲ್ಲವೇ' ಎಂದು ಅವರು ಆ ವ್ಯಕ್ತಿಯನ್ನು ತರಾಟೆಗೆ ತೆಗೆದುಕೊಂಡಿರುವುದನ್ನು ಪ್ರಜಾಪ್ರಭುತ್ವದ ಪ್ರೇಮಿಗಳು ಮೆಚ್ಚಲೇಬೇಕು. ಚುನಾವಣೆಯಲ್ಲಿ ಹಣ ಕೊಟ್ಟು ಮತ ಪಡೆಯುತ್ತೇವೆ ಎಂಬ ಹುಂಬ ರಾಜಕಾರಣಿಗಳಿಗೆ ಇಂದೊಂದು ತಕ್ಕ ಪಾಠ. ಜೊತೆಗೆ ಎಲ್ಲ ರಾಜಕೀಯ ಪಕ್ಷಗಳಿಗೂ ಇದೊಂದು ಸರಿಯಾದ ಪಾಠವಾಗಬೇಕು. ನೋಟಿನ ಮೂಲಕ ವೋಟು ಕೊಳ್ಳುವುದನ್ನು ವಿರೋಧಿಸಿದ ಈ ಗ್ರಾಮದ ಜನರನ್ನು ಚುನಾವಣಾ ಆಯೋಗ ಅಭಿನಂದಿಸಬೇಕು. ಇಂತಹ ಗ್ರಾಮಗಳ ಸಂಖ್ಯೆ ಹೆಚ್ಚಾದಾಗ ಮಾತ್ರ ಪ್ರಜಾಪ್ರಭುತ್ವ ಇನ್ನಷ್ಟು ಗಟ್ಟಿಯಾಗಲು ಸಾಧ್ಯ.

ಬೂಕನಕೆರೆ ವಿಜೇಂದ್ರ, ಮೈಸೂರು

ಮೈ ಲಾರ್ಡ್ ನನ್ನ ವಾದ...

ಚಲನಚಿತ್ರವೊಂದರಲ್ಲಿ 'ಮೈ ಲಾರ್ಡ್, ನನ್ನ ವಾದ ಕೇಳಿ, ಕೇಳಿ, ಕೇಳಿ...' ಎಂದು ಡಾ. ರಾಜ್‌ಕುಮಾರ್ ಅವರು ಹಾಡುವುದನ್ನು ಕೇಳಿದ್ದೇವೆ. ಇದರ ಜೊತೆಗೆ ಸಿನಿಮಾಗಳ ನ್ಯಾಯಾಲಯ ಕಲಾಪದ ಸನ್ನಿವೇಶಗಳಲ್ಲಿ ನ್ಯಾಯಮೂರ್ತಿಗಳನ್ನು ವಕೀಲರು 'ಮೈ ಲಾರ್ಡ್' ಎಂದು ಸಂಬೋಧಿಸುವುದನ್ನು ಕೇಳುತ್ತಿರುತ್ತೇವೆ. ಆದರೀಗ ನಮ್ಮ ಹೈಕೋರ್ಟ್ ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರು 'ನಮ್ಮನ್ನು ಲಾರ್ಡ್ ಎಂದು ಕರೆಯಬೇಡಿ, ಸರ್ ಎಂದು ಕರೆಯಿರಿ' ಎಂದು ವಕೀಲರಿಗೆ ಹೇಳಿದ್ದಾರೆ.

ಈ ಹಿಂದೆ ರಾಜಸ್ಥಾನ ಹಾಗೂ ಕೋಲ್ಕತ್ತ ಹೈಕೋರ್ಟ್‌ಗಳು, ನ್ಯಾಯಾಧೀಶರನ್ನು ಮೈ ಲಾರ್ಡ್ ಎಂದು ಸಂಬೋಧಿಸದಂತೆ ತಿಳಿಸಿದ್ದವು. ಅದರ ಮುಂದುವರಿದ ಭಾಗವಾಗಿ ಈಗ ನಮ್ಮ ಹೈಕೋರ್ಟ್ ನ್ಯಾಯಮೂರ್ತಿಗಳೂ ಇದನ್ನೇ ಹೇಳಿದ್ದಾರೆ. ನ್ಯಾಯಾಲಯಗಳ ಈ ಅಭಿಪ್ರಾಯವನ್ನು ನೋಡಿದಾಗ, ನಾಗರಿಕ ಸಮಾಜದಲ್ಲಿ ದೇವರ ಸಮಾನ ಯಾರೂ ಇಲ್ಲ ಎಂಬುದು ಮನದಟ್ಟಾಗುತ್ತದೆ. ಇದನ್ನು ನೋಡಿಯಾದರೂ ರಾಜಕೀಯ ಪಕ್ಷಗಳ ಕಾರ್ಯಕರ್ತರು ತಮ್ಮ ನಾಯಕರುಗಳನ್ನು ಇಂದ್ರ ಚಂದ್ರರಿಗೆ ಹೋಲಿಸುವುದನ್ನು ನಿಲ್ಲಿಸಲಿ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ರಕ್ಕಸ!

ಕಾಲವಶದಿಂದ ಖಾಲಿಯಾಗುತ್ತಿದೆಯೆ
ಸರ್ಕಾರದ ಬೊಕ್ಕಸ?!
ಭ್ರಷ್ಟರಿಗೆ ಸಂತಸ;
ಶಿಷ್ಟರಿಗೆ 'ಕರ್ಕಶ'!
ಒಟ್ಟಿನಮೇಲೆ ದೇಶದಾದ್ಯಂತ
ವ್ಯವಹಾರಜಾಲ ಕಲಾಪ
'ರಕ್ಕಸ!'

ಸಿ.ಪಿ.ಕೆ., ಮೈಸೂರು

ಬಗ್ಗಿರಿ ಎಂದರೆ ತೆವಳುವವರು!

'ಬಹುತ್ವಕ್ಕೆ ಮಾರಕವಾಗುತ್ತಿದೆ ಆಕಾಶವಾಣಿ' ಎಂಬ ಡಾ. ಬಸವರಾಜ ಸಾದರ ಅವರ ಲೇಖನದಲ್ಲಿ (ಪ್ರ.ವಾ., ಏ. 17) ಉತ್ಪ್ರೇಕ್ಷೆಯೇನೂ ಇಲ್ಲ. ಆಕಾಶವಾಣಿಯಲ್ಲಿ ಪ್ರಸಾರವಾಗುವ ವಾರ್ತೆಗಳು ಕೂಡ ಆಳುವ ಪಕ್ಷದ ತುತ್ತೂರಿ ಊದುವುದಕ್ಕಷ್ಟೇ ಸೀಮಿತವಾಗಿವೆ. ರಾಜ್ಯದ ವಾರ್ತೆಗಳಿಗೆ ಆದ್ಯತೆ ಇರಬೇಕಾದ 'ಪ್ರದೇಶ ಸಮಾಚಾರ'ದಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಮಯ ಬಿಜೆಪಿಯ ಕೇಂದ್ರ ನಾಯಕರ ಹೇಳಿಕೆಗಳಿಗೆ ಮೀಸಲಾಗುತ್ತಿದೆ. ಜನ ಹಿತಾಸಕ್ತಿಯ ಸುದ್ದಿಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

ರೇನ್‌ಬೊ ಚಾನೆಲ್ಲಿನಲ್ಲಿ ಎರಡು ನಿಮಿಷ ಪ್ರಸಾರವಾಗುವ ಸುದ್ದಿಸಾರದ್ದೂ ಇದೇ ಕಥೆ. ತಿಂಗಳ ಮೂರನೇ ವಾರ ಶುರುವಾಗುತ್ತಿದ್ದಂತೆ ಪ್ರತೀ ಗಂಟೆಯ ಸುದ್ದಿಯಲ್ಲೂ 'ಮನ್ ಕಿ ಬಾತ್'ನ ಪ್ರೋಮೊವನ್ನು ಹೇವರಿಕೆ ಹುಟ್ಟುವಷ್ಟು ಸಲ ಪ್ರಸಾರ ಮಾಡುತ್ತಾರೆ. ಆಳುವವರು 'ಬಗ್ಗಿರಿ' ಎಂದರೆ ತೆವಳುವ ಸ್ಥಿತಿಗೆ ಬಂದು ನಿಂತಿದೆ ಇಂದಿನ ಆಕಾಶವಾಣಿ.

ಶ್ರೀಧರ ಬಿ.ಎಲ್., ಬೆಂಗಳೂರು

ಸುಳ್ಳು ಸುದ್ದಿಯಿಂದ ಮಾರ್ಗಸೂಚಿ ಉಲ್ಲಂಘನೆ

ದೇಶದೆಲ್ಲೆಡೆ ಕೊರೊನಾ ಸೋಂಕು ದಿನದಿನವೂ ಸಾವಿರಾರು ಜನರನ್ನು ಇನ್ನಿಲ್ಲದಂತೆ ಕಾಡುತ್ತಾ ಕೇಕೆ ಹಾಕು-ತ್ತಿರುವಾಗಲೇ ಫೇಸ್‌ಬುಕ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ 'ಕೊರೊನಾ ರೋಗವೇ ಇಲ್ಲ. ಇದೆಲ್ಲ ಬರೀ ಹಸಿ ಸುಳ್ಳು' ಎಂಬಂತೆ ಕೆಲವರು ಬಿಂಬಿಸುತ್ತಿದ್ದಾರೆ. ಇಂತಹ ಸುಳ್ಳು ಸುದ್ದಿ ಹರಡುವವರಿಗೆ ನನ್ನ ಪ್ರಶ್ನೆ ಏನೆಂದರೆ, ನೀವು ಯಾವತ್ತಾದರೂ ಒಂದು ಬಾರಿಯಾದರೂ ಕೊರೊನಾ ರೋಗಿಗಳನ್ನು ಭೇಟಿ ಆಗಿದ್ದೀರಾ? ಅಥವಾ ಕೊರೊನಾದಿಂದ ಮೃತಪಟ್ಟವರ ಕುಟುಂಬದ ಸದಸ್ಯರನ್ನು ಕಂಡು, ಅವರ ಯಾತನೆ, ತೊಂದರೆ ಹಾಗೂ ದುಃಖವನ್ನು ವಿಚಾರಿಸಿದ್ದೀರಾ? ನಿಮ್ಮಂತಹವರ ಸುಳ್ಳು ಪ್ರಚಾರ, ವದಂತಿಗಳನ್ನು ನಂಬಿ ಅನೇಕರು ಕೋವಿಡ್ ಮಾರ್ಗಸೂಚಿಗಳನ್ನು ಗಾಳಿಗೆ ತೂರುತ್ತಾ ಬೇಕಾಬಿಟ್ಟಿ ತಿರುಗಾಡುತ್ತಿದ್ದಾರೆ. ಕೋವಿಡ್ ರೋಗದಿಂದ ಇಡೀ ವಿಶ್ವವೇ ಸಂಕಷ್ಟದಲ್ಲಿ ಸಿಲುಕಿದೆ. ಇದು ನಿಮ್ಮ ಅರಿವಿಗೆ ಬಂದಿಲ್ಲವೇ? ಸರ್ಕಾರವು ಇಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಉಮೇಶ ಸಂ. ಹಿರೇಮಠ, ಬೈಲಹೊಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡವನ್ನು ನೆತ್ತಿಯ ಮೇಲಿಟ್ಟು ಮೆರೆಸಿದ 'ಜೀವಿ'

• ಎಚ್‌.ಎಸ್‌. ವೆಂಕಟೇಶಮೂರ್ತಿ



ಜಿ.ವಿ. ಎಂಬ ಸಂಕ್ಷಿಪ್ತನಾಮದಿಂದ ಲೋಕಪ್ರಿಯರಾದ ಗಂಜಾಮ್ ವೆಂಕಟಸುಬ್ಬಯ್ಯನವರು (23.8.1913-19.4.2021) ಈಗ ನಮ್ಮೊಂದಿಗೆ ಭೌತಿಕವಾಗಿ ಇಲ್ಲ ಎನ್ನುವುದು ನಮ್ಮಂಥ ಅವರ ಅಭಿಮಾನಿಗಳಿಗೆ ನುಂಗಲಾಗದ ತುತ್ತು. ಪಾಂಡಿತ್ಯ ಮತ್ತು ರಸಿಕತೆಯ ಸಂಗಮವಾಗಿದ್ದ ಶ್ರೀಯುತರು, ದಾರಿ ಮುಗಿಯಿತು ಎನ್ನಿಸಿದಾಗಲೆಲ್ಲ, ಕೈ ಮರದಂತೆ ನಮಗೆ ಭಾಷೆ ಮತ್ತು ಸಾಹಿತ್ಯದ ವಿಷಯದಲ್ಲಿ ದಿಕ್ಕು ತೆರೆಯುತ್ತಿದ್ದವರು. 108 ವರ್ಷಗಳ ತುಂಬು ಜೀವನ ನಡೆಸಿ ಈಗ ಇಹಲೋಕಕ್ಕೆ ವಿದಾಯ ಹೇಳಿ ಕಂಡರಿಯದ ಹೊಸ ಲೋಕದ ಅನ್ವೇಷಣೆಗೆ ಹೊರಟಿದ್ದಾರೆ.

ಶತಪುರುಷರಾದ ಜಿ.ವಿ. ಕೊನೆಯವರೆಗೂ ತಮ್ಮ ಮನಸ್ಸು, ಬುದ್ಧಿ, ನೋಟಗಳನ್ನು ನಿಚ್ಚಳವಾಗಿ ಇಟ್ಟುಕೊಂಡವರು. ಜೀವನೋತ್ಸಾಹವನ್ನು ಕಿಂಚಿತ್ತೂ ಕಳೆದುಕೊಳ್ಳದವರು. ಅವರನ್ನು ನೋಡಲು ಹೋದಾಗಲೆಲ್ಲಾ ಅವರ ಮೇಜಿನ ಮೇಲೆ ಕನ್ನಡದ ಅನೇಕ ಹೊಸ ಕೃತಿಗಳು ಕಾಣುತ್ತಾ ಇದ್ದವು. ಪ್ರತಿದಿನವೂ ಒಂದಲ್ಲ ಒಂದು ಹೊಸ ಪುಸ್ತಕದ ಮೇಲೆ ಕಣ್ಣಾಡಿಸದೆ ಅವರು ವಿಶ್ರಾಂತಿ ತೆಗೆದುಕೊಳ್ಳುವವರಲ್ಲ.

ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಅಪಾರ ವಿದ್ವತ್ತು ಗಳಿಸಿದ್ದ ಜಿ.ವಿ. ತೆಲುಗು ಮೊದಲಾದ ಭಾಷೆಗಳಲ್ಲೂ ಪ್ರವೇಶವುಳ್ಳವರಾಗಿದ್ದರು. ಹೆಚ್ಚು ಕಮ್ಮಿ ಅವರು ತಮ್ಮ ಜೀವಿತದ ನೂರು ವರ್ಷಗಳನ್ನೇ ಸಾಹಿತ್ಯಾಧ್ಯಯನ ಮತ್ತು ಗ್ರಂಥರಚನೆಗೆ ವಿನಿಯೋಗಿಸಿದ್ದಾರೆ. ಶಬ್ದ ಜೀವಿಯಾದ ಜೀವಿಯವರು ಶಬ್ದಕೋಶಗಳ ರಚನೆಗೆ ದಶಕಗಳನ್ನೇ ವಿನಿಯೋಗಿಸಿದ್ದಾರೆ. ಗ್ರಂಥ ಸಂಪಾದನೆ, ಸಂಶೋಧನೆ, ವಿಮರ್ಶೆ ಮತ್ತು ನಿರಂತರ ಓದು ಜಿ.ವಿ. ಅವರ ಪ್ರಧಾನ ಆಸಕ್ತಿಗಳು. ಮಕ್ಕಳ ಸಾಹಿತ್ಯ ರಚನೆಯಲ್ಲೂ ಶ್ರೀಯುತರು ಕೆಲಸ ಮಾಡಿದ್ದಾರೆ.

ತಮ್ಮ ಗುರುಗಳಾದ ಎ.ಆರ್‌. ಕೃಷ್ಣಶಾಸ್ತ್ರಿಗಳ ಸೂಚನೆಯಂತೆ ಶಬ್ದಕೋಶ ರಚನೆಯಲ್ಲಿ ಆಸಕ್ತಿ ವಹಿಸಿದ್ದ ಜಿ.ವಿ. ತಮ್ಮ ನಿವೃತ್ತಿಯ ನಂತರ ದಶಕಗಳ ಕಾಲ ತಮ್ಮ ಸಂಗಡಿಗರೊಂದಿಗೆ ಶ್ರಮಿಸಿ ನಾವೆಲ್ಲ ಹೆಮ್ಮೆಪಡಬಹುದಾದ ಎಂಟು ಸಂಪುಟಗಳ, ಒಟ್ಟು 10,000ಕ್ಕೂ ಹೆಚ್ಚು ಪುಟಗಳ, ಕನ್ನಡ ಶಬ್ದಕೋಶ ರಚನೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಮುಗಿಸಿಕೊಟ್ಟದ್ದನ್ನು ಕನ್ನಡಿಗರು ಮರೆಯುವಂತೆಯೇ ಇಲ್ಲ. ಈ ಪ್ರಕಟಣೆ, ಜಿ.ವಿ. ಹೆಸರನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಮರಗೊಳಿಸುವ ಆಚಾರ್ಯ ಕೃತಿ. ಹೀಗಾಗಿಯೇ ರೆ.ಫಾ. ಕಿಟ್ಟೆಲ್ ನಂತರ ಪ್ರೊ.ಮರಿಯಪ್ಪ ಭಟ್ಟರು, ಜಿ.ವಿ. ಅಂತಹವರ ಹೆಸರು ನಮಗೆ ಮುಖ್ಯವಾಗುವುದು.

ಪಾಂಡಿತ್ಯದ ಪ್ರವಾಹವನ್ನು ಲೋಕೋಪಯೋಗಿಯಾಗುವಂತೆ ಕಿರುಗಾಲುವೆಗಳ ಮೂಲಕ ಜನಸಾಮಾನ್ಯರ ನಿತ್ಯ ಕೃಷಿಗೆ ಹಾಯಿಸಿದ್ದು ಜಿ.ವಿ. ಅವರ ಮಹತ್ವ. 'ಇಗೋ ಕನ್ನಡ' ಎಂಬ, ಅವರು 'ಪ್ರಜಾವಾಣಿ' ಪತ್ರಿಕೆಗೆ ಬರೆದ ಕಾಲಂಗಳು ಈಗ ಮೂರು ಬೃಹತ್ ಸಂಪುಟವಾಗಿ ಪ್ರಕಟಗೊಂಡಿವೆ. 'ಇಗೋ ಕನ್ನಡ' ಕಾಲಂ ಪ್ರಕಟವಾಗುತ್ತಿದ್ದ ಕಾಲದಲ್ಲಿ ಅದರ ಜನಪ್ರಿಯತೆ ಬೆರಗುಹುಟ್ಟಿಸುವಂತಿತ್ತು. ನಾವು ನಿತ್ಯವೂ ಬಳಸುವ ನಮ್ಮ ತಾಯ್ನುಡಿಯ ಬಗ್ಗೆ ನಮ್ಮ ಅರಿವು ಹಿಗ್ಗುವಂತೆ ತಿಳಿಯಾಗಿ ಜಿ.ವಿ. ಆ ಕಾಲಮ್ಮಿನಲ್ಲಿ ಬರೆಯುತ್ತಿದ್ದರು. ನಮ್ಮ ಮಾತೃಭಾಷೆಯ ಬಗ್ಗೆ ನಮ್ಮ ಆಸಕ್ತಿ ಕುದುರಿಸುವ ಕೆಲಸವನ್ನು 'ಇಗೋ ಕನ್ನಡ' ಕಾಲಂ ಅದ್ಭುತವಾಗಿ ಮಾಡಿತು. ಗ್ರಂಥರೂಪದಲ್ಲಿ ಈಗಲೂ ಮಾಡುತ್ತಿದೆ.

ನಾನು 2000ರಲ್ಲಿ ನಿವೃತ್ತನಾದ ಮೇಲೆ ಜಿ.ವಿ. ಅವರೊಂದಿಗೆ ನನ್ನ ಒಡನಾಟವೂ ಹೆಚ್ಚಾಯಿತು. ಆಗಲೇ ಜಿ.ವಿ. ಅವರ ಕಾವ್ಯ ಪ್ರೀತಿ, ಸಾಹಿತ್ಯ ರಸಿಕತೆ ನನಗೆ ಮನದಟ್ಟಾದದ್ದು. ಜಿ.ವಿ. ಅವರ ಮನೆಯಲ್ಲಿ ಅವರ ಅಭ್ಯಾಸದ ಕೋಣೆಯಲ್ಲಿ ಕಾಲಿಡಲು ತೆರಪಿಲ್ಲವೆನ್ನುವಷ್ಟು ಕೃತಿಗಳು. ಬರೆಯುವುದು ಮತ್ತು ಓದುವುದು ಜಿ.ವಿ.ಗೆ ಉಸಿರಾಟದಷ್ಟು ಸಹಜ ಮತ್ತು ಅನಿವಾರ್ಯ. ಸಾವಿರಾರು ಪುಟಗಳ ಸಾಹಿತ್ಯ ರಚನೆ ಅವರಿಗೆ ಸಾಧ್ಯವಾದದ್ದು ಅವರ ಈ ಬಗೆಯ ಶಿಸ್ತಿನಿಂದ.

ಬೆಳಿಗ್ಗೆ ನಾಲ್ಕಕ್ಕೆ ಅವರ ದಿನಚರಿ ಪ್ರಾರಂಭ. ವ್ಯಾಸಂಗ, ಬರವಣಿಗೆ, ವಾಕಿಂಗು, ಐದಾರು ಪತ್ರಿಕೆಗಳ ಓದು, ಲಘು ಉಪಹಾರ, ಅಭಿಮಾನಿಗಳೊಂದಿಗೆ ಮಾತುಕತೆ, ಮನೆಯವರೊಂದಿಗೆ ವಿನೋದ, ಮಧ್ಯಾಹ್ನ ವಿಶ್ರಾಂತಿ, ಸಂಜೆ ಮತ್ತೆ ಅಭಿಮಾನಿಗಳೊಂದಿಗೆ ಮಾತುಕತೆ, ವಿದ್ವಾಂಸರೊಂದಿಗೆ ವಿಚಾರ ವಿನಿಮಯ... ಇದು ಯಾವತ್ತೂ ತಪ್ಪದ ದಿನಚರಿ. ಅವರದ್ದು ಸರಳ ಸುಂದರ ಬದುಕಿನ ಕ್ರಮ. ಬೆಳ್ಳನೆಯ ಅರೆತೋಳಂಗಿ, ಮುಂಡು ಪಂಚೆ. ನಡೆ ನುಡಿ ಎಲ್ಲದರಲ್ಲೂ ಶುಚಿ ರುಚಿ. ಓದುವಾಗ ಕನ್ನಡಕದ ಅಗತ್ಯವಿಲ್ಲ. ಉಚ್ಚರಣೆ ಸ್ಪಷ್ಟ, ಶುದ್ಧ, ಅಸ್ಖಲಿತ. ಅವರದ್ದು ಸ್ವಲ್ಪ ಮೆಲುದನಿಯೇ ಅದರೆ ಅದರ ಖಾಚಿತ್ಯ ಅಸಾಮಾನ್ಯ.

ಜಿ.ವಿ. ಅವರನ್ನು ನೋಡುವ ಮುನ್ನ ನಾನು ಅವರ ಮಗ ಜಿ.ವಿ.ಅರುಣ ಅವರನ್ನು ಸಂಪರ್ಕಿಸುತ್ತಿದ್ದೆ. ಅವರು ಜಿ.ವಿ. ಅವರೊಂದಿಗೆ ಮಾತಾಡಿ, ನಾಲಕ್ಕು ಗಂಟೆಗೆ ಬನ್ನಿ ಎಂದರೆ ಅದು ನಾಲಕ್ಕು ಗಂಟೆಯೇ. ಯಥಾಪ್ರಕಾರ ಜಿ.ವಿ. ತಮ್ಮ ಸರಳ ಶ್ವೇತ ಉಡುಪಿನಲ್ಲಿ ಸಿದ್ಧರಾಗಿ ಸೋಫಾದಲ್ಲಿ ಕಾಲ್ಚಾಚಿ ಕೂತಿರುವರು. ಓಹೋ! ಎಚ್ಚೆಸ್ವಿ, ಬನ್ನಿ ಬನ್ನಿ -ಎಂದು ಸ್ವಾಗತಿಸುವರು.

ಮತ್ತೇನು ಬರೆದಿರಿ ಎನ್ನುವುದು ಅವರ ಮೊದಲ ಪ್ರಶ್ನೆ. ನಾನು ಹಸ್ತಪ್ರತಿ ಕೊಟ್ಟು, ಎಲ್ಲಾ ಓದಿ ಕಣ್ಣಿಗೆ ಆಯಾಸ ಮಾಡಿಕೊಳ್ಳಬೇಡಿ... ಸುಮ್ಮನೆ ಕಣ್ಣು ಹಾಯಿಸಿ, ಸಾಕು. ಶ್ರೀರಾಮಚರಣ ಎನ್ನುವ ಸಂಗ್ರಹ ರಾಮಾಯಣದ ಈ ಅನುವಾದವನ್ನು ನಾನು ನಿಮಗೇ ಅರ್ಪಿಸುತ್ತಿರುವೆನು ಎಂದರೆ ಜಿ.ವಿ. ಕಣ್ಣರಳಿಸುವರು. ನೀವು ಮುನ್ನುಡಿಯೋ ಬ್ಲರ್ಬೋ ಕೇಳುವಿರಿ ಅಂದುಕೊಂಡಿದ್ದೆ! ನನಗೇ ಪುಸ್ತಕ ಅರ್ಪಿಸುತ್ತಿರುವಿರಲ್ಲ! ತುಂಬ ಸಂತೋಷ -ಎಂದು ಜಿ.ವಿ. ಮೃದುವಾಗಿ ನಗುವರು. ಎರಡು ದಿನದ ನಂತರ ಮುಂಜಾನೆಯೇ ಅರುಣ ಅವರ ಫೋನ್. ಎಚ್ಚೆಸ್ವೀ.... ತಂದೆ ನಿಮಗೆ ಮಾತಾಡುವರು. ಈಗ ಜಿ.ವಿ. ಧ್ವನಿ ಸ್ಪಷ್ಟವಾಗಿ ಫೋನಿನಲ್ಲಿ. ತಾವು ಪೂರ್ಣವಾಗಿ ರಾಮಚರಣ ಓದಿದ್ದನ್ನು, ಸಂತೋಷಪಟ್ಟಿದ್ದನ್ನು ಕೆಲವೇ ಮಾತಲ್ಲಿ, ಅಭಿಮಾನ ತುಂಬಿದ ದನಿಯಲ್ಲಿ ಜಿ.ವಿ. ವಿವರಿಸುವರು. ಇದು 107ರಲ್ಲೂ ಅವರು ಬದುಕಿದ ಜೀವನಕ್ರಮ.

ತಮ್ಮ ತಂದೆ-ತಾಯಿಯಂತೆ ಜಿ.ವಿ. ಕೂಡ ದೀರ್ಘಾಯುಗಳು. ತಮ್ಮ ನಿಡಿದಾದ ಬದುಕನ್ನು ಸಾರ್ಥಕವಾಗಿ ಭಾಷೆ-ಸಾಹಿತ್ಯದ ಏಳಿಗೆಗೆ ಧಾರೆ ಎರೆದವರು! ವಿದ್ಯಾರ್ಥಿಗಳು, ಅಧ್ಯಾಪಕರು, ವಿದ್ವಾಂಸರು, ಭಾಷಾಭಿಮಾನಿಗಳು... ಜಿ.ವಿ.ಗೆ ಮಾತಾಡಿ ತಮ್ಮ ಸಂದೇಹ ಕಳೆದುಕೊಳ್ಳುವರು! ಆ ಗುಂಪಿನಲ್ಲಿ ನಾನೂ ಒಬ್ಬ! ಆದರೆ ಜಿ.ವಿ. ಅನ್ನುತ್ತಾರೆ: ಇದೆಲ್ಲಾ ನನ್ನ ಗುರುಗಳ ಮಾರ್ಗದರ್ಶನದ ಫಲ. ನನಗೆ ಭಾಷಾವಿಜ್ಞಾನದಲ್ಲಿ ಇಷ್ಟು ಆಳವಾದ ಆಸಕ್ತಿ ಮೂಡಿಸಿದವರು ನನ್ನ ಗುರುಗಳಾದ ಟಿ.ಎಸ್‌.ವೆಂಕಣ್ಣಯ್ಯ, ತೀ.ನಂ.ಶ್ರೀ, ಡಿ.ಎಲ್‌.ನರಸಿಂಹಾಚಾರ್, ಎ.ಆರ್‌.ಕೃಷ್ಣಶಾಸ್ತ್ರಿ, ರಾ.ಅನಂತ ಕೃಷ್ಣಶರ್ಮ ಮುಂತಾದವರು.

ಕನ್ನಡ ಭಾಷೆಗೆ ಅಳಿವಿಲ್ಲ ಎಂದು ವಿಶ್ವಾಸ ತುಂಬಿದ ಕಂಠದಲ್ಲಿ ಜಿ.ವಿ. ಅದೆಷ್ಟು ಸಾರಿ ಘೋಷಿಸಿದ್ದಾರೋ! ಜಗತ್ತಿನಲ್ಲಿ ಬಹುಸಂಖ್ಯೆಯಲ್ಲಿ ಜನರು ಮಾತಾಡುವ 26 ಭಾಷೆಗಳಲ್ಲಿ ಕನ್ನಡವೂ ಒಂದು ಎನ್ನುವಾಗ ಅಭಿಮಾನದಿಂದ ಜಿ.ವಿ. ಕಣ್ಣುಗಳು ಥಳಗುಟ್ಟುತ್ತಿದ್ದವು. ಆ ಥಳಗುಡುವ ಕಣ್ಣುಗಳನ್ನು ನಾನು ಯಾವತ್ತೂ ಮರೆಯಲಾರೆ.

(ಲೇಖಕ: ಹಿರಿಯ ಕವಿ)

ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಸಂದರ್ಭದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಂದ ವೆಂಕಟಸುಬ್ಬಯ್ಯ ಅವರಿಗೆ ಸನ್ಮಾನ –ಚಿತ್ರಗಳು ಪ್ರಜಾವಾಣಿ ಸಂಗ್ರಹದಿಂದ

ನೂರು ವರ್ಷ ಪೂರೈಸಿದ ದಿನದಂದು ಬೆಳಿಗ್ಗೆ ತಮ್ಮ ನೆಚ್ಚಿನ 'ಪ್ರಜಾವಾಣಿ'ಯೊಂದಿಗೆ

1991ರಲ್ಲಿ ಮುಖ್ಯಮಂತ್ರಿ ಎಸ್‌. ಬಂಗಾರಪ್ಪ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ನಿಘಂಟು ಕ್ಷೇತ್ರದಲ್ಲಿ 'ಜಿ.ವಿ. ಮಾರ್ಗ'

• ಡಾ. ಎಸ್‌.ಎಸ್‌. ಅಂಗಡಿ

ನಿಘಂಟು ಕ್ಷೇತ್ರದಲ್ಲಿ ಕನ್ನಡದಲ್ಲಿ ನಡೆದಿರುವ ಕಾರ್ಯಗಳಲ್ಲೆಲ್ಲ ಜಿ. ವೆಂಕಟಸುಬ್ಬಯ್ಯ ಅವರ ಕಾರ್ಯ ನಿಶ್ಚಯವಾಗಿಯೂ ಮಹತ್ತರವಾದುದು. ಸಮಕಾಲೀನ ಕನ್ನಡ ವಿದ್ವತ್ ಲೋಕದಲ್ಲಿ ಕನ್ನಡ ನಿಘಂಟು ಹಾಗೂ ಜಿ. ವೆಂಕಟಸುಬ್ಬಯ್ಯ ಅವರ ಹೆಸರು ಒಂದಕ್ಕೊಂದು ಹಾಸುಹೊಕ್ಕಾಗಿರುವುದು ವಿಶಿಷ್ಟ ಸಂಗತಿಯೇ ಆಗಿಬಿಟ್ಟಿದೆ. ಅವರ ಎರಡು ಕೃತಿಗಳು ನಿಘಂಟು ಶಾಸ್ತ್ರದ ತಾತ್ವಿಕತೆಗಳನ್ನೊಳಗೊಂಡಿವೆ. ಏಳು ನಿಘಂಟುಗಳನ್ನು ಸ್ವತಃ ರಚಿಸಿದ್ದಾರೆ.

ವೆಂಕಟಸುಬ್ಬಯ್ಯನವರ ನಿಘಂಟು ಶಾಸ್ತ್ರಕ್ಕೆ ಸಂಬಂಧಿಸಿದ 'ಕನ್ನಡ ನಿಘಂಟು ಪರಿಚಯ' ಕೃತಿ ರಚನೆಗಿಂತ ಮುಂಚೆ ಒಂದೆರಡು ಬಿಡಿ ಲೇಖನಗಳನ್ನು ಬಿಟ್ಟರೆ ಆ ಶಾಸ್ತ್ರಕ್ಕೆ ಸಂಬಂಧಿಸಿದ ಬರಹಗಳೇ ಕನ್ನಡದಲ್ಲಿ ಇರಲಿಲ್ಲವೆಂದರೆ ಆಶ್ಚರ್ಯಪಡಬೇಕಾಗಿಲ್ಲ. 1993ರಲ್ಲಿ ಪ್ರಕಟವಾದ ಅವರ ಈ ಕೃತಿಯು ಆ ಅವಧಿಯ ನಿಘಂಟು ವಿದ್ಯಾರ್ಥಿಗಳೆಲ್ಲರಿಗೂ ಏಕೈಕ ಪಠ್ಯವಾಯಿತು.

ನಿಘಂಟುಗಳು ಹಾಗೂ ನಿಘಂಟುಗಳ ತಾತ್ವಿಕ ನೆಲೆಗೆ ಸಂಬಂಧಿಸಿದ 19 ಲೇಖನಗಳು 'ಕನ್ನಡ ನಿಘಂಟು ಪರಿವಾರ' ಎಂಬ ಸಂಕಲನದಲ್ಲಿವೆ. ಜಿ. ವೆಂಕಟಸುಬ್ಬಯ್ಯ ಅವರು 'ಪ್ರಜಾವಾಣಿ' ದಿನಪತ್ರಿಕೆಯ 'ಇಗೋ ಕನ್ನಡ' ಎಂಬ ಅಂಕಣದಲ್ಲಿ ಶಬ್ದ ಪ್ರಯೋಗಗಳ ಬಗ್ಗೆ ಚರ್ಚಿಸಿದ್ದಾರೆ. ಇಗೋ ಕನ್ನಡದ ಶಬ್ದಾರ್ಥ ನಮೂದುಗಳನ್ನು ಮೂರು ನೆಲೆಗಳಲ್ಲಿ ವಿಂಗಡಿಸಬಹುದು. ಆಸಕ್ತ ವಿದ್ವಾಂಸರಿಗೆ ತಲೆದೋರುವ ಪ್ರಶ್ನೆಗಳು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ತೋರಿದ ಸಂಶಯಗಳು ಹಾಗೂ ಸಾಮಾನ್ಯ ಓದುಗರು ಎದುರಿಸುವ ಪ್ರಶ್ನೆಗಳು. ಕೇಳುಗರ ಪ್ರಶ್ನೆಗಳನ್ನು ಜಿ. ವೆಂಕಟಸುಬ್ಬಯ್ಯ ಅವರು ಗಂಭೀರವಾಗಿ ತೆಗೆದುಕೊಂಡು ಸಮರ್ಪಕವಾಗಿ ಮತ್ತು ಖಚಿತವಾಗಿ ಉತ್ತರಿಸಿದ್ದಾರೆ.

ಜಿ. ವೆಂಕಟಸುಬ್ಬಯ್ಯ ಅವರು ಮುದ್ದಣನ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು 'ಮುದ್ದಣ ಪದ ಪ್ರಯೋಗ ಕೋಶ'ವನ್ನು ಸಿದ್ಧಪಡಿಸಿದ್ದಾರೆ. ಮುದ್ದಣನು ಹೊಸ ಶಬ್ದಗಳನ್ನು ನಿರ್ಮಿಸುವಲ್ಲಿ ಬಹಳ ನಿಪುಣ. ಉದಾ; ಸಹಸ್ರಾಕ್ಷ ಎಂಬುದಕ್ಕೆ ಗಾಳಿದೇರ್ ಎಂದು ಬಳಸಿ ಹೊಸ ಪದವನ್ನು ಟಂಕಿಸಿದ್ದಾನೆ. ಅವರು 1998ರಲ್ಲಿ 'ಎರವಲು ಪದಕೋಶ'ವನ್ನು ರಚಿಸಿದರು. ಸಾಮಾನ್ಯ ಓದುಗರ ವಿಶೇಷವಾಗಿ ಉಪಾಧ್ಯಾಯರ, ವಿದ್ಯಾರ್ಥಿಗಳ ದಿನನಿತ್ಯದ ಉಪಯೋಗಕ್ಕಾಗಿ ಜಿ. ವೆಂಕಟಸುಬ್ಬಯ್ಯ ಅವರು 'ಕನ್ನಡ–ಕನ್ನಡ ಸಂಕ್ಷಿಪ್ತ ನಿಘಂಟು' ಸಿದ್ಧಪಡಿಸಿದರು.

ವೆಂಕಟಸುಬ್ಬಯ್ಯನವರು ಕನ್ನಡ ನಿಘಂಟು ಕ್ಷೇತ್ರಕ್ಕೆ ಗುರುತರವಾದ ಕಾಣಿಕೆಯನ್ನು ಕೊಟ್ಟಿದ್ದಾರೆ. ಚಲನಶೀಲವಾದ ಭಾಷೆಯ ಜೊತೆಗೆ ಲೇಖಕನಾದವನು ಬೆಳೆಯುತ್ತಾನೆ ಎಂಬುದಕ್ಕೆ ಅವರು ರಚಿಸಿದ ಕೋಶಗಳು ಉತ್ತಮ ನಿದರ್ಶನಗಳಾಗಿವೆ. ತನ್ಮೂಲಕ ಕನ್ನಡ ನಿಘಂಟು ಕ್ಷೇತ್ರದಲ್ಲಿ 'ಜಿ.ವಿ. ಮಾರ್ಗ' ನಿರ್ಮಾಣವಾಗಿದೆ.

(ಲೇಖಕ: ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ)

ನಿಘಂಟು ತಜ್ಞ ವೆಂಕಟಸುಬ್ಬಯ್ಯ ನಿಧನ

ಒಂದನೇ ಪುಟದಿಂದ

ಅವರ 70 ಪುಸ್ತಕಗಳು ಹಾಗೂ 14 ನಿಘಂಟುಗಳು ಪ್ರಕಟಗೊಂಡಿವೆ. 'ನಿಘಂಟು ಪರಿವಾರ', 'ಅಕ್ರೂರ ಚರಿತ್ರೆ' (ಸಂಪಾದನೆ), 'ಇಗೋ ಕನ್ನಡ' (ಸಾಮಾಜಿಕ ನಿಘಂಟು), 'ಗತಿ ಪ್ರಜ್ಞೆ', 'ಕನ್ನಡವನ್ನು ಉಳಿಸಿ ಬೆಳೆಸಿದವರು', 'ಅನುಕಲ್ಪನೆ', 'ಕರ್ಣ ಕರ್ಣಾಮೃತ', 'ಪತ್ರಿಕಾ ಪದಕೋಶ' ಮುಂತಾದವು ಇವರ ಪ್ರಮುಖ ಕೃತಿಗಳು.

ಅವರಿಗೆ ವಿದ್ಯಾಲಂಕಾರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಶಂಬಾ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಕಾಯಕ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಹಂಪಿ ವಿಶ್ವವಿದ್ಯಾನಿಲಯದ ನಾಡೋಜ, ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಬೆಂಗಳೂರಿನಲ್ಲಿ ನಡೆದ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಇವರು ಪಾತ್ರರಾಗಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೇಶದಾದ್ಯಂತ ಕೋವಿಡ್‌–19 ಸೋಂಕು ವೇಗವಾಗಿ ಪಸರಿಸುತ್ತಿದ್ದು, ಇದನ್ನು ನಿಯಂತ್ರಿಸುವುದು ಸರ್ಕಾರಕ್ಕೆ ಕಷ್ಟವಾಗುತ್ತಿದೆ. ಆ ಕಾರಣಕ್ಕೆ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕಠಿಣ ಕ್ರಮ ಕೈಗೊಳ್ಳಲು ಮುಂದಾಗುತ್ತಿದೆ. ದೇಶದಾದ್ಯಂತ ಪುನಃ ಲಾಕ್‌ಡೌನ್ ಘೋಷಿಸಲು ಕೇಂದ್ರ ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ' ಎಂಬ ವರದಿಯೊಂದನ್ನು ಹಿಂದಿ ಪತ್ರಿಕೆಯೊಂದು ಪ್ರಕಟಿಸಿದೆ.

COVID-19: Modi government to declare national lockdown all across the country?

By Lokmat English Desk | Published: April 18, 2021 11:51 AM

In an unprecedented measure, the Narendra Modi led government is likely to announce a nationwide lockdown all across the ...

FAKE

ಆದರೆ, ದೇಶದಲ್ಲಿ ಪುನಃ ಲಾಕ್‌ಡೌನ್ ಜಾರಿ ಮಾಡುವ ವಿಚಾರವಾಗಿ ಸರ್ಕಾರವು ಯಾವುದೇ ತೀರ್ಮಾನವಾಗಲಿ, ಚಿಂತನೆಯನ್ನಾಗಲಿ ಮಾಡಿಲ್ಲ. ಈ ಸುದ್ದಿಯು ಆಧಾರ ರಹಿತವಾದದ್ದು ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಸ್ಪಷ್ಟಪಡಿಸಿದೆ.

ಗುಂಡಣ್ಣ

© 2021 by King Features Syndicate, Inc. World Rights reserved

ದಿನ ಭವಿಷ್ಯ

ಮಂಗಳವಾರ 20 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ಅಷ್ಟಮೀ ಗಂ. 31-32 (ಸಾ. 6-49) ಮಂಗಳವಾರ ನಿತ್ಯ ನಕ್ಷತ್ರ ಪುಷ್ಯ ಗಂ. 51-24 (ರಾ. 2-46) ವೈಧೃತಿ ನಾಮ ಯೋಗ ಗಂ 22-14 ಭದ್ರೆ ಕರಣ ಗಂ. 1-9 ವಿಷ ಗಂ. 9-41 ಅಮೃತ ಗಂ. 34-25: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-09 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 7

ಮೇಷ: ಸಾಲಕೊಟ್ಟವರಿಂದ ಮರುಪಾವತಿಗಾಗಿ ತಗಾದೆ. ದ್ವೇಷಕ್ಕೆ ಮುಂದಾಗದೇ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿ. ಸಂಗಾತಿಯೊಂದಿಗೆ ಸಮಾಲೋಚಿಸಿ ಉತ್ತಮ ನಿರ್ಣಯ ಕೈಗೊಳ್ಳಿ.

ವೃಷಭ: ಕೆಲವರೊಂದಿಗೆ ಅತಿಯಾದ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರಿಕೆ ಅಗತ್ಯ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಯಶಸ್ಸು.

ಮಿಥುನ: ಗೆಳೆಯರೊಂದಿಗೆ ಸಮಾಲೋಚನೆ. ಕೆಲಸಕಾರ್ಯಗಳಲ್ಲಿ ನಿಮ್ಮ ಸ್ವಭಾವದಿಂದಾಗಿ ಹಿನ್ನಡೆ. ದೃಢ ನಿರ್ಧಾರದಿಂದ ವ್ಯವಹರಿಸಿ. ಹಿರಿಯರ ಬೆಂಬಲದಿಂದಾಗಿ ಯಶಸ್ಸು.

ಕರ್ಕಾಟಕ: ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರ ವಿಷಯದಲ್ಲಿ ಎಚ್ಚರದಿಂದಿರುವುದು ಒಳಿತು. ಬಾಲ ಬಡುಕರನ್ನು ದಿನದಮಟ್ಟಿಗೆ ದೂರವಿಡಿ.

ಸಿಂಹ: ಸತ್ಯವನ್ನು ಬಯಲುಗೊಳಿಸಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆ. ವಾಹನ ಖರೀದಿಯ ಯೋಗ. ಯಂತ್ರೋಪಕರಣಗಳ ವ್ಯವಹಾರದಲ್ಲಿ ಅಧಿಕ ಲಾಭ.

ಕನ್ಯಾ: ನಿಮ್ಮ ಇಂದಿನ ಅನಿವಾರ್ಯವಲ್ಲದ ಕೆಲಸ ಕಾರ್ಯಗಳನ್ನು ಮುಂದೂಡುವುದು ಉತ್ತಮ. ದೂರದ ಪ್ರಯಾಣ ಖಂಡಿತ ಬೇಡ. ಮಕ್ಕಳಿಂದ ಮನಸ್ಸಿಗೆ ಸಂತಸ ದೊರೆಯುವುದು.

ತುಲಾ: ಸಂಬಂಧವಿಲ್ಲದ ವಿಷಯಗಳು ನಿಮ್ಮನ್ನು ಗೊಂದಲಕ್ಕೆ ಸಿಕ್ಕಿಸುವ ಸಾಧ್ಯತೆ. ಮನೆಯವರೊಂದಿಗೆ ದೂರದ ಪ್ರಯಾಣ. ಆರೋಗ್ಯದಲ್ಲಿ ವೃದ್ಧಿಯಾಗಿ ಸಂತಸ ಮೂಡುವುದು.

ವೃಶ್ಚಿಕ: ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆ. ಸಮಾಧಾನ ನಿಮ್ಮ ನೆರವಿಗೆ ಬರುವುದು. ಸಹೋದರಿಯರಿಂದ ಸಕಾಲಿಕ ಸಾಂತ್ವನ.

ಧನು: ಗುಂಪುಗಾರಿಕೆಯಿಂದಾಗಿ ಧನ ಮಾನಗಳ ಹಾನಿ. ಅನ್ಯರ ಮೇಲೆ ವಿನಾ ಸಂಶಯ ಒಳ್ಳೆಯದಲ್ಲ. ದೂರದಲ್ಲಿರುವ ಮಕ್ಕಳ ಆಗಮನ ಸಾಧ್ಯತೆ.

ಮಕರ: ಮನಸ್ಸಿನಲ್ಲಿ ಹರಿಯುತ್ತಿರುವ ಪ್ರೀತಿ ಪ್ರೇಮಗಳ ಹುಚ್ಚು ಹೊಳೆಗೆ ಲಗಾಮು ಹಾಕಿಕೊಳ್ಳಿ. ಸ್ನೇಹದ ವಿಷಯದಲ್ಲಿ ಎಡವಿ ಬೀಳುವ ಸಾಧ್ಯತೆ. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ.

ಕುಂಭ: ಬೇರೆಯವರ ಥಳುಕು ಬಳುಕಿನ ಮಾತಿಗೆ ಮರುಳಾಗಿ ಮೋಸಹೋಗುವ ಸಾಧ್ಯತೆ. ದಿನದ ಮಟ್ಟಿಗೆ ದೂರದ ಪ್ರಯಾಣ ಬೇಡ. ಹಿತಕರ ವಾತಾವರಣ ಮೂಡಲಿದೆ.

ಮೀನ: ಧಾರ್ಮಿಕ ಕಾರ್ಯಗಳಲ್ಲಿ ಭಾಗಿ ಸಾಧ್ಯತೆ. ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರ. ವ್ಯಾಪಾರಸ್ಥರಿಗೆ ಗಣನೀಯ ಲಾಭ ದೊರಕುವುದು.

ನಿಮ್ಮ ಜನ್ಮದಿನ 20-ಏಪ್ರಿಲ್: ಈ ದಿನವು ಅತ್ಯಂತ ಶುಭಕರವಾಗಿದ್ದು, ಆಹಾರ ಬೆಳೆಗಳಿಂದಾಗಿ ರೈತಾಪಿ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭದ ನಿರೀಕ್ಷೆ ಕಂಡುಬರುವುದು. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಯಶಸ್ಸು. ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವವರಿಗೆ ಜವಾಬ್ದಾರಿಯಲ್ಲಿ ಹೆಚ್ಚಳ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಿಲ್ಲದ ಮಾನವಧರ್ಮ

ತಲೆಯಿಂದ ತಲೆಗೆ, ಪೀಳಿಗೆಯಿಂದ ಪೀಳಿಗೆಗೆ |
ಅಲೆಯಿಂದಲಲೆಗೆ ಟಪ್ಪೆಯ ಚಾರನಂತೆ||
ಇಳಿಯುತಿದೆ ಯುಗದಿಂದ ಯುಗಕೆ
ಮಾನವಧರ್ಮ|
ನಿಲದಮೃತಧಾರೆಯದು-ಮಂಕುತಿಮ್ಮ || 408 ||

ಪದ-ಅರ್ಥ: ಅಲೆಯಿಂದಲಲೆಗೆ = ಅಲೆಯಿಂದ + ಅಲೆಗೆ, ಟಪ್ಪೆಯ = ಟಪಾಲಿನ, ಅಂಚೆಯ, ಚಾರ = ಸೇವಕ, ನಿಲದಮೃತದಾರೆಯದು = ನಿಲದ (ನಿಲ್ಲದ) + ಅಮೃತಧಾರೆ + ಅದು.

ವಾಚ್ಯಾರ್ಥ: ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ, ಅಲೆಯಿಂದ ಅಲೆಗೆ ಬರುವಂತೆ, ಅಂಚೆಯ ಸೇವಕನಂತೆ, ಮಾನವಧರ್ಮ ಯುಗದಿಂದ ಯುಗಕೆ ಹರಿದು ಬರುತ್ತಿದೆ. ಅದೊಂದು ಅನಂತವಾದ ಅಮೃತಧಾರೆ.

ವಿವರಣೆ: ಈ ಜಗತ್ತಿನ ವ್ಯವಸ್ಥೆ ಒಂದು ಅದ್ಭುತ. ತಲೆಮಾರಿನಿಂದ ತಲೆಮಾರಿಗೆ ಹೇಗೆ ಗುಣಗಳು, ಧರ್ಮಗಳು ಸಾಗಿಬರುತ್ತವೆ ಎಂಬುದೊಂದು ಕೌತುಕ. ಇಂದು ರಾಮನಿಲ್ಲ, ಕೃಷ್ಣನಿಲ್ಲ, ಏಸೂಕ್ರಿಸ್ತನಿಲ್ಲ ಬುದ್ಧ, ಮಹಾವೀರ, ಶಂಕರಾಚಾರ್ಯ, ಬಸವಣ್ಣ ಇವರಾರೂ ದೇಹದಿಂದ ಇಲ್ಲ. ಆದರೆ ಅವರು ಹೇಳಿದ, ನಡೆದು ತೋರಿದ ಜೀವನ ಮೌಲ್ಯಗಳು ಒಂದು ರೀತಿಯ ಬದಲಾವಣೆಗಳನ್ನು ಕಂಡರೂ ಹಾಗೆಯೇ ಮುಂದುವರೆದಿವೆ. ಇದೇ ಬಹುಶ: ಭಗವದ್ಗೀತೆಯ 'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ| ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' ಎಂಬ ಮಾತಿನ ಅರ್ಥ. ಮೌಲ್ಯಗಳ, ಮಾನವಧರ್ಮದ ಅಧಃಪತನವಾದಾಗಲೆಲ್ಲ ಅದರ ಪುನರುತ್ಥಾನಕ್ಕಾಗಿ ನಾನು ಹುಟ್ಟಿ ಬರುತ್ತೇನೆ ಎಂಬ ವಾಗ್ದಾನ ಅದು. ಇದೊಂದು ಸಾಂಕೇತಿಕವಾದ ಮಾತು. ಕಾಲದಿಂದ ಕಾಲಕ್ಕೆ ಬದಲಾವಣೆಗಳು ಆಗುವುದು ಖಚಿತ. ಆದರೆ ಆತಂಕಕ್ಕೆ ಕಾರಣವಿಲ್ಲ. ಆಗ ಮತ್ತೊಬ್ಬ ನಾಯಕ, ಮತ್ತೊಂದು ಬದಲಾವಣೆಯನ್ನು ತಂದು ಮಾನವಧರ್ಮವನ್ನು ಸ್ಥಿರವಾಗುವಂತೆ ಮಾಡಬಹುದು. ಅವರ ವಿಧಾನಗಳು ಬೇರೆ. ಆದರೆ ಉದ್ದೇಶ ಒಂದೇ. ಅದು ಮಾನವ ಧರ್ಮದ ಉಳಿವು.

ಶ್ರೀರಾಮನ ಮೌಲ್ಯ ಪ್ರತಿಪಾದನೆಯ ನಡೆಗಳೇ ಬೇರೆ, ಕೃಷ್ಣನ ನಡೆಗಳೇ ಬೇರೆ. ಮುಂದೆ ಬಂದ ಬುದ್ಧ ಆಸೆಯ ನಿರಾಕರಣೆ ಮಾಡಿದರೆ, ಮಹಾವೀರ ಅಪರಿಗ್ರಹವನ್ನು ಮಾದರಿಯನ್ನಾಗಿಸಿದ. ಎಲ್ಲರ ವಿಧಾನಗಳು ಬೇರೆಯಾದರೂ ಅವೆಲ್ಲ ಮಾನವತೆಯನ್ನು ಸಾರುವ ಕ್ರಿಯೆಗಳೇ.

ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠಮಟ್ಟದ ಹತ್ತಿಯ ಎಳೆ ಹೆಚ್ಚೆಂದರೆ ಎರಡು ಅಂಗುಲ ಉದ್ದವಿರುತ್ತದಂತೆ. ಆದರೆ ಆ ಹತ್ತಿಯ ಎಳೆಗಳಿಂದ ನೂರು ಮೀಟರ್ ಉದ್ದವಾದ ನೂಲಿನ ಹಗ್ಗವನ್ನು ನಿರ್ಮಿಸಬಹುದು. ಅಷ್ಟು ಚಿಕ್ಕದಾದ ನೂಲಿನ ಎಳೆಯಿಂದ ಅಷ್ಟು ಉದ್ದ ಹಗ್ಗವಾಗುವುದು ಹೇಗೆ? ಒಂದು ಎಳೆ ಮತ್ತೊಂದರ ಮೇಲೆ ಸರಿಯಾಗಿ ಹರಡಿ ಹುರಿಗೊಂಡರೆ ಗಟ್ಟಿಯಾದ ಹಗ್ಗವಾದೀತು. ಅಂತೆಯೇ ಅಶಾಶ್ವತವಾದ ಪ್ರತಿಯೊಬ್ಬ ಮನುಷ್ಯನ ಮೌಲ್ಯಗಳು ಮುಂದಿನ ತಲೆಮಾರಿನೊಂದಿಗೆ ಹೊಂದಿ ಹುರಿಗೊಂಡಾಗ ಅವು ಹಾಗೆಯೇ ನೀರಿನ ಅಲೆಗಳಂತೆ ಮುಂದುವರೆಯುತ್ತ ಹೋಗುತ್ತವೆ. ಇದನ್ನು ಕಗ್ಗ ತಿಳಿಸುತ್ತದೆ. ಹಿಂದೆ ಸಂದೇಶಗಳನ್ನು ಕಳುಹಿಸುವಾಗ ಒಬ್ಬ ವಾಹಕ ಅದನ್ನು ತೆಗೆದುಕೊಂಡು ಸಾಗಿ ಮತ್ತೊಬ್ಬನಿಗೆ ತಲುಪಿಸುತ್ತಿದ್ದ. ಅವನು ಹಾಗೆಯೇ ಮತ್ತೊಬ್ಬನಿಗೆ, ಅವನು ಇನ್ನೊಬ್ಬನಿಗೆ ತಲುಪಿಸುತ್ತ, ಕೊನೆಗೆ ಅದು ಗಮ್ಯವನ್ನು ಸೇರುತ್ತಿತ್ತು. ಇದೇ ರೀತಿ ಮಾನವಧರ್ಮ ಯುಗದಿಂದ ಯುಗಕ್ಕೆ ಹರಿದುಬರುತ್ತ ಎಂದೆಂದಿಗೂ ನಿಲ್ಲದ, ಅನಂತವಾದ ಅಮೃತಧಾರೆಯಾಗಿದೆ. ಮನುಷ್ಯ ಮರೆಯಾಗಿ ಹೋದರೂ ಮಾನವತೆ ನಿಂತಿದೆ. ❖

ಪದಬಂಧ 4572

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭ್ರಾಂತಿಯನ್ನು ಹೋಗಲಾಡಿಸುವುದು (6)
4.ಗುರುವಿನಿಂದ ಬಹಳ ಹಿರಿದಾದುದು ಬಂದಿದೆ (4)
5.ವ್ಯವಹಾರ ಕುಶಲನೀತ (3)
7.ಶ್ರೇಷ್ಠ ಅಥವಾ ಅತಿಶಯವೆಂದರೂ ಸರಿಯೇ (3)
9. ಕೈಯಲ್ಲಿರುವ ಹಣ (3)
12.ಟಾರ ರಸ್ತೆ ಬದಿಯಲ್ಲಿನ ಮೋರಿ (3)
13.ರುಚಿಕಟ್ಟಾದ ಅಡುಗೆ (4)
15.ಮೂರ್ತಿ ಪೂಜೆಯಿದು (6)

ಮೇಲಿಂದ ಕೆಳಕ್ಕೆ

1.ಚಾರನ ಕೆಟ್ಟ ನಡುವಳಿಕೆ! (4)
2.ನಡುಗುವುದನ್ನು ನೋಡಿದಾಗ ಈ ಮಂದಹಾಸ! (2)
3.ಸ್ಮರಣೆಗೆ ಬಾರದಿರುವುದು (3)
6.ತಪ್ಪನ್ನು ಮನ್ನಿಸುವುದು (4)
7.ಉಮೇದುವಾರ ತೋರಿದ ಹುರುಪು! (3)
8.ಮನಸ್ಸಿಗೆ ಬಂದಿರುವ ಕಾಯಿಲೆ (4)
10.ರಾಜನ ಗೃಹವಿದು (4)
11.ಬೆಲೆ ಕಟ್ಟಲಾಗದದು (3)
14.ಕವಿತೆ ಬರೆಯುವವನು (2)



4571ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಾರಿತೋಷಕ 4.ವಾರ್ಧಕ್ಯ 5.ಸುದಾಮ 6.ನಲಿವು 8.ಅಳು 9.ರಾವು 11.ಪರಮ 14.ನಖಾಗ್ರ 15.ತಪಸ್ವಿ 16.ಜಲಜನಕ

ಮೇಲಿಂದ ಕೆಳಕ್ಕೆ: 1.ಪಾರತಂತ್ರ್ಯ 2.ತೋರುಬೆರಳು 3.ಕಸುವು 4.ವಾಮನ 7.ಲಿಲಾವು 8.ಅಧರ 9.ರಾಜಾಧಿರಾಜ 10.ಅನಾಮಕ 12.ಮನಸ್ವಿ 13.ಅಗ್ರಜ

ಸುಡೊಕು 4958

			4			2		7
		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4957 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಪೌಷ್ಟಿಕ ಆಹಾರ ಸೇವಿಸಿ

ಷೇರುಪೇಟೆ ವಹಿವಾಟು

883



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,617
ಇಂದಿನ ಅಂತ್ಯ	14,359
▼	258
ದಿನದ ಕನಿಷ್ಠ	14,191

ವಿನಿಮಯ ದರ

$ ಡಾಲರ್	74.87
£ ಪೌಂಡ್	104.07
€ ಯುರೊ	90.13
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹514

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1395 (1395)
ಸೂರ್ಯಕಾಂತಿ (ರಿಫೈನ್ಡ್)	₹1720 (1700)
ಪಾಮೋಲಿನ್	₹1300 (1310)

4ನೇ ವರ್ಷದ ಪುಣ್ಯಸ್ಮರಣೆ

ಶ್ರೀಯುತ ಉಮೇಶ್ ರವರು
ಅಡುಗೆ ಕಂಟ್ರಾಕ್ಟರ್, ಅಡೇಪೇಟೆ, ನೆಲಮಂಗಲ
ನಿಧನ 20-04-2017
ನೀವು ನಮ್ಮನ್ನು ಅಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ.
ತಮ್ಮ ಸ್ಮರಣೆಯಲ್ಲಿರುವ
ಕುಟುಂಬದವರು, ಆತ್ಮೀಯ ಗೆಳೆಯರು ಹಾಗೂ ಬಂಧು ಬಾಂಧವರು

ಬಿಜೆಪಿ ರಾಷ್ಟ್ರೀಯ ಎಸ್‌.ಟಿ. ಮೋರ್ಚಾಕ್ಕೆ ಶಾಂತಾರಾಮ ಸಿದ್ದಿ

ಪ್ರಜಾವಾಣಿ ವಾರ್ತೆ

ಯಲ್ಲಾಪುರ: ಬಿಜೆಪಿ ಎಸ್‌.ಟಿ. ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಆಯ್ಕೆಯಾಗಿದ್ದಾರೆ.

ಚಿನ್ನದ ದರ ₹ 411, ಬೆಳ್ಳಿ ₹ 338ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ. ಚಿನ್ನದ ದರ 10 ಗ್ರಾಂಗೆ ₹ 411ರಷ್ಟು ಹೆಚ್ಚಾಗಿ ₹ 47,291ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 338ರಷ್ಟು ಏರಿಕೆಯಾಗಿ ₹ 68,335ಕ್ಕೆ ತಲುಪಿದೆ.

'ಡಾಲರ್ ಮೌಲ್ಯ ಇಳಿಕೆ ಹಾಗೂ ಅಮೆರಿಕದ ಬಾಂಡ್ ಗಳಿಕೆ ಕಡಿಮೆ ಆಗಿದ್ದರಿಂದ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

ಕೋವಿಡ್ ಹೆಚ್ಚಳ: ವಾಹನೋದ್ಯಮದ ಹೇಳಿಕೆ

ವಾಹನ ಮಾರಾಟ ಇಳಿಕೆ ಕಾಣುವ ಆತಂಕ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ವಾಹನ ಮಾರಾಟವು ಇಳಿಕೆ ಆಗಬಹುದು ಎಂಬ ಆತಂಕವನ್ನು ಪ್ರಮುಖ ಕಾರು ತಯಾರಿಕಾ ಕಂಪನಿಗಳಾದ ಮಾರುತಿ ಸುಜುಕಿ, ಟೊಯೊಟಾ ಮತ್ತು ಹೋಂಡಾ ಕಾರ್ಸ್ ವ್ಯಕ್ತಪಡಿಸಿವೆ.

ವಾಹನ ಮಾರಾಟವು ಆರ್ಥಿಕ ಬೆಳವಣಿಗೆ ಮತ್ತು ಖರೀದಿಸಲು ಗ್ರಾಹಕರು ಎಷ್ಟರಮಟ್ಟಿಗೆ ಸಿದ್ಧರಿದ್ದಾರೆ ಎಂಬುದರ ಜೊತೆ ಬೆಸೆದುಕೊಂಡಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಹೇಳಿದೆ.

ಕೋವಿಡ್–19 ಪರಿಸ್ಥಿತಿಯು ಹದಗೆಡುತ್ತಿರುವುದರಿಂದ ಸಹಜವಾಗಿಯೇ ಗ್ರಾಹಕರ ಭಾವನೆ ನಕಾರಾತ್ಮಕವಾಗಿದ್ದು, ಅದು ಮಾರಾಟದ ಮೇಲೆಯೂ ಪರಿಣಾಮ ಬೀರುತ್ತದೆ ಎಂದು ಮಾರುತಿ ಸುಜುಕಿ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಲಾಕ್‌ಡೌನ್‌ನಿಂದ ಗ್ರಾಹಕರಿಗೆ ಕಾರನ್ನು ಹಸ್ತಾಂತರಿಸಲು ಸಾಧ್ಯವಾಗುವುದಿಲ್ಲ. ಆದರೆ, ಲಾಕ್‌ಡೌನ್ ಇಲ್ಲದಿದ್ದರೂ ಕೋವಿಡ್ ಪರಿಸ್ಥಿತಿಯು ಹದಗೆಟ್ಟರೆ ಕಾರು ಖರೀದಿಸುವ ಗ್ರಾಹಕರ ಮನಃಸ್ಥಿತಿ ಬದಲಾಗುತ್ತದೆ ಎಂದಿದ್ದಾರೆ.

ಸ್ಥಳೀಯ ಮಟ್ಟದಲ್ಲಿನ ನಿರ್ಬಂಧಗಳಿಂದಾಗಿ ಖರೀದಿ ಮತ್ತು ವಿತರಣೆಯ ಮೇಲೆ ಪರಿಣಾಮ ಉಂಟಾಗಿದೆ ಎಂದು ಟೊಯೊಟಾ ಕಿರ್ಲೋಸ್ಕರ್ ಮೋಟರ್‌ನ ಹಿರಿಯ ಉಪಾಧ್ಯಕ್ಷ ನವೀನ್ ಸೋನಿ ಹೇಳಿದ್ದಾರೆ.

'ಬೇಡಿಕೆ ಮತ್ತು ಪೂರೈಕೆ ನಡುವೆ ವ್ಯತ್ಯಾಸವಾಗದಂತೆ ನೋಡಿಕೊಳ್ಳುವುದು ನಮ್ಮ ತಕ್ಷಣದ ಆದ್ಯತೆಯಾಗಿದೆ. ಗ್ರಾಹಕರಿಗೆ ಕಾರು ವಿತರಿಸುವ ಸಮಯವನ್ನು ಕಡಿಮೆ ಮಾಡುವುದರತ್ತವೂ ಗಮನ ಹರಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಲಾಕ್‌ಡೌನ್ ಮತ್ತು ವಾರಾಂತ್ಯದ ಕರ್ಫ್ಯೂನಿಂದಾಗಿ ಕೆಲವು ಮಾರುಕಟ್ಟೆಗಳಲ್ಲಿ ಷೋರೂಂಗಳು ಮುಚ್ಚುವಂತಾಗಿದೆ. ಇದರಿಂದ ಮಾರಾಟದ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂದು ಹೋಂಡಾ ಕಾರ್ಸ್ ಇಂಡಿಯಾದ ಹಿರಿಯ ಉಪಾಧ್ಯಕ್ಷ ರಾಜೇಶ್ ಗೋಯಲ್ ಹೇಳಿದ್ದಾರೆ.

ದ್ವಿಚಕ್ರ ವಾಹನ ಮಾರಾಟ ಇಳಿಕೆ

ಕೋವಿಡ್‌ನ ಎರಡನೇ ಅಲೆಯು ದ್ವಿಚಕ್ರ ವಾಹನ ಮಾರುಕಟ್ಟೆಯ ಮೇಲೆ ತೀವ್ರ ಪರಿಣಾಮ ಉಂಟುಮಾಡಿದೆ. ಏಪ್ರಿಲ್‌ನಲ್ಲಿ ಇಲ್ಲಿಯವರೆಗೆ ಮಾರಾಟವು ಶೇ 30ರಿಂದ ಶೇ 50ರಷ್ಟು ಇಳಿಕೆಯಾಗಿದೆ ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್‌ನ ವರದಿ ಹೇಳಿದೆ.

ನವರಾತ್ರಿ ಮತ್ತು ಗುಡಿಪಡ್ವಾದಂತಹ ಹಬ್ಬಗಳು ವಾರ್ಷಿಕ ವಾಹನ ಮಾರಾಟದಲ್ಲಿ ಉತ್ತಮ ಪಾಲನ್ನು ಹೊಂದಿವೆ. ಈ ಹೊತ್ತಿನಲ್ಲಿ ಚೇತರಿಕೆ ಆಗದೇ ಇದ್ದರೆ ಅಕ್ಟೋಬರ್‌ವರೆಗೂ ಚೇತರಿಕೆ ಸಾಧ್ಯವಾಗುವುದಿಲ್ಲ ಎಂದು ವರದಿ ತಿಳಿಸಿದೆ.

ಗುಡಿಪಡ್ವಾ ಸಂದರ್ಭದಲ್ಲಿ ಮಹಾರಾಷ್ಟ್ರದ ವಾಹನ ವಿತರಕರು ನಿರೀಕ್ಷೆ ಮಾಡಿದ್ದ ಮಾರಾಟದಲ್ಲಿ ಪ್ರಮಾಣದಲ್ಲಿ ಶೇ 50ರಷ್ಟು ಮಾತ್ರವೇ ಮಾರಾಟ ಆಗಿದೆ. ಉತ್ತರ ಪ್ರದೇಶದಲ್ಲಿ ಪಂಚಾಯಿತಿ ಚುನಾವಣೆಯ ಕಾರಣಕ್ಕಾಗಿ ಮಾರಾಟದ ಮೇಲೆ ಪರಿಣಾಮ ಉಂಟಾಗಿದೆ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಕೋವಿಡ್ ಹೆಚ್ಚಳ, ಕರಗಿದ ಸಂಪತ್ತು

ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್–19 ಪರಿಸ್ಥಿತಿ ಬಿಗಡಾಯಿಸುತ್ತಿರುವುದು ಷೇರು ಮಾರುಕಟ್ಟೆಗಳಲ್ಲಿ ಸೂಚ್ಯಂಕ ಕುಸಿತಕ್ಕೆ ಕಾರಣವಾಯಿತು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವಾದ ಸೆನ್ಸೆಕ್ಸ್ 883 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕವಾದ ನಿಫ್ಟಿ 258 ಅಂಶ ಕುಸಿತ ಕಂಡವು. ಸೋಮವಾರ ಹೂಡಿಕೆದಾರರ ಒಟ್ಟು ಸಂಪತ್ತು ₹ 3.53 ಲಕ್ಷ ಕೋಟಿಯಷ್ಟು ಕಡಿಮೆ ಆಯಿತು.

ಕೆಲವು ರಾಜ್ಯಗಳಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಲಾಕ್‌ಡೌನ್ ಕ್ರಮಗಳು ಆರ್ಥಿಕ ಚೇತರಿಕೆಯ ವಿಚಾರವಾಗಿ ಕಳವಳ ಮೂಡಿಸಿವೆ. ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 52 ಪೈಸೆಯಷ್ಟು ತಗ್ಗಿದ್ದು ಕೂಡ ಹೂಡಿಕೆದಾರರ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ತಿಳಿಸಿದ್ದಾರೆ.

ವಹಿವಾಟಿನ ಆರಂಭದಲ್ಲಿ 1,469 ಅಂಶ ಕುಸಿತ ಕಂಡಿದ್ದ ಸೆನ್ಸೆಕ್ಸ್, ನಂತರ ತುಸು ಚೇತರಿಕೆ ದಾಖಲಿಸಿತು. ಪವರ್‌ಗ್ರಿಡ್, ಒಎನ್‌ಜಿಸಿ, ಇಂಡಸ್ ಇಂಡ್ ಬ್ಯಾಂಕ್, ಕೋಟಕ್ ಬ್ಯಾಂಕ್, ಎಲ್‌ಆ್ಯಂಡ್‌ಟಿ, ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರುಗಳು ಇಳಿಕೆ ಕಂಡವು. ಡಾ ರೆಡ್ಡೀಸ್ ಮತ್ತು ಇನ್ಫೊಸಿಸ್ ಷೇರುಗಳು ಮಾತ್ರ ಏರಿಕೆ ದಾಖಲಿಸಿದವು.

'ಹಲವು ರಾಜ್ಯಗಳು ಆರ್ಥಿಕ ಚಟುವಟಿಕೆಗಳಿಗೆ ನಿರ್ಬಂಧಗಳನ್ನು ಹೆಚ್ಚಿಸಿದ ಪರಿಣಾಮವಾಗಿ ದೇಶಿ ಷೇರು ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಜನರ ಸಂಚಾರಕ್ಕೆ ದೆಹಲಿ ಮತ್ತು ರಾಜಸ್ಥಾನ ಸರ್ಕಾರಗಳು ಹೆಚ್ಚಿನ ನಿರ್ಬಂಧ ವಿಧಿಸಿದ್ದು ಹೂಡಿಕೆದಾರರ ವಿಶ್ವಾಸ ಕುಂದಿಸಿತು' ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಬಿನೋದ್ ಮೋದಿ ಹೇಳಿದ್ದಾರೆ.

ನೇಮಕಾತಿ ಸಂದರ್ಶನ ಮುಂದೂಡಿದ ಯುಪಿಎಸ್‌ಸಿ

ನವದೆಹಲಿ: ಕೋವಿಡ್ ಪರಿಸ್ಥಿತಿಯಿಂದಾಗಿ ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) 2020ರ ಸಾಲಿಗೆ ಕೇಂದ್ರ ಆಡಳಿತಾತ್ಮಕ ಸೇವೆ ಹುದ್ದೆಗಳಿಗೆ ನಡೆಯಬೇಕಿದ್ದ ಸಂದರ್ಶನಗಳನ್ನು ಮುಂದೂಡಿದೆ.

'ಸಂದರ್ಶನ ಮತ್ತು ನೇಮಕಾತಿ ಪರೀಕ್ಷೆಗಳು, ಅಭ್ಯರ್ಥಿಗಳು ದೇಶದ ವಿವಿಧೆಡೆಯಿಂದ ಯಾವಾಗ ಬರಬೇಕು ಎಂಬುದನ್ನು ಕಾಲಕಾಲಕ್ಕೆ ಪರಿಸ್ಥಿತಿ ಅವಲೋಕಿಸಿ ತೀರ್ಮಾನಿಸಲಾಗುವುದು. ಪರಿಷ್ಕೃತ ವೇಳಾಪಟ್ಟಿಯನ್ನು ಯುಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು' ಎಂದು ಯುಪಿಎಸ್‌ಸಿ ಸೋಮವಾರ ಹೇಳಿಕೆ ನೀಡಿದೆ.

ಪರಿಷ್ಕೃತ ದಿನಾಂಕ ಕುರಿತು ಅಭ್ಯರ್ಥಿಗಳಿಗೆ 15 ದಿನ ಮೊದಲೇ ಮಾಹಿತಿ ನೀಡಲಾಗುವುದು ಎಂದು ತಿಳಿಸಿದೆ

ಸದ್ಯದ ಸ್ಥಿತಿಯಲ್ಲಿ ಪರೀಕ್ಷೆ ಮತ್ತು ಸಂದರ್ಶನ ನಡೆಸುವುದು ಕಷ್ಟಸಾಧ್ಯ ಎಂದು ಯುಪಿಎಸ್‌ಸಿ ವಿಶೇಷ ಸಭೆಯು ನಿರ್ಧರಿಸಿತು. ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆಗೆ (ಇಒ/ಎಒ) ಹುದ್ದೆಗಳಿಗೆ ಮೇ 9ರಂದು ನಡೆಯಬೇಕಿದ್ದ ನೇಮಕಾತಿ ಪರೀಕ್ಷೆಯನ್ನು ಈಗಿನ ಸ್ಥಿತಿಯ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದೂ ಹೇಳಿಕೆಯು ತಿಳಿಸಿದೆ.

ಕೇಂದ್ರ ಆಡಳಿತಾತ್ಮಕ ಸೇವೆಯ (ಐಎಎಸ್‌., ಐಪಿಎಸ್, ಮತ್ತು ಐಎಫ್‌ಎಸ್) ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಯುಪಿಎಸ್‌ಸಿ ಮೂರು ಹಂತಗಳಲ್ಲಿ ಅಂದರೆ ಪ್ರಿಲಿಮಿನರಿ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನ ನಡೆಸಲಿದೆ.

ಹರ್ನಿಯ ಚಿಕಿತ್ಸೆ ತಮಿಳುನಾಡು ಮುಖ್ಯಮಂತ್ರಿ ಆಸ್ಪತ್ರೆಗೆ

ಚೆನ್ನೈ (ಪಿಟಿಐ): 'ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ಹರ್ನಿಯ ಚಿಕಿತ್ಸೆಗಾಗಿ ಸೋಮವಾರ ಇಲ್ಲಿನ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

66 ವರ್ಷದ ಪಳನಿಸ್ವಾಮಿ ಅವರು ಎಐಎಡಿಎಂಕೆ ಪಕ್ಷದ ಜಂಟಿ ಸಂಚಾಲಕರೂ ಆಗಿದ್ದು, ಮತ್ತೊಮ್ಮೆ ಅಧಿಕಾರ ಹಿಡಿಯುವ ಆಶಯದಲ್ಲಿದ್ದಾರೆ. ಏಪ್ರಿಲ್ 6ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ನಡೆದಿದ್ದು, ಮೇ 2ರಂದು ಮತ ಎಣಿಕೆ ನಡೆಯಲಿದೆ.

41ನೇ ವಾರ್ಷಿಕ ಪುಣ್ಯಸ್ಮರಣೆ



ದಿ. ಪೂಜ್ಯಶ್ರೀ
ಎಸ್‌. ಕರಿಯಪ್ಪನವರು
1900 – 1980

ದಿ. ಪೂಜ್ಯಶ್ರೀ ಎಸ್‌. ಕರಿಯಪ್ಪನವರು
ಪೂಜ್ಯ ಶ್ರೀಯವರ 41ನೇ ವಾರ್ಷಿಕ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ: 21-4-2021ರ ಬುಧವಾರ ಶ್ರೀ ರಾಮನವಮಿ ದಿನದಂದು ಬೆಳಿಗ್ಗೆ 8.00 ಗಂಟೆಗೆ 'ಗ್ರಾಮ ವಿದ್ಯಾ ಪ್ರಚಾರಕ ಸಂಘ ಕನಕಪುರ' ಆವರಣದಲ್ಲಿರುವ ಕರ್ಮಯೋಗಿ ಪೂಜ್ಯಶ್ರೀ. ಎಸ್‌. ಕರಿಯಪ್ಪನವರ ಸಮಾಧಿ ಬಳಿ ಆಚರಿಸಲಾಗುವುದು.
ಸಂಸ್ಥೆಯ ಸದಸ್ಯರು, ಹಿರಿಯ ವಿದ್ಯಾರ್ಥಿಗಳು ಮತ್ತು ಅಭಿಮಾನಿಗಳು ತಾವು ಇರುವ ಸ್ಥಳದಲ್ಲಿಯೇ ಪೂಜ್ಯ ಶ್ರೀಯವರನ್ನು ಸ್ಮರಿಸಬೇಕಾಗಿ ಕೋರುತ್ತೇವೆ.
ವಿಶೇಷ ಸೂಚನೆ: ದೇಶದಲ್ಲಿ ಕೋವಿಡ್–19 ರ ಎರಡನೇ ಅಲೆ ಸಕ್ರಿಯವಾಗಿರುವುದರಿಂದ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಗುವುದು
ಆಡಳಿತ ಮಂಡಳಿಯ ಪರವಾಗಿ
ಸಿ.ರಮೇಶ್, ಗೌ|| ಕಾರ್ಯದರ್ಶಿ
ಗ್ರಾಮ ವಿದ್ಯಾ ಪ್ರಚಾರಕ ಸಂಘ (ರಿ), ಕನಕಪುರ.

ಷೇರುಪೇಟೆಯಲ್ಲಿ ಎಷ್ಟು ಹಣ ಹೂಡಬೇಕು?

ಷೇರು ಮಾತು

ಶರತ್ ಎಂ.ಎಸ್.

ಷೇರು ಮಾರುಕಟ್ಟೆಯಲ್ಲಿ ನಾವು ಎಷ್ಟು ಹಣ ತೊಡಗಿಸಬೇಕು? ಇದೊಂದು ಮಿಲಿಯನ್ ಡಾಲರ್ ಪ್ರಶ್ನೆ! ಇಂತಹ ಪ್ರಶ್ನೆಗೆ ನೀವೇ ಉತ್ತರ ಕಂಡುಕೊಳ್ಳುವುದು ಹೇಗೆ ಎನ್ನುವುದನ್ನು ಇಲ್ಲಿ ವಿವರಿಸಲಾಗಿದೆ.

ಷೇರು ಹೂಡಿಕೆ ಮತ್ತು ಆರ್ಥಿಕ ಸ್ಥಿತಿಗತಿ: ರಾಜ್, ರವಿ ಮತ್ತು ರೋಹಿತ್ ಸ್ನೇಹಿತರು. ರಾಜ್ ಶ್ರೀಮಂತ, ರವಿ ಮಧ್ಯಮ ವರ್ಗದವ ಮತ್ತು ರೋಹಿತ್ ಬಡ ಕುಟುಂಬಕ್ಕೆ ಸೇರಿದವ. 'ಷೇರು ಮಾರುಕಟ್ಟೆಯಲ್ಲಿ ಎಷ್ಟು ಹೂಡಿಕೆ ಮಾಡಬೇಕು' ಎಂದು ಈ ಮೂವರೂ ಕೇಳಿದರೆ ಒಂದೇ ಉತ್ತರ ನೀಡಲು ಸಾಧ್ಯವಿಲ್ಲ. ಈ ಮೂವರ ಆರ್ಥಿಕ ಹಿನ್ನೆಲೆ ಬೇರೆಯೇ ಆಗಿದೆ. ರಾಜ್ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಷ್ಟ ಅನುಭವಿಸಿದರೆ ಆತನ ಬದುಕಿಗೆ ಯಾವುದೇ ತೊಂದರೆ ಇಲ್ಲ. ಏಕೆಂದರೆ ಆತನ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ರವಿ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಷ್ಟ ಅನುಭವಿಸಿದರೆ ಕೊಂಚ ತೊಂದರೆ ಆಗುತ್ತದೆ. ಆದರೆ ಒಂದಷ್ಟು ಸಮಯದ ಬಳಿಕ ರವಿ ಆರ್ಥಿಕ ನಷ್ಟದಿಂದ ಚೇತರಿಸಿಕೊಂಡು ಮತ್ತೆ ಷೇರು ಮಾರುಕಟ್ಟೆ ಹೂಡಿಕೆಗೆ ಹಿಂದಿರುಗುವ ಸಾಧ್ಯತೆ ಇರುತ್ತದೆ.

ರೋಹಿತ್‌ನ ಆರ್ಥಿಕ ಹಿನ್ನೆಲೆ ಚೆನ್ನಾಗಿಲ್ಲ. ಆತ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಷ್ಟ ಅನುಭವಿಸಿದರೆ ಚೇತರಿಸಿಕೊಳ್ಳುವುದು ಕಷ್ಟ. ಷೇರು ಮಾರುಕಟ್ಟೆ ವಿಚಾರದಲ್ಲಿ ಎಲ್ಲರಿಗೂ ಒಪ್ಪುವ ಒಂದು ಹೂಡಿಕೆ ಯೋಜನೆ ಇಲ್ಲ ಎನ್ನುವುದಕ್ಕೆ ಮೇಲಿನ ಉದಾಹರಣೆ. ನಿಮ್ಮ ಹಣಕಾಸಿನ ಸ್ಥಿತಿಗತಿ ಮನಗಂಡು ಷೇರು ಮಾರುಕಟ್ಟೆಯಲ್ಲಿ ಎಷ್ಟು ಹೂಡಬೇಕು ಎನ್ನುವುದನ್ನು ನೀವೇ ಗೊತ್ತುಮಾಡಿಕೊಳ್ಳಬೇಕು. ಸರಳವಾಗಿ ಹೇಳುವುದಾದರೆ ಹೆಚ್ಚು ರಿಸ್ಕ್ ಇದ್ದಲ್ಲಿ ಹೆಚ್ಚು ಗಳಿಕೆ ಸಾಧ್ಯತೆ ಇರುತ್ತದೆ, ಕಡಿಮೆ ರಿಸ್ಕ್ ಇದ್ದರೆ ಲಾಭಾಂಶ ಗಳಿಕೆಯ ಪ್ರಮಾಣವೂ ಕಡಿಮೆ ಇರುತ್ತದೆ. ಹಾಗಾದರೆ ಷೇರು ಹೂಡಿಕೆಗೆ ನಮಗೊಂದು ವೈಜ್ಞಾನಿಕ ಅಂದಾಜಿಲ್ಲವೇ? ಅದಕ್ಕೆ ಉತ್ತರ ಹಣಕಾಸು ಯೋಜನೆ ರೂಪಿಸಲು ನೆರವಾಗುವ 'ಪಿರಮಿಡ್ ಲೆಕ್ಕಾಚಾರ'.

ಏನಿದು ಪಿರಮಿಡ್ ಲೆಕ್ಕಾಚಾರ?: ಈ ಚಿತ್ರ ಗಮನಿಸಿ, ಪಿರಮಿಡ್‌ನ ಕೆಳಭಾಗದಲ್ಲಿರುವ ಹೂಡಿಕೆಗಳಲ್ಲಿ ರಿಸ್ಕ್ ಕಡಿಮೆ ಇರುತ್ತದೆ. ಮಧ್ಯ ಭಾಗದಲ್ಲಿರುವ ಹೂಡಿಕೆಗಳಲ್ಲಿ ಮಧ್ಯಮ ಪ್ರಮಾಣದ ರಿಸ್ಕ್ ಇರುತ್ತದೆ. ಮೇಲ್ಭಾಗದಲ್ಲಿ ಸೂಚಿಸಿರುವ ಹೂಡಿಕೆಗಳಲ್ಲಿ ಹೆಚ್ಚು ರಿಸ್ಕ್ ಇರುತ್ತದೆ. ನಮ್ಮ ಮೇಲಿನ ಉದಾಹರಣೆ ಗಣನೆಗೆ ತೆಗೆದುಕೊಂಡರೆ ಶ್ರೀಮಂತ ಹಿನ್ನೆಲೆಯ ರಾಜ್, ಪಿರಮಿಡ್‌ನ ಮೇಲ್ಭಾಗದ ಯೋಜನೆಗಳಲ್ಲಿ ತನ್ನ ಉಳಿತಾಯದ ಶೇಕಡ 80ರಷ್ಟು, ಮಧ್ಯ ಭಾಗದ ಯೋಜನೆಗಳಲ್ಲಿ ಶೇ 10ರಷ್ಟು, ಕೆಳಭಾಗದ ಯೋಜನೆಗಳಲ್ಲಿ ಶೇ 10ರಷ್ಟು ಹಣ ತೊಡಗಿಸಬಹುದು.

ಮಧ್ಯಮ ವರ್ಗದ ರವಿ ಪಿರಮಿಡ್‌ನ ಮಧ್ಯ ಭಾಗದ ಹೂಡಿಕೆಗಳಲ್ಲಿ ಶೇ 80ರಷ್ಟು, ಶೇ 10ರಷ್ಟನ್ನು ಮೇಲ್ಭಾಗದ ಯೋಜನೆಗಳಲ್ಲಿ, ಶೇ 10ರಷ್ಟನ್ನು ತಳ ಭಾಗದಲ್ಲಿರುವ ಹೂಡಿಕೆ ಯೋಜನೆಗಳಲ್ಲಿ ತೊಡಗಿಸಬಹುದು. ಬಡ ಹಿನ್ನೆಲೆಯ ರೋಹಿತ್, ಪಿರಮಿಡ್‌ನ ತಳಭಾಗದ ಯೋಜನೆಗಳಲ್ಲಿ ಶೇ 90ರಷ್ಟು, ಶೇ 10ರಷ್ಟನ್ನು ಮೇಲ್ಭಾಗದಲ್ಲಿ ಅಥವಾ ಮಧ್ಯ ಭಾಗದಲ್ಲಿ ಸೂಚಿಸಿರುವ ಹೂಡಿಕೆಗಳಲ್ಲಿ ತೊಡಗಿಸಬಹುದು.

ನ್ಯಾಯಮೂರ್ತಿ ಶ್ರೀಕೃಷ್ಣ ನೇತೃತ್ವದ ಸಮಿತಿಗೆ ಗೋಕರ್ಣದ ದೇಗುಲ

ಒಂದನೇ ಪುಟದಿಂದ

15 ದಿನಗಳ ಒಳಗೆ ದೇವಸ್ಥಾನದ ವ್ಯವಹಾರಗಳ ಉಸ್ತುವಾರಿಯನ್ನು ಮೇಲ್ವಿಚಾರಣಾ ಸಮಿತಿಯ ಕಾರ್ಯದರ್ಶಿಯೂ ಆಗಿರುವ ಸಹಾಯಕ ಆಯುಕ್ತರಿಗೆ ಹಸ್ತಾಂತರಿಸುವಂತೆ ಪೀಠವು ರಾಮಚಂದ್ರಾಪುರ ಮಠಕ್ಕೆ ಸೂಚಿಸಿದೆ.

'8ನೇ ಶತಮಾನದಲ್ಲಿ ಗೋಕರ್ಣದಲ್ಲಿ ಐತಿಹಾಸಿಕ ಮಠವನ್ನು ಸ್ಥಾಪಿಸಿದ್ದ ಆದಿ ಶಂಕರಾಚಾರ್ಯರು, ಮಹಾಬಲೇಶ್ವರ ದೇವಸ್ಥಾನದ ವ್ಯವಹಾರಗಳನ್ನು ನೋಡಿಕೊಳ್ಳುವಂತೆ ಮಠದವರಿಗೆ ಆದೇಶಿಸಿದ್ದರು' ಎಂದು ಅರ್ಜಿದಾರ, ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ವಾದ ಮಂಡಿಸಿದ್ದರು.

'ದೇವಸ್ಥಾನವು ಮಠಕ್ಕೆ ಸೇರಿದ್ದು ಎಂಬುದನ್ನು ಸಾಬೀತುಪಡಿಸುವ ಯಾವುದೇ ಪುರಾವೆಗಳಿಲ್ಲ' ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ.ರಾಮಸುಬ್ರಮಣಿಯನ್ ಅವರನ್ನೂ ಒಳಗೊಂಡಿರುವ ಪೀಠ ಹೇಳಿತು.

'ಈ ಪ್ರಕರಣದಲ್ಲಿ ಅಂತಿಮ ತೀರ್ಮಾನ ಪ್ರಕಟಿಸುವುದು ಬಾಕಿ ಇದ್ದು, ಅಲ್ಲಿಯವರೆಗೆ ದೇವಾಲಯ ಮತ್ತು ಭಕ್ತರ ಹಿತದೃಷ್ಟಿಯಿಂದ ಸ್ವತಂತ್ರ ಸಮಿತಿಗೆ ದೇವಾಲಯದ ಆಡಳಿತ ನಿರ್ವಹಣೆಯ ಹೊಣೆ ವಹಿಸುವುದು ಸೂಕ್ತವಾಗಿದೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ದಕ್ಷಿಣ ಕಾಶಿ' ಎಂದೇ ಹೆಸರಾಗಿರುವ ಮಹಾಬಲೇಶ್ವರ ದೇವಸ್ಥಾನದ ಹೊಣೆಯನ್ನು ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವು 2008ರ ಆಗಸ್ಟ್‌ನಲ್ಲಿ ರಾಮಚಂದ್ರಾಪುರ ಮಠಕ್ಕೆ ವಹಿಸಿತ್ತು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆ

ರಾಜ್ಯ ಸರ್ಕಾರ ಬೆತ್ತಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಎರಡನೇ ಅಲೆ ತಡೆಯಲು ಸಾಧ್ಯವಾಗದ ರಾಜ್ಯ ಬಿಜೆಪಿ ಸರ್ಕಾರ ಜನರ ಮುಂದೆ ಬೆತ್ತಲಾಗುತ್ತಿದೆ. ತನ್ನ ವೈಫಲ್ಯ ಮುಚ್ಚಿಕೊಳ್ಳುವ ವಿಫಲ ಯತ್ನದಲ್ಲಿ ತೊಡಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಕೊರೊನಾದಿಂದ ರಕ್ಷಿಸಿಕೊಳ್ಳಲು ಜನರಿಗೆ ನಿಯಮ, ನಿರ್ಬಂಧ, ಮಾರ್ಗಸೂಚಿಗಳ ಉಪದೇಶ ಮಾಡುವುದರ ಹೊರತಾಗಿ, ಕೊರೊನಾ ಎದುರಿಸಲು ರಾಜ್ಯ ಸರ್ಕಾರ ಏನು ಮಾಡಿದೆ ಎನ್ನುವುದನ್ನು ತಿಳಿಸಲು ತಕ್ಷಣ ಶ್ವೇತಪತ್ರ ಹೊರಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ಖಾಸಗಿ ಆಸ್ಪತ್ರೆಗಳ ದುಬಾರಿ ಶುಲ್ಕ ತೆರುವ ಶಕ್ತಿ ಜನರಿಗೆ ಇಲ್ಲ. ಆಮ್ಲಜನಕದ ದಾಸ್ತಾನಿಲ್ಲ. ರೆಮ್‌ಡಿಸಿವಿರ್‌ನಂಥ ಔಷಧಿಯ ಕೊರತೆ ಇದೆ. ಒಂದು ವರ್ಷದ ಅನುಭವದಿಂದ ಕೊರೊನಾ ಎದುರಿಸಲು ಸರ್ಕಾರ, ತನ್ನನ್ನು ಇನ್ನಷ್ಟು ಸಜ್ಜುಗೊಳಿಸಬೇಕಾಗಿತ್ತು. ಕೊರೊನಾವನ್ನೂ ಭ್ರಷ್ಟತೆಗೆ ಬಳಸಿಕೊಂಡು ಕೈಚೆಲ್ಲಿ ಕುಳಿತಿದೆ' ಎಂದೂ ದೂರಿದ್ದಾರೆ.

'ಮಾರ್ಗಸೂಚಿಗಳನ್ನು ಸಚಿವರು ಮತ್ತು ಆಡಳಿತ ಪಕ್ಷದ ಶಾಸಕರೇ ಬಹಿರಂಗವಾಗಿ ಉಲ್ಲಂಘಿಸುತ್ತಿದ್ದಾರೆ. ಮುಖ್ಯಮಂತ್ರಿಗೆ ಸಚಿವರ ಮೇಲಾಗಲಿ, ಶಾಸಕರ ಮೇಲಾಗಲಿ ನಿಯಂತ್ರಣವೇ ಇಲ್ಲದೆ ನಿರ್ಮಾಣಗೊಂಡಿರುವ ಅರಾಜಕತೆಯೇ ಇಂದಿನ ದುಸ್ಥಿತಿಗೆ ಕಾರಣ' ಎಂದೂ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

'ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿ'

ಬೆಂಗಳೂರು: 'ಕೊರೊನಾ ಎರಡನೇ ಅಲೆ ಜನಸಾಮಾನ್ಯರನ್ನು ತತ್ತರಿಸಿ ಹೋಗುವಂತೆ ಮಾಡಿದೆ. ಜನರು ಹಾದಿ ಬೀದಿಯಲ್ಲಿ ಸಾಯುತ್ತಿದ್ದಾರೆ. ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಆಗ್ರಹಿಸಿದರು.

'ಸೋಂಕು ನಿಯಂತ್ರಿಸಲು ಸರ್ಕಾರದ ಬಳಿ ಪೂರ್ವಸಿದ್ಧತೆ ಇಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಕೋವಿಡ್ ಅನ್ನು ಸರ್ಕಾರ ಸರಿಯಾಗಿ ನಿರ್ವಹಿಸದಿದ್ದರೆ ಜನರ ಶಾಪ ತಟ್ಟಲಿದೆ. ನಮಗೆ ಔಷಧದ ಅವಶ್ಯ ಇದ್ದರೂ ನೀವು ಬೇರೆ ದೇಶಕ್ಕೆ ಕಳಿಸುತ್ತಿದ್ದೀರಿ. ನಮ್ಮ ಮನೆಗಳನ್ನು ಸುಟ್ಟು ಬೇರೆಯವರ ಮನೆ ಬೆಳಗಿಸುತ್ತಿದ್ದೀರಿ. ಔಷಧ, ಆಕ್ಸಿಜನ್ ಇಲ್ಲದಿರುವುದಕ್ಕೆ ಸರ್ಕಾರ ನೇರ ಹೊಣೆ' ಎಂದು ಆರೋಪಿಸಿದರು.

ಮತದಾನದಿಂದ ದೂರ ಉಳಿದ ಮುಲಾಯಂ

ಇಟಾವಾ, ಉತ್ತರ ಪ್ರದೇಶ: ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್ ಅವರು ಕೋವಿಡ್ ಹಿನ್ನೆಲೆಯಲ್ಲಿ ಕುಟುಂಬ ಸದಸ್ಯರ ಮನವಿಗೆ ಸ್ಪಂದಿಸಿ ಸೋಮವಾರ ಪಂಚಾಯಿತಿ ಚುನಾವಣೆಯ ಮತದಾನದಿಂದ ದೂರ ಉಳಿದರು.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಸಂಕ್ಷಿಪ್ತ ಸುದ್ದಿ

'ಕೆಂಪು ಪಟ್ಟಿ'ಗೆ ಭಾರತ: ಬ್ರಿಟನ್ ಸರ್ಕಾರ ತೀರ್ಮಾನ

ಲಂಡನ್: ಕೋವಿಡ್–19 ಪ್ರಯಾಣ ಕುರಿತ ಕೆಂಪು ಪಟ್ಟಿಗೆ ಬ್ರಿಟನ್ ಸೋಮವಾರ ಭಾರತವನ್ನು ಸೇರಿಸಿದ್ದು, ಈ ದೇಶಕ್ಕೆ ಎಲ್ಲ ರೀತಿಯ ಸಂಚಾರವನ್ನು ರದ್ದುಪಡಿಸಿದೆ.

ಭಾರತದಿಂದ ಮರಳುವ ಬ್ರಿಟನ್‌ನ ಎಲ್ಲ ಪ್ರಯಾಣಿಕರಿಗೆ 10 ದಿನದ ಕ್ವಾರಂಟೈನ್ ಅನ್ನೂ ಕಡ್ಡಾಯಪಡಿಸಿದೆ.

ಆರೋಗ್ಯ ಕಾರ್ಯದರ್ಶಿ ಮ್ಯಾಟ್ ಹ್ಯಾಂಕೊಕ್ ಅವರು ಈ ವಿಷಯ ದೃಢಪಡಿಸಿದ್ದು, 'ಅಂಕಿ ಅಂಶಗಳ ಪರಿಶೀಲನೆ ಮತ್ತು ಮುನ್ನೆಚ್ಚರಿಕೆಯ ಕ್ರಮವಾಗಿ ನಾವು ಈ ಕಠಿಣವಾದ ಅಥವಾ ತುಂಬ ಮುಖ್ಯವಾದ ತೀರ್ಮಾನ ಕೈಗೊಂಡಿದ್ದು, ಕೆಂಪು ಪಟ್ಟಿಗೆ ಭಾರತವನ್ನು ಸೇರಿಸಿದ್ದೇವೆ' ಎಂದು ತಿಳಿಸಿದ್ದಾರೆ.

ಬ್ರಿಟನ್ ಪ್ರಧಾನಿ ಭಾರತ ಭೇಟಿ ರದ್ದು

ಲಂಡನ್ (ಪಿಟಿಐ): ಭಾರತದಲ್ಲಿ ಕೋವಿಡ್ ತೀವ್ರವಾಗಿ ಹಬ್ಬುತ್ತಿರುವ ಕಾರಣ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಮುಂದಿನ ವಾರದ ಭಾರತ ಭೇಟಿ ರದ್ದಾಗಿದೆ.

'ಈ ತಿಂಗಳ ಕೊನೆಯಲ್ಲಿ ಭಾರತ–ಬ್ರಿಟನ್‌ನ ಮಹತ್ವಕಾಂಕ್ಷಿ ಪಾಲುದಾರಿಕೆಯ ಬಗ್ಗೆ ಬೋರಿಸ್ ಅವರು ಪ್ರಧಾನಿ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಅದಲ್ಲದೆ ಉಭಯ ರಾಷ್ಟ್ರಗಳು ನಿರಂತರ ಸಂಪರ್ಕದಲ್ಲಿ ಇರಲಿವೆ. ಈ ವರ್ಷದ ಅಂತ್ಯದಲ್ಲಿ ನಾಯಕರು ವೈಯಕ್ತಿಕವಾಗಿ ಭೇಟಿಯಾಗುವ ನಿರೀಕ್ಷೆಯಲ್ಲಿದ್ದಾರೆ' ಎಂದು ಬ್ರಿಟಿಷ್ ಮತ್ತು ಭಾರತ ಸರ್ಕಾರಗಳ ಪರವಾಗಿ ಹೊರಡಿಸಲಾದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

19-4-2021

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1390 (1375)
ಪಾಮ್ ವಾರದ ಡೆಲಿವರಿ	1298 (1308)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,350 (47,050)
ಬೆಳ್ಳಿ ಕೆ.ಜಿ 68,850 (69,000)

ಆವರಣದಲ್ಲಿ ಶನಿವಾರದ ಧಾರಣೆ

₹ 3000 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಕೊಚ್ಚಿ (ಪಿಟಿಐ): ಮೀನು ಹಿಡಿಯಲು ಬಳಸುತ್ತಿದ್ದ ಬೃಹತ್ ದೋಣಿಯಿಂದ ₹ 3000 ಕೋಟಿ ಮೌಲ್ಯದ ಮಾದಕವಸ್ತುವನ್ನು ನೌಕಾಪಡೆ ಸಿಬ್ಬಂದಿ ಅರಬ್ಬಿ ಸಮುದ್ರದಲ್ಲಿ ಜಪ್ತಿ ಮಾಡಿದ್ದಾರೆ. ಈ ದೋಣಿ ಶ್ರೀಲಂಕಾದ್ದಾಗಿದ್ದು, ಪಾಕಿಸ್ತಾನದ ಮರ್ಕನ್ ತೀರಭಾಗದಿಂದ ಬರುತ್ತಿತ್ತು ಎಂದು ರಕ್ಷಣಾ ಇಲಾಖೆ ವಕ್ತಾರರು ತಿಳಿಸಿದ್ದಾರೆ. ಅರಬ್ಬಿ ಸಮುದ್ರದಲ್ಲಿ ಗಸ್ತು ಕಾರ್ಯದಲ್ಲಿದ್ದ ನೌಕಾಪಡೆಯ ಹಡಗು 'ಸುವರ್ಣ'ದ ಸಿಬ್ಬಂದಿ, ಶಂಕಾಸ್ಪದ ದೋಣಿಯನ್ನು ತಪಾಸಣೆ ನಡೆಸಿದಾಗ ಕೃತ್ಯ ಗೊತ್ತಾಗಿದೆ. ದೋಣಿಯಲ್ಲಿದ್ದ ಶ್ರೀಲಂಕಾದ ಐವರು ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1400
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಚಿತ್ರದುರ್ಗ	
ಆಪಿ	40719-41129
ಬೆಟ್ಟೆ	33310-33779
ಕೆಂಪುಗೋಟು	29000-29400
ರಾಶಿ	40239-40669
ಕುಂದಾಪುರ	
ಹಳೆಚಾಲಿ	45000-49000
ಹೊಸಚಾಲಿ	35000-40000
ಕುಮಟ	
ಚಿಪ್ಪು	26869-29509
ಕೋಕ	18099-28509
ಫ್ಯಾಕ್ಟರಿ	13099-15969
ಹಳೆಚಾಲಿ	38569-41099
ಹೊಸಚಾಲಿ	34569-36399
ಸಿದ್ದಾಪುರ	
ಬಿಳಿಗೋಟು	20619-30499
ಚಾಲಿ	34099-37099
ಕೋಕ	20119-30739
ಕೆಂಪುಗೋಟು	20469-30289
ರಾಶಿ	39099-41599
ತಟ್ಟಿಬೆಟ್ಟೆ	31109-39089
ಯಲ್ಲಾಪುರ	
ಬಿಳಿಗೋಟು	24899-31899
ಚಾಲಿ	32299-39310
ಕೋಕ	18899-29499
ಕೆಂಪುಗೋಟು	26899-31899
ರಾಶಿ	39899-44869
ತಟ್ಟಿಬೆಟ್ಟೆ	33669-38399
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	40009-44299
ಗೊರಬಲು	17000-31519
ರಾಶಿ	36099-41999
ಸರಕು	48619-76002
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ	244-385
ದ್ವಿತಳಿ	280-451

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10050	---	9900	--- ಸೆಂಟ್ಸ್
ಎಸಿ	4060	---	3850	
ಆರ್‌ಪಿ	5100	---	5125	ಲಂಡನ್
ಆರ್‌ಸಿ	2900	---	2875	--- ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Finance
ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಭವಿಷ್ಯ
Astrology
★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ,25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

ಉದ್ಯೋಗಾವಕಾಶ
General
TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವಾಹನ
Four Wheelers Selling
Others

ಯುಗಾದಿ ಹಬ್ಬಕ್ಕೆ ಕೊಳ್ಳಿರಿ ನವ ಚೈತನ್ಯದ ವಾಹನಗಳು
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

₹25,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹25,000/-* ದವರೆಗೆ
Intra V-10 ಮತ್ತು V-30 A/C ಮಾದರಿಯಲ್ಲೂ ಲಭ್ಯ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 7259784441
Bangalore/Mysore 95389 35533
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದೆಹಲಿ, ರಾಜಸ್ಥಾನದಲ್ಲಿ ಲಾಕ್‌ಡೌನ್: ಕೇರಳ, ಪಂಜಾಬ್‌ನಲ್ಲಿ ಕಠಿಣ ನಿರ್ಬಂಧ ವಿಧಿಸಲು ನಿರ್ಧಾರ

ಕೋವಿಡ್ ನಿಯಂತ್ರಣಕ್ಕೆ ಹಲವು ಕ್ರಮ

ದೆಹಲಿಯಲ್ಲಿ ಲಾಕ್‌ಡೌನ್ ಘೋಷಣೆಯಾದ ಬಳಿಕ ಐಎನ್‌ಎ ಮಾರ್ಕೆಟ್‌ನಲ್ಲಿರುವ ಮದ್ಯದ ಅಂಗಡಿಯ ಮುಂದೆ ಖರೀದಿಗಾಗಿ ಭಾರಿ ಸಂಖ್ಯೆಯಲ್ಲಿ ಜನರು ಮುಗಿಬಿದ್ದರು – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೇಶದ ಹಲವು ರಾಜ್ಯಗಳಲ್ಲಿ ಕೋವಿಡ್‌ನ ಎರಡನೇ ಅಲೆಯ ಪ್ರತಾಪ ಹೆಚ್ಚಾಗುತ್ತಿದ್ದು, ಸರ್ಕಾರಗಳು ಕಠಿಣ ನಿರ್ಬಂಧಗಳನ್ನು ವಿಧಿಸಲು ಮುಂದಾಗಿವೆ.

ಈಗಾಗಲೇ, ರಾತ್ರಿ ಕರ್ಫ್ಯೂ ಮುಂತಾದ ಕ್ರಮಗಳನ್ನು ಕೈಗೊಂಡಿರುವ ರಾಜ್ಯಗಳು, ಅದರ ಅವಧಿಯನ್ನು ವಿಸ್ತರಿಸುವುದು ಮತ್ತು ಇನ್ನಷ್ಟು ಕಠಿಣ ನಿಯಮಗಳನ್ನು ಜಾರಿಮಾಡಲು ಮುಂದಾಗಿವೆ. ದೆಹಲಿಯಲ್ಲಿ ಮಂಗಳವಾರ ರಾತ್ರಿಯಿಂದ ಜಾರಿಯಾಗುವಂತೆ ಆರು ದಿನಗಳ ಅವಧಿಗೆ ಲಾಕ್‌ಡೌನ್ ಘೋಷಿಸಲಾಗಿದೆ.

- ಮಂಗಳವಾರ ರಾತ್ರಿಯಿಂದ ಜಾರಿಯಾಗುವಂತೆ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಜಾರಿ ಮಾಡಲು ಕೇರಳ ಸರ್ಕಾರ ತೀರ್ಮಾನಿಸಿದೆ. ಮುಖ್ಯಕಾರ್ಯದರ್ಶಿ ಡಾ. ವಿ.ಪಿ. ಜ್ಯೋತಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತಮಟ್ಟದ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ರಾತ್ರಿ 9ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ.
- ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದರೂ, ರಾಜ್ಯದಲ್ಲಿ ನಿಗದಿತ ದಿನಾಂಕಗಳಂದೇ ಎಸ್‌ಎಸ್‌ಎಲ್‌ಸಿ ಹಾಗೂ 12ನೇ ತರಗತಿಯ ಪರೀಕ್ಷೆಗಳನ್ನು ನಡೆಸಲು ಕೇರಳ ಸರ್ಕಾರ ತೀರ್ಮಾನಿಸಿದೆ. 'ಪರೀಕ್ಷೆ ಸಂದರ್ಭದಲ್ಲಿ ಮಕ್ಕಳ ಸುರಕ್ಷತೆಗಾಗಿ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ಶಿಕ್ಷಣ ಇಲಾಖೆ ಹೇಳಿದೆ.
- 'ಪ್ರಸಕ್ತ ಜಾರಿ ಮಾಡಲಾಗಿರುವ ನಿರ್ಬಂಧಗಳು ಕೋವಿಡ್ ತಡೆಯುವ ದಿಸೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪರಿಣಾಮ ಉಂಟುಮಾಡಿಲ್ಲ. ಆದ್ದರಿಂದ, ರಾಜ್ಯದಲ್ಲಿ ಕಠಿಣ ಲಾಕ್‌ಡೌನ್ ಜಾರಿಮಾಡುವ ವಿಚಾರದಲ್ಲಿ ಒಂದೆರಡು ದಿನಗಳಲ್ಲಿ ಮುಖ್ಯಮಂತ್ರಿ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಮಹಾರಾಷ್ಟ್ರದ ಸಚಿವ ವಿಜಯ್ ವಡೆಟ್ಟಿವರ್ ತಿಳಿಸಿದ್ದಾರೆ.
- ರಾತ್ರಿ ಕರ್ಫ್ಯೂ ಅವಧಿಯನ್ನು ಹೆಚ್ಚಿಸುವುದೂ ಸೇರಿದಂತೆ ಮಂಗಳವಾರದಿಂದ ರಾಜ್ಯದಲ್ಲಿ ಇನ್ನಷ್ಟು ಬಿಗಿ ನಿರ್ಬಂಧಗಳನ್ನು ಜಾರಿಗೊಳಿಸುವುದಾಗಿ ಪಂಜಾಬ್ ಸರ್ಕಾರ ಹೇಳಿದೆ. ಚಿತ್ರಮಂದಿರ, ಜಿಮ್, ಸ್ಪಾ, ಕೋಚಿಂಗ್ ಕೇಂದ್ರ, ಕ್ರೀಡಾ ಸಂಕೀರ್ಣಗಳು ಏಪ್ರಿಲ್ ಅಂತ್ಯದವರೆಗೂ ಮುಚ್ಚಿರುತ್ತವೆ. ರಾತ್ರಿ ಕರ್ಫ್ಯೂ ಅವಧಿಯನ್ನು ಒಂದು ಗಂಟೆ ಹೆಚ್ಚಿಸಲಾಗಿದ್ದು, ಅದು ರಾತ್ರಿ 8ರಿಂದ ಬೆಳಿಗ್ಗೆ 5ಗಂಟೆಯವರೆಗೆ ಜಾರಿಯಲ್ಲಿರುತ್ತದೆ ಎಂದು ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹೇಳಿದ್ದಾರೆ
- ಮಣಿಪುರ ಸರ್ಕಾರವು 10 ಹಾಗೂ 12ನೇ ತರಗತಿಯ ಪರೀಕ್ಷೆಗಳನ್ನು ಅನಿರ್ದಿಷ್ಟಾವಧಿ ಮುಂದೂಡಿದೆ. ಮೇ 5ರಿಂದ ಈ ಪರೀಕ್ಷೆಗಳು ನಡೆಯಲಿದ್ದವು. ಎಲ್ಲಾ ತರಗತಿಗಳು, ಕೋಚಿಂಗ್ ಕ್ಲಾಸ್‌ಗಳನ್ನು ರದ್ದುಪಡಿಸಲಾಗಿದೆ. ಹಾಸ್ಟೆಲ್‌ಗಳು, ಪೇಯಿಂಗ್ ಗೆಸ್ಟ್ ಕೇಂದ್ರಗಳನ್ನು ತಕ್ಷಣದಿಂದಲೇ ಮುಚ್ಚಲು ಸೂಚಿಸಲಾಗಿದೆ. ಆದಷ್ಟು ಶೀಘ್ರದಲ್ಲಿ ಆನ್‌ಲೈನ್ ತರಗತಿಗಳನ್ನು ಪುನಃ ಆರಂಭಿಸಲಾಗುವುದು ಎಂದು ಸರ್ಕಾರ ಹೇಳಿದೆ.
- ಕೋವಿಡ್‌ನ ಎರಡೂ ಅಲೆಗಳ ಸಂದರ್ಭದಲ್ಲಿ ಸೋಂಕಿಗೆ ಒಳಗಾದವರಲ್ಲಿ ಶೇ 70ಕ್ಕೂ ಹೆಚ್ಚು ಜನರು 40 ವರ್ಷ ವಯಸ್ಸಿಗೆ ಮೇಲ್ಪಟ್ಟವರು ಎಂದು ವೈದ್ಯರು ಹೇಳಿದ್ದಾರೆ. 'ಎರಡನೇ ಅಲೆಯಲ್ಲಿ ರೋಗಲಕ್ಷಣಗಳು ಕಾಣಿಸದಿರುವ ಸೋಂಕಿತರ ಪ್ರಮಾಣವು ಹೆಚ್ಚಾಗಿದೆ. ಆಸ್ಪತ್ರೆಗೆ ದಾಖಲಾದ ರೋಗಿಗಳಲ್ಲಿ ಮೊದಲ ಮತ್ತು ಎರಡನೇ ಅಲೆಗಳ ನಡುವಿನ ಸಾವುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೆ, ಎರಡನೇ ಅಲೆಯಲ್ಲಿ ರೋಗಿಗಳಿಗೆ ಆಮ್ಲಜನಕದ ಅವಶ್ಯಕತೆ ಹೆಚ್ಚಾಗಿದೆ ಮತ್ತು ವೆಂಟಿಲೇಟರ್ ಅವಶ್ಯಕತೆ ಹೆಚ್ಚಿಲ್ಲ. ಮೊದಲ ಅಲೆಯಲ್ಲಿ ಶೇ 41.5ರಷ್ಟು ಆಮ್ಲಜನಕದ ಅವಶ್ಯಕತೆ ಇದ್ದರೆ ಎರಡನೇ ಅಲೆಯಲ್ಲಿ ಶೇ 54.5ರಷ್ಟು ಮಂದಿಗೆ ಆಮ್ಲಜನಕದ ಅವಶ್ಯಕತೆ ಉಂಟಾಗಿದೆ' ಎಂದು ಐಸಿಎಂಆರ್‌ನ ಮಹಾನಿರ್ದೇಶಕ ಬಲರಾಂ ಭಾರ್ಗವ ತಿಳಿಸಿದ್ದಾರೆ.
- ಜೈಲಿನಲ್ಲಿ ಕೈದಿಗಳ ಸಂಖ್ಯೆ ಮಿತಿಗಿಂತ ಹೆಚ್ಚಿರುವುದರಿಂದ, ಕೋವಿಡ್ ವೇಗವಾಗಿ ಹರಡುವ ಸಾಧ್ಯತೆ ಇದ್ದು, ಕೈದಿಗಳನ್ನು ಮಧ್ಯಂತರ ಜಾಮೀನಿನ ಮೇಲೆ ಅಥವಾ ಪೆರೋಲ್ ಮೇಲೆ ಬಿಡುಗಡೆ ಮಾಡಲು ನಿರ್ದೇಶನ ನೀಡಬೇಕು ಎಂದು ದೆಹಲಿ ಹೈಕೋರ್ಟ್‌ಗೆ ಸೋಮವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ಸಲ್ಲಿಸಲಾಗಿದೆ. ತಿಹಾರ್ ಜೈಲಿನ 59 ಕೈದಿಗಳು ಮತ್ತು 7 ಸಿಬ್ಬಂದಿಗೆ ಕಳೆದವಾರ ಕೋವಿಡ್ ದೃಢಪಟ್ಟಿತ್ತು. ಈಗ ಸೋಂಕಿತ ಕೈದಿಗಳ ಸಂಖ್ಯೆಯು 117 ಹಾಗೂ ಸಿಬ್ಬಂದಿಯ ಸಂಖ್ಯೆ 14ಕ್ಕೆ ಹೆಚ್ಚಿದೆ ಎಂದು ಅರ್ಜಿದಾರ ವಕೀಲ ಆರ್.ಕೆ. ಗೊಸಾಯಿನ್ ಉಲ್ಲೇಖಿಸಿದ್ದಾರೆ.
- ಕೋವಿಡ್ ವಿರುದ್ಧ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವ ವಿಚಾರವಾಗಿ ಚರ್ಚಿಸಲು ಸಂಸತ್ತಿನ ಎರಡು ದಿನಗಳ ತುರ್ತು ಅಧಿವೇಶನವನ್ನು ಕರೆಯುವಂತೆ ಕಾಂಗ್ರೆಸ್ ಮುಖಂಡ ಮನೀಶ್ ತಿವಾರಿ ಅವರು ರಾಷ್ಟ್ರಪತಿಗೆ ಮನವಿ ಮಾಡಿದ್ದಾರೆ. 'ದೇಶದಲ್ಲಿ ಭಾರಿ ದುರಂತವೊಂದು ತೆರೆದುಕೊಳ್ಳುತ್ತಿದೆ. ಔಷಧ, ಬೆಡ್, ಆಮ್ಲಜನಕದ ಕೊರತೆ ತೀವ್ರವಾಗಿದೆ. ಬಿಜೆಪಿ ಮುಖಂಡರು ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಮುಳುಗಿದ್ದಾರೆ. ಇಂಥ ಸಂದರ್ಭದಲ್ಲಿ ರಾಷ್ಟ್ರಪತಿ ತಮ್ಮ ವಿಶೇಷ ಅಧಿಕಾರವನ್ನು ಬಳಸಿಕೊಂಡು ವಿಶೇಷ ಅಧಿವೇಶನ ಕರೆಯಬೇಕು' ಎಂದು ಹೇಳಿದ್ದಾರೆ.
- ರೆಮ್‌ಡಿಸಿವಿರ್ ಹಾಗೂ ಇತರ ಔಷಧಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವವರನ್ನು ಪತ್ತೆಮಾಡಿ, ಅಂಥವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಕ್ರಮ ಕೈಗೊಳ್ಳುವಂತೆ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೂಚಿಸಿದ್ದಾರೆ.

ನ್ಯಾಯಾಧೀಶ, ಶಾಸಕ ಸಾವು

ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಬಿಹಾರದ ಮೇವಾ ಕ್ಷೇತ್ರದ ಜೆಡಿಯು ಶಾಸಕ ಲಾಲ್ ಚೌಧುರಿ (68) ಅವರು ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ನಿಧನರಾಗಿದ್ದಾರೆ. ಕಳೆದ ನವೆಂಬರ್‌ನಲ್ಲಿ ಇವರು ರಾಜ್ಯದ ಶಿಕ್ಷಣ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದರು. ಆದರೆ, ಭ್ರಷ್ಟಾಚಾರದ ಆರೋಪಗಳಿರುವವರನ್ನು ಸಚಿವರನ್ನಾಗಿಸಿದ್ದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಮೂರೇ ದಿನಗಳಲ್ಲಿ ರಾಜೀನಾಮೆ ನೀಡಬೇಕಾಗಿ ಬಂದಿತ್ತು.

ದೆಹಲಿಯ ಜಿಲ್ಲಾ ನ್ಯಾಯಾಧೀಶ ಕೊವ್ವೈ ವೇಣುಗೋಪಾಲ್ (47) ಅವರು ಕೋವಿಡ್‌ನಿಂದಾಗಿ ಸೋಮವಾರ ಮೃತಪಟ್ಟಿದ್ದಾರೆ. ಇವರನ್ನು ಭಾನುವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು.



ರೆಮ್‌ಡಿಸಿವಿರ್ ದಾಸ್ತಾನು: ಬಿಜೆಪಿ–ಸೇನಾ ವಾಕ್ಸಮರ ತೀವ್ರ

ಮುಂಬೈ: (ಪಿಟಿಐ): ರೆಮ್‌ಡಿಸಿವಿರ್ ಔಷಧವು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದರ ಬಗ್ಗೆ ವಿವಿಧ ರಾಜ್ಯಗಳಲ್ಲಿ ಹಲವರನ್ನು ಬಂಧಿಸಲಾಗಿದೆ. ಈ ವಿಚಾರದಲ್ಲಿ ರಾಜಕೀಯ ಪಕ್ಷಗಳ ನಡುವೆ ಕೆಸರೆರಚಾಟ ಮುಂದುವರಿದಿದೆ.

'ರೆಮ್‌ಡಿಸಿವಿರ್ ಅನ್ನು ಮಹಾರಾಷ್ಟ್ರದಲ್ಲಿ ಮಾರಾಟ ಮಾಡದಂತೆ ಕೇಂದ್ರ ಸರ್ಕಾರವು ಕೆಲವು ತಯಾರಿಕಾ ಕಂಪನಿಗಳ ಮೇಲೆ ಒತ್ತಡ ಹೇರುತ್ತಿದೆ' ಎಂದು ಮಹಾರಾಷ್ಟ್ರದ ಸಚಿವ, ಎನ್‌ಸಿಪಿ ವಕ್ತಾರ ನವಾಬ್ ಮಲಿಕ್ ಅವರು ಶನಿವಾರ ಆರೋಪ ಮಾಡಿದ್ದರು. ಇದನ್ನು ವಿರೋಧಿಸಿದ ಬಿಜೆಪಿ ನಾಯಕರು, 'ಎನ್‌ಸಿಪಿ ಸುಳ್ಳು ಆರೋಪ ಮಾಡುತ್ತಿದೆ, ಪ್ರಕರಣಕ್ಕೆ ರಾಜಕೀಯ ಬಣ್ಣ ನೀಡಲು ಶ್ರಮಿಸುತ್ತಿದೆ' ಎಂದಿದ್ದರು.

ಆದರೆ ರಾತ್ರಿವೇಳೆಗೆ, ರೆಮ್‌ಡಿಸಿವಿರ್‌ನ ಸಾವಿರಾರು ಡೋಸ್‌ಗಳನ್ನು ಸಂಗ್ರಹಿಸಿಟ್ಟಿದ್ದ, ದಮನ್ ಮೂಲದ ಔಷಧ ಕಂಪನಿ ಬ್ರೂಕ್ ಫಾರ್ಮಾದ ನಿರ್ದೇಶಕ ರಾಜೇಶ್ ಡೊಕಾನಿಯ ಅವರನ್ನು ಮುಂಬೈ ಪೊಲೀಸರು ಠಾಣೆಗೆ ಕರೆಸಿ ವಿಚಾರಣೆಗೆ ಒಳಪಡಿಸಿದ್ದರು. ರೆಮ್‌ಡಿಸಿವಿರ್ ರಫ್ತನ್ನು ನಿಷೇಧಿಸಲಾಗಿದ್ದರೂ, ಈ ಕಂಪನಿಯು ಕನಿಷ್ಠ 60,000 ಡೋಸ್‌ಗಳನ್ನು ವಿದೇಶಕ್ಕೆ ರಫ್ತು ಮಾಡುವ ಸಿದ್ಧತೆ ಮಾಡಿಕೊಂಡಿತ್ತು. ಅದರ ಮಾಹಿತಿ ಲಭಿಸಿದ ಕೂಡಲೇ ಅವರನ್ನು ಕರೆದು ವಿಚಾರಣೆಗೆ ಒಳಪಡಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಕ್ರಮವನ್ನು ಖಂಡಿಸಿದ ಬಿಜೆಪಿಯು, 'ಮಹಾರಾಷ್ಟ್ರದ ರೋಗಿಗಳಿಗೆ ನೀಡುವ ಸಲುವಾಗಿ ಬಿಜೆಪಿಯೇ ಇಷ್ಟೊಂದು ರೆಮ್‌ಡಿಸಿವಿರ್‌ನ ವ್ಯವಸ್ಥೆ ಮಾಡಿತ್ತು. ಕಂಪನಿಯ ನಿರ್ದೇಶಕರ ವಿಚಾರಣೆ ನಡೆಸುವ ಮೂಲಕ ಪಿಡುಗಿನ ಸಂದರ್ಭದಲ್ಲೂ ಮಹಾರಾಷ್ಟ್ರ ಸರ್ಕಾರ ರಾಜಕೀಯ ಮಾಡಿದೆ' ಎಂದು ಆರೋಪಿಸಿತ್ತು.

ಡೊಕಾನಿಯಾ ಅವರ ವಿಚಾರಣೆಯ ನಂತರ, ಬಿಜೆಪಿ ಮುಖಂಡರಾದ ದೇವೇಂದ್ರ ಫಡಣವೀಸ್ ಹಾಗೂ ಪ್ರವೀಣ ದಾರೇಕರ್ ಅವರು ಪೊಲೀಸ್ ಠಾಣೆಗೆ ಧಾವಿಸಿದ್ದು ಈ ವಿಚಾರದಲ್ಲಿ ವಿವಾದ ಸೃಷ್ಟಿಗೆ ಕಾರಣವಾಗಿದೆ.

'ಬಿಜೆಪಿಯ ರಾಜ್ಯ ಘಟಕವು ಜನರಿಗಾಗಿ ರೆಮ್‌ಡಿಸಿವಿರ್‌ನ ವ್ಯವಸ್ಥೆ ಮಾಡಿತ್ತು. ಬ್ರೂಕ್ ಸಂಸ್ಥೆಯನ್ನು ನಾಲ್ಕು ದಿನಗಳ ಹಿಂದೆ ಸಂಪರ್ಕಿಸಿದ್ದೆವು. ಆದರೆ ಅನುಮತಿ ಲಭಿಸದ ಕಾರಣ ಸರಬರಾಜು ಮಾಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಕೇಂದ್ರದ ಸಚಿವರ ಮಧ್ಯಪ್ರವೇಶದಂದ ಅನುಮತಿ ಲಭಿಸಿತ್ತು' ಎಂದು ಫಡಣವೀಸ್ ಹೇಳಿದ್ದರು. ಈ ವಾದವನ್ನು ಶಿವಸೇನಾ ಒಪ್ಪಲಿಲ್ಲ.

'ಪೊಲೀಸರು ಸರಿಯಾದ ಕೆಲಸ ಮಾಡಿದ್ದಾರೆ, ರಾಜ್ಯ ಸರ್ಕಾರ, ಸ್ಥಳೀಯ ಆಡಳಿತ ಅಥವಾ ಪೊಲೀಸರಿಗೆ ಯಾವುದೇ ಮಾಹಿತಿ ನೀಡದೆ ಬಿಜೆಪಿ ಮುಖಂಡರು ಲಕ್ಷಾಂತರ ಡೋಸ್‌ಗಳಷ್ಟು ಜೀವರಕ್ಷಕ ಔಷಧ ಖರೀದಿಸಲು ಸಾಧ್ಯವೇ' ಎಂದು ಮಹಾರಾಷ್ಟ್ರದ ಸಚಿವ ಜಯಂತ ಪಾಟೀಲ ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

'ಔಷಧವನ್ನು ಸರ್ಕಾರಕ್ಕೆ ಮಾತ್ರ ಮಾರಾಟಮಾಡಬೇಕು ಎಂಬ ನಿಯಮ ಇರುವಾಗ ಫಡಣವೀಸ್ ಅವರು ಗುಜರಾತ್‌ನಿಂದ ರೆಮ್‌ಡಿಸಿವಿರ್ ಔಷಧವನ್ನು ಖರೀದಿಸಲು ಹೇಗೆ ಸಾಧ್ಯ? ಬಿಜೆಪಿಯು ₹ 4.75 ಕೋಟಿ ಮೌಲ್ಯದ ರೆಮ್‌ಡಿಸಿವಿರ್ ಅನ್ನು ಪಕ್ಷದ ಕಚೇರಿಯಲ್ಲಿ ಇಟ್ಟುಕೊಂಡಿದ್ದೇಕೆ' ಎಂದು ಹೋರಾಟಗಾರ ಸಾಕೇತ್ ಗೋಖಲೆ ಪ್ರಶ್ನಿಸಿದ್ದಾರೆ.

ಬಿಜೆಪಿ ಮುಖಂಡರು ಔಷಧ ಸಂಸ್ಥೆಯೊಂದರ ನಿರ್ದೇಶಕರ ರಕ್ಷಣೆಗೆ ಧಾವಿಸುತ್ತಿರುವುದೇಕೆ ಎಂದು ಮಲಿಕ್ ಪ್ರಶ್ನಿಸಿದ್ದಾರೆ. ಬಿಜೆಪಿಯ ನಡೆಯನ್ನು ಎಎಪಿಯೂ ಟೀಕಿಸಿದೆ.

ಮನಮೋಹನ್, ಕೆಸಿಆರ್‌ಗೆ ಕೋವಿಡ್

ಪ್ರಜಾವಾಣಿ ವಾರ್ತೆ

ನವದೆಹಲಿ/ ಹೈದರಾಬಾದ್: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಕೋವಿಡ್ ದೃಢಪಟ್ಟಿದೆ. 88 ವರ್ಷದ ಸಿಂಗ್ ಅವರನ್ನು ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆಗೆ (ಏಮ್ಸ್) ಸೋಮವಾರ ದಾಖಲಿಸಲಾಗಿದೆ.

ಸಿಂಗ್ ಅವರಿಗೆ ಸ್ವಲ್ಪ ಜ್ವರ ಇತ್ತು. ಹಾಗಾಗಿ ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರಿಗೂ ಕೋವಿಡ್ ದೃಢಪಟ್ಟಿದೆ. ಅವರಿಗೆ ಸೌಮ್ಯ ಸ್ವರೂಪದ ಲಕ್ಷಣಗಳು ಮಾತ್ರ ಇವೆ. ಹಾಗಾಗಿ, ಅವರು ತಮ್ಮ ತೋಟದ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ. ತೆಲಂಗಾಣ ಮುಖ್ಯಕಾರ್ಯದರ್ಶಿ ಸೋಮೇಶ್ ಕುಮಾರ್ ಅವರಿಗೂ ಕೆಲ ದಿನಗಳ ಹಿಂದೆ ಕೋವಿಡ್ ಬಂದಿತ್ತು.

ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಸಿಗದ ಆಮ್ಲಜನಕ; ವಿವಿಧ ರಾಜ್ಯಗಳಲ್ಲಿ ಅಭಾವ

ಆಮ್ಲಜನಕ ಲಭ್ಯತೆ ಪರಿಶೀಲಿಸಿ: ಹೈಕೋರ್ಟ್

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರುತ್ತಿರುವ ಕಾರಣ ವಿವಿಧ ರಾಜ್ಯಗಳಲ್ಲಿ ಆಮ್ಲಜನಕ ಸಿಲಿಂಡರ್ ಲಭ್ಯತೆ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಸೋಮವಾರ ಸೂಚನೆ ನೀಡಿದೆ.

ಆಮ್ಲಜನಕ ಕೊರತೆ ಬಗ್ಗೆ ಆತಂಕ ವ್ಯಕ್ತವಾಗುತ್ತಿದ್ದು, ತುರ್ತಾಗಿ ಪೂರೈಸಲು ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದೆ. ಕೋವಿಡ್ ಪ್ರಕರಣಗಳು ಹೆಚ್ಚಿರುವ ಕಡೆಗಳಿಗೆ ಆಮ್ಲಜನಕ ಪೂರೈಕೆಯನ್ನು ಆದ್ಯತೆಯ ಮೇರೆಗೆ ಪೂರೈಸಬೇಕು ಎಂದು ಸೂಚಿಸಿದೆ.

ದೆಹಲಿಯ ಪ್ರತಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಲಭ್ಯವಿರುವ ಹಾಸಿಗೆಗಳ ವಿವರ ನೀಡುವಂತೆ ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರು ಸೂಚಿಸಿದರು. ಮಂಗಳವಾರ ಪ್ರಮಾಣಪತ್ರ ಸಲ್ಲಿಸಲು ತಿಳಿಸಲಾಗಿದೆ.

ದೆಹಲಿ ಆಸ್ಪತ್ರೆಗಳಿಗೆ ಆಮ್ಲಜನಕವನ್ನು ಪೂರೈಸುತ್ತಿದ್ದ ಐನಾಕ್ಸ್ ಸಂಸ್ಥೆಗೆ ನಿರ್ದೇಶನ ನೀಡಿರುವ ಕೋರ್ಟ್, ಸ್ಥಗಿತಗೊಂಡಿರುವ ಆಮ್ಲಜನಕ ಪೂರೈಕೆಯನ್ನು ತಕ್ಷಣವೇ ಆರಂಭಿಸಿ ಎಂದಿದೆ. ಶೀಘ್ರದಲ್ಲಿ ದೆಹಲಿಗೆ 140 ಟನ್ ಆಮ್ಲಜನಕ ಪೂರೈಸಲು ತಿಳಿಸಿದೆ.

ಆಸ್ಪತ್ರೆಗಳಲ್ಲಿ ಆಮ್ಲಜನಕ ಪೂರೈಕೆ ಮತ್ತು ಹಾಸಿಗೆಗಳ ಲಭ್ಯತೆ ಕುರಿತು ಕೇಂದ್ರವು ಕ್ರಮಗಳನ್ನು ಕೈಗೊಂಡಿದೆ ಎಂದು ಕೇಂದ್ರ ಸರ್ಕಾರದ ಪರ ವಕೀಲೆ ಮೋನಿಕಾ ಅರೋರಾ ತಿಳಿಸಿದರು. ಈ ಕುರಿತ ಮಾಹಿತಿಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಲಾಗುವುದು ಎಂದರು.

ಲಭ್ಯವಿರುವ ಸ್ಥಳಗಳಿಂದ ವೈದ್ಯಕೀಯ ಆಮ್ಲಜನಕ ತರುವುದಕ್ಕಾಗಿ ಖಾಲಿ ಆಮ್ಲಜನಕ ಟ್ಯಾಂಕರ್‌ಗಳನ್ನು ಹೊತ್ತ 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲು ನವಿ ಮುಂಬೈ ನಿಲ್ದಾಣದಲ್ಲಿ ಸೋಮವಾರ ಕಾಣಿಸಿಕೊಂಡಿತು – ಪಿಟಿಐ ಚಿತ್ರ

ಆಮ್ಲಜನಕ ಸಂಗ್ರಹಕ್ಕೆ ಒತ್ತು

ಮುಂಬೈ: ಕೋವಿಡ್ ರೋಗಿಗಳ ಚಿಕಿತ್ಸೆಗೆ ಬೇಕಾಗಿರುವ ಆಮ್ಲಜನಕ ಸಿಲಿಂಡರ್ ಸಂಗ್ರಹಿಸಲು ಮಹಾರಾಷ್ಟ್ರ ಸರ್ಕಾರ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಂಡಿದೆ.

ಮಹಾರಾಷ್ಟ್ರವು ದಿನಕ್ಕೆ 1,250 ಟನ್ ಆಮ್ಲಜನಕ ಉತ್ಪಾದನೆ ಸಾಮರ್ಥ್ಯ ಹೊಂದಿದೆ ಎಂದು ರಾಜ್ಯದ ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ. ರಾಜ್ಯವು ಭಿಲಾಯಿ ಮತ್ತು ಬಳ್ಳಾರಿಯಿಂದ 300 ಟನ್ ತರಿಸಿಕೊಳ್ಳುತ್ತಿದೆ. ರೈಲ್ವೆ ಮೂಲಕ ಇನ್ನಷ್ಟು ಆಮ್ಲಜನಕ ದಾಸ್ತಾನು ತರಿಸಿಕೊಳ್ಳಲಾಗುವುದು ಎಂದಿದ್ದಾರೆ.

'ನಾವು 1,800 ಟನ್‌ಗೆ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಉದ್ದೇಶವಿದೆ. ಹೆಚ್ಚಿನ ರೋಗಿಗಳು ಆಸ್ಪತ್ರೆ ಸೇರುತ್ತಿರುವುದರಿಂದ ಆಮ್ಲಜನಕದ ಸೌಲಭ್ಯಕ್ಕೆ ಬೇಡಿಕೆ ತೀವ್ರವಾಗಿ ಹೆಚ್ಚುತ್ತಿದೆ' ಎಂದು ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಟೋಪೆ ಹೇಳಿದರು.

ಪೂರೈಕೆಯಲ್ಲಿ ತಾರತಮ್ಯ ಆರೋಪ

ಜೈಪುರ: ಗುಜರಾತ್‌ಗೆ 1,200 ಟನ್ ಆಮ್ಲಜನಕವನ್ನು ಪೂರೈಸಲಾಗುತ್ತಿದ್ದು, ರಾಜಸ್ಥಾನಕ್ಕೆ ಕೇವಲ 124 ಟನ್ ದೊರೆತಿದೆ ಎಂದು ರಾಜಸ್ಥಾನ ಆರೋಗ್ಯ ಸಚಿವ ರಘು ಶರ್ಮಾ ಸೋಮವಾರ ಆರೋಪಿಸಿದ್ದಾರೆ.

ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಭಿವಾಡಿಯಲ್ಲಿರುವ ದ್ರವ ಆಮ್ಲಜನಕ ಘಟಕವನ್ನು ಉಲ್ಲೇಖಿಸಿ ಮಾತನಾಡಿದ ಸಚಿವರು, 'ಕಳೆದ ಬಾರಿ ಆಮ್ಲಜನಕದ ಕೊರತೆ ಇರಲಿಲ್ಲ. ಈ ಬಾರಿ ಹೆಚ್ಚಿನ ಆಮ್ಲಜನಕದ ಅಗತ್ಯವಿರುವಾಗ, ಕೇಂದ್ರವು ಎಲ್ಲಾ ವೈದ್ಯಕೀಯ ಆಮ್ಲಜನಕ ಘಟಕಗಳು ಹಾಗೂ ಪೂರೈಕೆ ಜಾಲವನ್ನು ಸ್ವಾಧೀನಪಡಿಸಿಕೊಂಡಿದೆ' ಎಂದು ಆರೋಪಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿ ಲಸಿಕೆ ಮತ್ತು ಆಮ್ಲಜನಕದ ಕೊರತೆಯಿದ್ದು, ಅವುಗಳ ಪೂರೈಕೆಗೆ ಕೇಂದ್ರ ಆದ್ಯತೆ ನೀಡಬೇಕು. ಅಗತ್ಯವಿದ್ದರೆ ಆಮದು ಮಾಡಿಕೊಳ್ಳಬೇಕು

ಮಾಯಾವತಿ, ಬಿಎಸ್‌ಪಿ ನಾಯಕಿ

ಚುನಾವಣಾ ಆಯೋಗಕ್ಕೆ ಮಮತಾ ಮರುಮನವಿ

ಕೊನೆಯ ಮೂರು ಹಂತದ ಮತದಾನ ಒಂದೇ ದಿನ ನಡೆಸಿ

ಜನತಂತ್ರದ ಹಬ್ಬ 2021

ದಕ್ಷಿಣ ದಿಂಜಾಪುರದಲ್ಲಿ ಮಂಗಳವಾರ ನಡೆದ ರೋಡ್ ಶೋನಲ್ಲಿ ಅಮಿತ್ ಶಾ ಅವರು ಸಾರ್ವಜನಿಕರ ಮೇಲೆ ಹೂವಿನ ದಳಗಳನ್ನು ಎರಚಿದರು. ಕೋವಿಡ್ ಸೋಂಕು ತಗಲುವ ಅಪಾಯದ ನಡುವೆಯೂ ಅಮಿತ್ ಶಾ ಅವರು ಹೂವಿನ ದಳಗಳನ್ನು ಎಸೆದಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ – ಪಿಟಿಐ ಚಿತ್ರ

ಚಕೂಲಿಯಾ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಕೊನೆಯ ಮೂರು ಹಂತದ ಮತದಾನವನ್ನು ಒಂದೇ ದಿನ ನಡೆಸಿ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಚುನಾವಣಾ ಆಯೋಗವನ್ನು ಕೋರಿಕೊಂಡಿದ್ದಾರೆ.

ಕೋವಿಡ್‌-19 ಪ್ರಕರಣಗಳು ವಿಪರೀತ ಪ್ರಮಾಣದಲ್ಲಿ ಏರಿಕೆ ಆಗುತ್ತಿರುವ ಕಾರಣ, ತಮ್ಮ ಮನವಿಯನ್ನು ಪರಿಗಣಿಸುವಂತೆ ಅವರು ಕೋರಿಕೊಂಡಿದ್ದಾರೆ. ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು, 'ಮುಂದಿನ ಎಲ್ಲಾ ಹಂತದ ಮತದಾನವನ್ನು ಒಂದೇ ದಿನ ಅಥವಾ ಎರಡು ದಿನದಲ್ಲಿ ಮುಗಿಸಿ. ಜನರ ಆರೋಗ್ಯದ ದೃಷ್ಟಿಯಿಂದಲಾದರೂ ಮತದಾನದ ದಿನಗಳ ಸಂಖ್ಯೆಯನ್ನು ಇಳಿಸಿ. ದಯವಿಟ್ಟು ಬಿಜೆಪಿ ಏನು ಹೇಳುತ್ತದೆ ಎಂಬುದನ್ನು ಆಧರಿಸಿ ನಿರ್ಧಾರ ತೆಗೆದುಕೊಳ್ಳಬೇಡಿ' ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಕೊನೆಯ ನಾಲ್ಕು ಹಂತದ ಮತದಾನವನ್ನು ಒಂದೇ ದಿನ ನಡೆಸಿ ಎಂದು ಮಮತಾ ಬ್ಯಾನರ್ಜಿ ಅವರು ಈ ಹಿಂದೆಯೂ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದರು. ಆದರೆ ಆಯೋಗವು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ.

ಕೋವಿಡ್ ಇರುವ ಕಾರಣ ರಾಜ್ಯದಲ್ಲಿ ಮುಂದಿನ ಪ್ರಚಾರ ಸಭೆಗಳ ಸಮಯವನ್ನು 20 ನಿಮಿಷಕ್ಕೆ ಇಳಿಸಿದ್ದೇವೆ. ಪ್ರಚಾರ ಸಭೆಗಳ ಸಂಖ್ಯೆಯನ್ನೂ ಕಡಿಮೆ ಮಾಡಿದ್ದೇವೆ. ಸಣ್ಣ-ಪುಟ್ಟ ಸಭೆಗಳನ್ನಷ್ಟೇ ನಡೆಸುತ್ತೇವೆ ಎಂದು ಮಮತಾ ಬ್ಯಾನರ್ಜಿ ಅವರು ಹೇಳಿದ್ದಾರೆ.

ಕಚ್ಚಾ ಬಾಂಬ್ ದಾಳಿ

ಉತ್ತರ 24 ಪರಗಣ ಜಿಲ್ಲೆಯ ಪಾನಿಹಾತಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸನ್ಮೋಯ್ ಬಂದೋಪಾಧ್ಯಾಯ ಅವರ ಮನೆಯ ಮೇಲೆ ಭಾನುವಾರ ತಡರಾತ್ರಿ ದುಷ್ಕರ್ಮಿಗಳು ಬಾಂಬ್ ದಾಳಿ ನಡೆಸಿದ್ದಾರೆ.

ಸನ್ಮೋಯ್ ಅವರ ಮನೆಗೆ ಸ್ವಲ್ಪ ಹಾನಿಯಾಗಿದೆ. ಆದರೆ ಯಾರಿಗೂ ಗಾಯಗಳಾಗಿಲ್ಲ. ಕೃತ್ಯಕ್ಕೆ ಸಂಬಂಧಿಸಿದಂತೆ ಒಬ್ಬನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚುನಾವಣಾ ಕಣದಲ್ಲಿ

- ಈಗ ನಡೆಯುತ್ತಿರುವ ಚುನಾವಣೆಯ ಮತ ಎಣಿಕೆಯಲ್ಲಿ ಎಲ್ಲಾ ಮತಯಂತ್ರಗಳ ಜತೆ ವಿವಿಪ್ಯಾಟ್ ಹೋಲಿಕೆ ಮಾಡಿ ನೋಡಲು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿ ಎಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಚುನಾವಣಾ ಪ್ರಕ್ರಿಯೆಯ ಮಧ್ಯೆ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ
- ಪಶ್ಚಿಮ ಬಂಗಾಳದ ವಿಧಾನಸಭಾ ಕ್ಷೇತ್ರಗಳಿಗೆ ಆರನೇ ಹಂತದಲ್ಲಿ ನಡೆಯಲಿರುವ ಮತದಾನದ ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರವು ಸೋಮವಾರ ಸಂಜೆ ಅಂತ್ಯವಾಗಿದೆ
- ಆರನೇ ಹಂತದಲ್ಲಿ ಮತದಾನ ನಡೆಯಲಿರುವ ಪಶ್ಚಿಮ ಬಂಗಾಳದ ಪೂರ್ವ ವರ್ಧಮಾನ್ ಮತ್ತು ವೀರ್‌ಭೂಮಿ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಚುನಾವಣಾ ಆಯೋಗವು ವರ್ಗಾವಣೆ ಮಾಡಿದೆ
- ಪಶ್ಚಿಮ ಬಂಗಾಳದ ವಿವಿಧೆಡೆ ಕೇಂದ್ರ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಹಲವು ರೋಡ್ ಶೋಗಳನ್ನು ನಡೆಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ಎರಡು ಪ್ರಚಾರ ಸಭೆ ನಡೆಸಿದ್ದಾರೆ

ನುಡಿ–ಕಿಡಿ

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂದು ಪಕ್ಷದ ನಾಯಕರಿಗೆ ಮನದಟ್ಟಾಗಿದೆ. ಪಶ್ಚಿಮ ಬಂಗಾಳದಲ್ಲಿ ಹೀನಾಯವಾಗಿ ಸೋಲುವ ಭಯದಿಂದಲೇ ರಾಹುಲ್ ಗಾಂಧಿ ಅವರು ಪ್ರಚಾರ ಸಭೆಗಳನ್ನು ರದ್ದುಪಡಿಸಿದ್ದಾರೆ

ರವಿಶಂಕರ್ ಪ್ರಸಾದ್
ಕೇಂದ್ರ ಸಚಿವ

ಚುನಾವಣಾ ಆಯೋಗವು ಬಿಜೆಪಿ ಹೇಳಿದಂತೆ ಕೇಳುತ್ತಿದೆ. ಬಿಜೆಪಿ ತನ್ನ ಪ್ರಚಾರ ಸಭೆಗಳನ್ನು ರದ್ದುಪಡಿಸುವುದಿಲ್ಲ. ಹೀಗಾಗಿಯೇ ಮತದಾನದ ದಿನಾಂಕವನ್ನು ಆಯೋಗ ಬದಲಿಸುತ್ತಿಲ್ಲ. ಗಲಭೆಕೋರ ಬಿಜೆಪಿಗೆ ಜನರ ಆರೋಗ್ಯದ ಬಗ್ಗೆ ಕಾಳಜಿ ಇಲ್ಲ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಚುನಾವಣೆಯನ್ನು ಚುನಾವಣಾ ಆಯೋಗವು ಸಂವಿಧಾನಬದ್ಧವಾಗಿ ನಡೆಸುತ್ತದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ನಾವು ಪಾಲಿಸುತ್ತಿದ್ದೇವೆ. ಚುನಾವಣೆ ಹೇಗೆ ಮತ್ತು ಯಾವಾಗ ನಡೆಯುತ್ತದೆ ಎಂಬುದನ್ನು ಚುನಾವಣಾ ಆಯೋಗ ನಿರ್ಧರಿಸುತ್ತದೆ, ಬಿಜೆಪಿ ಅಲ್ಲ

ಪಶ್ಚಿಮ ಬಂಗಾಳ ಬಿಜೆಪಿ ಘಟಕ


ಬಿಜೆಪಿ ಪ್ರಚಾರ ಸಭೆಗಳಲ್ಲಿ ಸಾವಿರಾರು ಜನರು ಭಾಗಿಯಾಗುವುದನ್ನು ನೋಡಿದ್ದೇವೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಅಲ್ಲಿ ಕಡೆಗಣಿಸಲಾಗುತ್ತಿದೆ. ಪ್ರಧಾನಿ ಅವರು ಪ್ರತಿದಿನ ನಾಲ್ಕು ಪ್ರಚಾರ ಸಭೆ ನಡೆಸುತ್ತಾರೆ

ಪಿ.ಚಿದಂಬರಂ, ಕಾಂಗ್ರೆಸ್ ನಾಯಕ

ಒಂದೇ ದಿನ 146 ಜನರ ಮರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಜೊತೆಗೆ ಸೋಂಕಿನ ತೀವ್ರತೆಯಿಂದ ಅಸ್ವಸ್ಥಗೊಳ್ಳುವವರ ಸಂಖ್ಯೆ ಕೂಡ ಏರಿಕೆ ಕಾಣುತ್ತಿದೆ. ಸೋಮವಾರ ಬೆಂಗಳೂರಿನಲ್ಲಿ 97 ಮಂದಿ ಸೇರಿದಂತೆ ರಾಜ್ಯದಲ್ಲಿ 146 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಕಳೆದ ವರ್ಷ ಅಕ್ಟೋಬರ್ ಬಳಿಕ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಇಳಿಮುಖ ಪಡೆದಿತ್ತು. ಈ ವರ್ಷ ಮಾರ್ಚ್ ತಿಂಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ ಮರಣ ಪ್ರಕರಣಗಳು ಬಹುತೇಕ ದಿನ ಒಂದಂಕಿಯಲ್ಲಿಯೇ ಇದ್ದವು. ಆದರೆ, ಈಗ ಆ ಸಂಖ್ಯೆ 150ರ ಗಡಿ ಸಮೀಪಿಸಿದ್ದು, ಮರಣ ಪ್ರಮಾಣ ದರ ಶೇ 0.92ಕ್ಕೆ ಏರಿಕೆಯಾಗಿದೆ. ಒಂದು ದಿನದ ಅವಧಿಯಲ್ಲಿ 101 ಮಂದಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗಿದ್ದಾರೆ. ಇದರಿಂದಾಗಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 721ಕ್ಕೆ ತಲುಪಿದೆ. ಪರಿಣಾಮ ಬೆಂಗಳೂರು ಸೇರಿದಂತೆ ಕೆಲವೆಡೆ ಐಸಿಯು ಹಾಸಿಗೆ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ಬೆಂಗಳೂರಿನಲ್ಲಿ 166 ಮಂದಿ ಐಸಿಯುನಲ್ಲಿದ್ದಾರೆ.

ಸೋಂಕಿತರಲ್ಲಿ ಹಾಸನದಲ್ಲಿ ಹನ್ನೊಂದು ಮಂದಿ, ಮೈಸೂರಿನಲ್ಲಿ ಎಂಟು ಮಂದಿ, ಬೆಂಗಳೂರು ಗ್ರಾಮಾಂತರ ಹಾಗೂ ಕಲಬುರ್ಗಿಯಲ್ಲಿ ತಲಾ ಆರು ಮಂದಿ, ಧಾರವಾಡದಲ್ಲಿ ಮೂವರು, ಯಾದಗಿರಿ, ಚಿಕ್ಕಬಳ್ಳಾಪುರ ಹಾಗೂ ಬೀದರ್‌ನಲ್ಲಿ ತಲಾ ಇಬ್ಬರು, ಬಳ್ಳಾರಿ, ಬೆಳಗಾವಿ, ಹಾವೇರಿ, ಕೊಡಗು, ಕೋಲಾರ, ರಾಮನಗರ, ತುಮಕೂರು, ಉತ್ತರ ಕನ್ನಡ ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇವರಲ್ಲಿ 26 ಮಂದಿ 50 ವರ್ಷದೊಳಗಿನವರಾಗಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 13,497ಕ್ಕೆ ಏರಿಕೆಯಾಗಿದೆ.

23 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ ತಲುಪಿದೆ. ಸೋಂಕು ದೃಢ ಪ್ರಮಾಣ ಶೇ 12.81ರಷ್ಟಿದೆ. ಬೆಂಗಳೂರಿನಲ್ಲಿ 9,618 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ತುಮಕೂರು (652), ಮೈಸೂರು (568), ಕಲಬುರ್ಗಿ (513), ಹಾಸನ (320), ಬೀದರ್ (318), ವಿಜಯಪುರ (302) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 11.76 ಲಕ್ಷ ದಾಟಿದೆ.

23ರಿಂದ ಮೈಸೂರಿನ ಚಿತ್ರಮಂದಿರಗಳು ಬಂದ್

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಏ.23ರಿಂದ ಮೈಸೂರಿನ ಚಿತ್ರಮಂದಿರಗಳನ್ನು (ಸಿಂಗಲ್ ಸ್ಕ್ರೀನ್) ಬಂದ್ ಮಾಡಲು, ಚಿತ್ರಮಂದಿರಗಳ ಮಾಲೀಕರು ನಿರ್ಧರಿಸಿದ್ದಾರೆ.

'ಮೈಸೂರು ನಗರದ ಎಲ್ಲಾ 11 ಥಿಯೇಟರ್‌ಗಳನ್ನು ಬಂದ್ ಮಾಡಲಾಗುತ್ತಿದೆ. ಕೆ.ಆರ್.ನಗರ, ನಂಜನಗೂಡು ನಗರದ ಥಿಯೇಟರ್‌ಗಳ ಮಾಲೀಕರು ಕೂಡ ಬಂದ್ ಮಾಡಲು ಮುಂದಾಗಿದ್ದಾರೆ' ಎಂದು ಮೈಸೂರು ನಗರ ಚಲನಚಿತ್ರ ಪ್ರದರ್ಶಕರ ಸಂಘದ ಕಾರ್ಯದರ್ಶಿ ಹಾಗೂ ಗಾಯತ್ರಿ ಚಿತ್ರಮಂದಿರದ ಮಾಲೀಕ ಎಂ.ಆರ್. ರಾಜರಾಂ ತಿಳಿಸಿದರು.

ಕಾಳಸಂತೆಯಲ್ಲಿ 800ಕ್ಕೂ ಅಧಿಕ ಮಂದಿಗೆ ಪೂರೈಕೆ ಮಾಡಿರುವ ಶಂಕೆ

ನಕಲಿ ರೆಮ್‌ಡಿಸಿವಿರ್ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ವಶಪಡಿಸಿಕೊಂಡ ನಕಲಿ ರೆಮ್‌ಡಿಸಿವಿರ್‌ನ ಬಾಟಲಿ ಹಾಗೂ ₹ 2.82 ಲಕ್ಷ ನಗದನ್ನು ಪ್ರದರ್ಶಿಸಿದ ಮೈಸೂರು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ

ಮೈಸೂರು: ರೆಮ್‌ಡಿಸಿವಿರ್ ಹೆಸರಿನಲ್ಲಿ ಬೇರೆ ಔಷಧಿಯನ್ನು ಮಾರಾಟ ಮಾಡುತ್ತಿದ್ದ ಜಾಲವೊಂದನ್ನು ಮೈಸೂರು ನಗರ ಅಪರಾಧ ಪತ್ತೆ ವಿಭಾಗದ ಪೊಲೀಸರು ಬೇಧಿಸಿದ್ದು, ಪ್ರಮುಖ ಆರೋಪಿ ಗಿರೀಶ್ (34) ಎಂಬಾತನನ್ನು ಬಂಧಿಸಿದ್ದಾರೆ.

ಈತನಿಂದ 32 ಬಾಟಲಿಯಷ್ಟು ನಕಲಿ ರೆಮ್‌ಡಿಸಿವಿರ್ ಹಾಗೂ ₹ 2.82 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ಈತ 800ಕ್ಕೂ ಅಧಿಕ ಬಾಟಲಿಗಳನ್ನು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮಾರಾಟ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಪ್ರಕರಣದ ಆರೋಪಿಗಳಾದ ಶಿವಪ್ಪ, ಮಂಗಳಾ, ಪ್ರಶಾಂತ್ ಮತ್ತು ಮಂಜುನಾಥ್ ಎಂಬುವವರನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಲಾಗುತ್ತಿದೆ.

'ಕೋವಿಡ್ ರೋಗಿಗಳಿಗೆ ನೀಡಲಾಗುವ ರೆಮ್‌ಡಿಸಿವಿರ್‌ಗೆ ಹೆಚ್ಚಿನ ಬೇಡಿಕೆ ಇದ್ದು, ಇದು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಕುರಿತು ತನಿಖೆ ನಡೆಸಲು ವಿಶೇಷ ತಂಡವನ್ನು ರಚಿಸಲಾಗಿತ್ತು. ಈ ವೇಳೆ ರೆಮ್‌ಡಿಸಿವಿರ್‌ನ ಖಾಲಿ ಬಾಟಲಿಗಳಿಗೆ ಬೇರೆ ಔಷಧ ತುಂಬಿ ಮಾರಾಟ ಮಾಡುತ್ತಿರುವ ಆಘಾತಕಾರಿ ಅಂಶ ಗೊತ್ತಾಯಿತು' ಎಂದು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'11 ವರ್ಷಗಳಿಂದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸ್ಟಾಫ್ ನರ್ಸ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಗಿರೀಶ್, ವಿದ್ಯಾನಗರದ ತನ್ನ ನಿವಾಸದಲ್ಲಿ ಖಾಲಿಯಾದ ರೆಮ್‌ಡಿಸಿವಿರ್‌ನ ಬಾಟಲಿಗಳಿಗೆ ನಕಲಿ ಔಷಧ ತುಂಬಿಸುತ್ತಿದ್ದ. ನಗರದ ಪ್ರಮುಖ ಆಸ್ಪತ್ರೆಯೊಂದರ ಭದ್ರತಾ ಸಿಬ್ಬಂದಿ ಶಿವಪ್ಪ ಹಾಗೂ ಮತ್ತೊಂದು ಆಸ್ಪತ್ರೆಯಲ್ಲಿ (ಕೋವಿಡ್ ಕೇರ್ ಸೆಂಟರ್) ಸ್ವಚ್ಛತಾ ಸಿಬ್ಬಂದಿಯಾಗಿ ಕೆಲಸ ಮಾಡುವ ಮಂಗಳಾ, ಬಳಸಿ ಎಸೆದ ರೆಮ್‌ಡಿಸಿವಿರ್‌ನ ಬಾಟಲಿಗಳನ್ನು ಈತನಿಗೆ ಪೂರೈಸುತ್ತಿದ್ದರು. ಈ ಬಾಟಲಿಗಳಿಗೆ ಬೇರೆ ಔಷಧ ತುಂಬಿಸುತ್ತಿದ್ದ ಗಿರೀಶ್, ನಂತರ ಅವುಗಳನ್ನು ವಿವಿಧ ಔಷಧ ಕಂಪನಿಗಳ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದ ಪ್ರಶಾಂತ್ ಮತ್ತು ಮಂಜುನಾಥ್ ಅವರಿಗೆ ನೀಡಿ, ಬೇಡಿಕೆ ಇದ್ದ ಕಡೆಗೆ ಪೂರೈಕೆ ಮಾಡುತ್ತಿದ್ದ' ಎಂದು ಮಾಹಿತಿ ನೀಡಿದರು.

ಪುಡಿ ರೂಪದ ರೆಮ್‌ಡಿಸಿವಿರ್ ಬಾಟಲಿಗೆ ಸೆಫ್ಟ್ರಿಆ್ಯಕ್ಸನ್ ಎಂಬ ಆ್ಯಂಟಿ ಬಯಾಟಿಕ್ ಮತ್ತು ದ್ರವ ರೂಪದ ರೆಮ್‌ಡಿಸಿವಿರ್‌ಗೆ ನಾರ್ಮಲ್ ಸಲೈನ್‌ನ್ನು ತುಂಬಿಸುತ್ತಿದ್ದ. ಇದಕ್ಕಾಗಿ ಆತನಿಗೆ ಕನಿಷ್ಠ ₹ 100 ವೆಚ್ಚ ತಗುಲುತ್ತಿತ್ತು. ಇದನ್ನು ಈತ ಬೇಡಿಕೆ ಇದ್ದ ಕಡೆ ಕಾಳಸಂತೆಯಲ್ಲಿ ₹ 4 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ. ಇಲ್ಲಿಯವರೆಗೆ 800ಕ್ಕೂ ಅಧಿಕ ಬಾಟಲಿಗಳನ್ನು ಮಾರಾಟ ಮಾಡಿರುವ ಶಂಕೆ ಇದೆ ಎಂದು ಹೇಳಿದರು.

ಮೋಯಿನ್ ಅಲಿ ಆಲ್‌ರೌಂಡ್ ಆಟ, ಮಿಂಚಿದ ಸ್ಯಾಮ್ ಕರನ್; ಸಕಾರಿಯಗೆ 3 ವಿಕೆಟ್

ಸೂಪರ್ ಕಿಂಗ್ಸ್‌ಗೆ ಮಣಿದ ರಾಯಲ್ಸ್

ಮುಂಬೈ: ಬಲಿಷ್ಠ ಬ್ಯಾಟಿಂಗ್ ಬಳಗ ಹೊಂದಿರುವ ರಾಜಸ್ಥಾನ್ ರಾಯಲ್ಸ್ ತಂಡವನ್ನು ಸುಲಭವಾಗಿ ಕಟ್ಟಿಹಾಕಿದ ಚೆನ್ನೈ ಸೂಪರ್ ಕಿಂಗ್ಸ್, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ 45 ರನ್‌ಗಳಿಂದ ಗೆದ್ದ ಮಹೇಂದ್ರ ಸಿಂಗ್ ಧೋನಿ ಬಳಗ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಫಫ್ ಡು ಪ್ಲೆಸಿ, ಮೋಯಿನ್ ಅಲಿ, ಅಂಬಟಿ ರಾಯುಡು ಮತ್ತು ಡ್ವೇನ್ ಬ್ರಾವೊ ಅವರ ಉಪಯುಕ್ತ ಬ್ಯಾಟಿಂಗ್‌ನಿಂದಾಗಿ ಚೆನ್ನೈ 20 ಓವರ್‌ಗಳಲ್ಲಿ ಒಂಬತ್ತು ವಿಕೆಟ್ ಕಳೆದುಕೊಂಡು 188 ರನ್ ಗಳಿಸಿತು. ಗುರಿ ಬೆನ್ನತ್ತಿದ ಸಂಜು ಸ್ಯಾಮ್ಸನ್ ನೇತೃತ್ವದ ರಾಯಲ್ಸ್‌ಗೆ ಒಂಬತ್ತು ವಿಕೆಟ್ ಕಳೆದುಕೊಂಡು 143 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಆರಂಭಿಕ ಬ್ಯಾಟ್ಸ್‌ಮನ್ ಜೋಸ್ ಬಟ್ಲರ್ (49; 35 ಎಸೆತ, 5 ಬೌಂಡರಿ, 2 ಸಿಕ್ಸರ್) ಉತ್ತಮ ತಳಪಾಯ ಹಾಕಿ-ಕೊಟ್ಟಿದ್ದರು. ಆದರೆ ನಂತರ ಯಾರಿಗೂ ಮಿಂಚಲು ಆಗಲಿಲ್ಲ. ಕೆಳ ಕ್ರಮಾಂಕದ ರಾಹುಲ್ ತೆವಾಟಿಯಾ ಮತ್ತು ಜಯದೇವ ಉನದ್ಕತ್ ಗೆಲುವಿಗಾಗಿ ನಡೆಸಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ನಾಯಕ ಸಂಜು ಸ್ಯಾಮ್ಸನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಋತುರಾಜ್ ಗಾಯಕವಾಡ್ ಮತ್ತು ಫಫ್ ಡು ಪ್ಲೆಸಿ ಆರಂಭದಲ್ಲಿ ತಾಳ್ಮೆಯಿಂದ ಆಡಿದರು. ಎರಡನೇ ಓವರ್‌ನ ಕೊನೆಯ ಎಸೆತದಲ್ಲಿ ಚೇತನ್ ಸಕಾರಿಯ ಅವರನ್ನು ಸಿಕ್ಸರ್‌ಗೆ ಎತ್ತಿ ಪ್ಲೆಸಿ ಆಕ್ರಮಣ ಆರಂಭಿಸಿದರು. ಋತುರಾಜ್ ವಿಕೆಟ್ ಕಳೆದುಕೊಂಡ ನಂತರವೂ ಎದೆಗುಂದದ ಪ್ಲೆಸಿ ಮುಂದಿನ ಓವರ್‌ನ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದರು. ಆದರೆ ನಂತರದ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು.

ಮೋಯಿನ್ ಅಲಿ ಮೋಹಕ ಬ್ಯಾಟಿಂಗ್ ಮೂಲಕ ರನ್ ಹೆಚ್ಚಿಸಲು ಪ್ರಯತ್ನಿಸಿದರು. ಸುರೇಶ್ ರೈನಾ ಮತ್ತು ಅಂಬಟಿ ರಾಯುಡು 43 ರನ್‌ಗಳ ಜೊತೆಯಾಟ ಆಡಿ ಮೊತ್ತವನ್ನು ಮೂರಂಕಿ ದಾಟಿಸಿದರು. ಆದರೆ 14ನೇ ಓವರ್‌ನಲ್ಲಿ ಇವರಿಬ್ಬರನ್ನೂ ಚೇತನ್ ಸಕಾರಿಯ ವಾಪಸ್ ಕಳುಹಿಸಿದರು. ರಾಯುಡು ಮೂರು ಸಿಕ್ಸರ್ ಸಿಡಿಸಿ ಮಿಂಚಿದರು.

ಧೋನಿ-ಜಡೇಜ ಪರದಾಟ: ನಾಯಕ ಮಹೇಂದ್ರ ಸಿಂಗ್ ಧೋನಿ ಮತ್ತು ಎಡಗೈ ಬ್ಯಾಟ್ಸ್‌ಮನ್ ರವೀಂದ್ರ ಜಡೇಜ ಜೊತೆಗೂಡಿದಾಗ ಭರವಸೆ ಮೂಡಿತು. ಆದರೆ ಅವರಿಬ್ಬರು ರನ್ ಗಳಿಸಲು ಪರದಾಡಿದರು. ಧೋನಿ ಎರಡು ಬೌಂಡರಿಗಳೊಂದಿಗೆ 17 ಎಸೆತಗಳಲ್ಲಿ 18 ರನ್ ಗಳಿಸಿದರೆ, ಜಡೇಜ 7 ಎಸೆತಗಳಲ್ಲಿ 8 ರನ್ ಮಾತ್ರ ಗಳಿಸಿದರು.

ಡೇವಿಡ್ ಮಿಲ್ಲರ್ ವಿಕೆಟ್ ಗಳಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮೋಯಿನ್ ಅಲಿ (ಮಧ್ಯೆ) ಅವರನ್ನು ಸಹ ಆಟಗಾರರಾದ ಸುರೇಶ್ ರೈನಾ (ಎಡ) ಹಾಗೂ ಕೆ.ಗೌತಮ್ ಅಭಿನಂದಿಸಿದರು– ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 9ಕ್ಕೆ 188 (20 ಓವರ್‌ಗಳಲ್ಲಿ)	
ಋತುರಾಜ್ ಗಾಯಕವಾಡ್ ಸಿ ಶಿವಂ ದುಬೆ ಬಿ ಮುಸ್ತಫಿಜುರ್ ರಹಮಾನ್	10
ಫಫ್ ಡು ಪ್ಲೆಸಿ ಸಿ ರಿಯಾನ್ ಪರಾಗ್ ಬಿ ಕ್ರಿಸ್ ಮೊರಿಸ್	33
ಮೋಯಿನ್ ಅಲಿ ಸಿ ರಿಯಾನ್ ಪರಾಗ್ ಬಿ ರಾಹುಲ್ ತೆವಾಟಿಯಾ	26
ಸುರೇಶ್ ರೈನಾ ಸಿ ಕ್ರಿಸ್ ಮೊರಿಸ್ ಬಿ ಚೇತನ್ ಸಕಾರಿಯ	18
ಅಂಬಟಿ ರಾಯುಡು ಸಿ ರಿಯಾನ್ ಪರಾಗ್ ಬಿ ಚೇತನ್ ಸಕಾರಿಯ	27
ರವೀಂದ್ರ ಜಡೇಜ ಸಿ ಸಂಜು ಸ್ಯಾಮ್ಸನ್ ಬಿ ಕ್ರಿಸ್ ಮೊರಿಸ್	8
ಮಹೇಂದ್ರ ಸಿಂಗ್ ಧೋನಿ ಸಿ ಜೋಸ್ ಬಟ್ಲರ್ ಬಿ ಚೇತನ್ ಸಕಾರಿಯ	18
ಸ್ಯಾಮ್ ಕರನ್ ರನ್ ಔಟ್ (ಮುಸ್ತಫಿಜುರ್ ರಹಮಾನ್/ಸಂಜು ಸ್ಯಾಮ್ಸನ್)	13
ಡ್ವೇನ್ ಬ್ರಾವೊ ಔಟಾಗದೆ	20
ಶಾರ್ದೂಲ್ ಠಾಕೂರ್ ರನ್ ಔಟ್ (ಸ್ಯಾಮ್ಸನ್/ಮುಸ್ತಫಿಜುರ್ ರಹಮಾನ್)	1
ದೀಪಕ್ ಚಾಹರ್ ಔಟಾಗದೆ	0
ಇತರೆ (ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 8)	14

ವಿಕೆಟ್ ಪತನ: 1-25 (ಋತುರಾಜ್, 3.5), 2-45 (ಡು ಪ್ಲೆಸಿ, 5.4), 3-78 (ಮೋಯಿನ್, 9.2), 4-123 (ರಾಯುಡು, 13.2), 5-125 (ರೈನಾ, 13.5), 6-147 (ಧೋನಿ, 17.2), 7-163 (ಜಡೇಜ, 18.3), 8-174 (ಸ್ಯಾಮ್ ಕರನ್, 19.1), 9-180 (ಶಾರ್ದೂಲ್, 19.4)

ಬೌಲಿಂಗ್: ಜಯದೇವ ಉನದ್ಕತ್ 4–0–40–0, ಚೇತನ್ ಸಕಾರಿಯಾ 4–0–36–3, ಮುಸ್ತಫಿಜುರ್ ರಹಮಾನ್ 4–0–37–1, ಕ್ರಿಸ್ ಮೊರಿಸ್ 4–0–33–2, ರಾಹುಲ್ ತೆವಾಟಿಯಾ 3–0–21–1, ರಿಯಾನ್ ಪರಾಗ್ 1–0–16–0

ರಾಜಸ್ಥಾನ್ ರಾಯಲ್ಸ್ 9ಕ್ಕೆ 143 (20 ಓವರ್‌ಗಳಲ್ಲಿ)	
ಜೋಸ್ ಬಟ್ಲರ್ ಬಿ ರವೀಂದ್ರ ಜಡೇಜ	49
ಮನನ್ ವೊಹ್ರಾ ಸಿ ರವೀಂದ್ರ ಜಡೇಜ ಬಿ ಸ್ಯಾಮ್ ಕರನ್	14
ಸಂಜು ಸ್ಯಾಮ್ಸನ್ ಸಿ ಡ್ವೇನ್ ಬ್ರಾವೊ ಬಿ ಸ್ಯಾಮ್ ಕರನ್	1
ಶಿವಂ ದುಬೆ ಎಲ್‌ಬಿಡಬ್ಲ್ಯು ಬಿ ರವೀಂದ್ರ ಜಡೇಜ	17
ಡೇವಿಡ್ ಮಿಲ್ಲರ್ ಎಲ್‌ಬಿಡಬ್ಲ್ಯು ಬಿ ಮೋಯಿನ್ ಅಲಿ	2
ರಿಯಾನ್ ಪರಾಗ್ ಸಿ ರವೀಂದ್ರ ಜಡೇಜ ಬಿ ಮೋಯಿನ್ ಅಲಿ	3
ರಾಹುಲ್ ತೆವಾಟಿಯಾ ಸಿ ಋತುರಾಜ್ ಗಾಯಕವಾಡ್ ಬಿ ಡ್ವೇನ್ ಬ್ರಾವೊ	20
ಕ್ರಿಸ್ ಮೊರಿಸ್ ಸಿ ರವೀಂದ್ರ ಜಡೇಜ ಬಿ ಮೋಯಿನ್ ಅಲಿ	0
ಜಯದೇವ್ ಉನದ್ಕತ್ ಸಿ ರವೀಂದ್ರ ಜಡೇಜ ಬಿ ಶಾರ್ದೂಲ್ ಠಾಕೂರ್	24
ಚೇತನ್ ಸಕಾರಿಯಾ ಔಟಾಗದೆ	0
ಮುಸ್ತಫಿಜುರ್ ರಹಮಾನ್ ಔಟಾಗದೆ	0
ಇತರೆ (ಬೈ 1, ಲೆಗ್ ಬೈ 3, ನೋಬಾಲ್ 1, ವೈಡ್ 8)	13

ವಿಕೆಟ್ ಪತನ: 1–30 (ವೊಹ್ರಾ, 3.5), 2–45 (ಸ್ಯಾಮ್ಸನ್, 5.5), 3–87 (ಬಟ್ಲರ್, 11.1), 4–90 (ಶಿವಂ ದುಬೆ, 11.6), 5–92 (ಮಿಲ್ಲರ್, 12.5), 6–95 (ಪರಾಗ್, 14.1), 7–95 (ಮೊರಿಸ್, 14.3), 8–137 (ತೆವಾಟಿಯಾ, 18.6), 9–143 (ಉನದ್ಕತ್, 19.2)

ಬೌಲಿಂಗ್: ದೀಪಕ್ ಚಾಹರ್ 3–0–32–0, ಸ್ಯಾಮ್ ಕರನ್ 4–0–24–2, ಶಾರ್ದೂಲ್ ಠಾಕೂರ್ 3–0–20–1, ರವೀಂದ್ರ ಜಡೇಜ 4–0–28–2, ಡ್ವೇನ್ ಬ್ರಾವೊ 3–0–28–1, ಮೋಯಿನ್ ಅಲಿ 3–0–7–3

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 45 ರನ್‌ಗಳ ಗೆಲುವು

ಪಂದ್ಯ ಶ್ರೇಷ್ಠ: ಮೋಯಿನ್ ಅಲಿ

ಮುಂಬೈಗೆ ಹ್ಯಾಟ್ರಿಕ್ ಕನಸು; ಡೆಲ್ಲಿ ನಿರಾಳ

ಚೆನ್ನೈ (ಪಿಟಿಐ): ಕಡಿಮೆ ಮೊತ್ತ ಗಳಿಸಿದರೂ ತಂತ್ರಗಾರಿಕೆಯಿಂದ ಎದುರಾಳಿಗಳನ್ನು ಕಟ್ಟಿಹಾಕಿ ಸತತ ಎರಡು ಜಯ ಸಾಧಿಸಿರುವ ಮುಂಬೈ ಇಂಡಿಯನ್ಸ್ ಮತ್ತು ಬಲಿಷ್ಠ ತಂಡಗಳನ್ನು ಮಣಿಸಿ ಭರವಸೆಯಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಮುಖಾಮುಖಿಯಾಗಲಿವೆ.

ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ಹಿಂದಿನ ಮೂರು ಪಂದ್ಯಗಳಲ್ಲೂ ಮುಂಬೈಗೆ ನಿರೀಕ್ಷಿತ ಮೊತ್ತ ಗಳಿಸಲು ಆಗಲಿಲ್ಲ. ಮೊದಲ ಪಂದ್ಯದಲ್ಲಿ ಸೋತಿದ್ದ ತಂಡ ನಂತರದ ಎರಡು ಪಂದ್ಯಗಳಲ್ಲಿ ಎದುರಾಳಿಗಳನ್ನು ಬೌಲಿಂಗ್‌ನಲ್ಲಿ ನಿಯಂತ್ರಿಸಿತ್ತು. ಡೆಲ್ಲಿ ಎರಡನೇ ಪಂದ್ಯದಲ್ಲಿ ಸೋತಿದ್ದರೂ ಮೊದಲ ಮತ್ತು ಮೂರನೇ ಪಂದ್ಯದಲ್ಲಿ ಕ್ರಮವಾಗಿ ಏಳು ಮತ್ತು ಆರು ವಿಕೆಟ್‌ಗಳಿಂದ ಜಯ ಗಳಿಸಿತ್ತು. ಕೊನೆಯ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮುಂದಿಟ್ಟ ಬೃಹತ್ ಮೊತ್ತವನ್ನು ಸುಲಭವಾಗಿ ಬೆನ್ನತ್ತಿ ಗೆಲುವು ಸಾಧಿಸಿತ್ತು.

ಶಿಖರ್ ಧವನ್

ಆರಂಭಿಕ ಜೋಡಿ ಕ್ವಿಂಟನ್ ಡಿ ಕಾಕ್ ಮತ್ತು ನಾಯಕ ರೋಹಿತ್ ಶರ್ಮಾ ಮುಂಬೈ ತಂಡದ ಪರ ಮಿಂಚುತ್ತಿದ್ದಾರೆ. ಜಸ್‌ಪ್ರೀತ್ ಬೂಮ್ರಾ ನೇತೃತ್ವದ ಬೌಲಿಂಗ್ ಪಡೆ ಎಂಥ ಬ್ಯಾಟ್ಸ್‌ಮನ್‌ಗಳನ್ನು ಕೂಡ ಕಂಗೆಡಿಸಬಲ್ಲ ಸಾಮರ್ಥ್ಯ ಹೊಂದಿದೆ.

ಶಿಖರ್ ಧವನ್ ಮೇಲೆ ನಿರೀಕ್ಷೆ: ಎಡಗೈ ಬ್ಯಾಟ್ಸ್‌ಮನ್ ಶಿಖರ್ ಧವನ್ ಫಾರ್ಮ್‌ಗೆ ಮರಳಿರುವುದು ಡೆಲ್ಲಿ ಪಾಳಯದ ಸಂಭ್ರಮಕ್ಕೆ ಕಾರಣವಾಗಿದೆ. ಪಂಜಾಬ್ ಕಿಂಗ್ಸ್ ಎದುರಿನ ಭರ್ಜರಿ ಜಯಕ್ಕೆ ಕಾರಣರಾದ ಅವರು ಒಟ್ಟಾರೆ 186 ರನ್ ಕಲೆ ಹಾಕಿದ್ದಾರೆ. ಧವನ್ ಮತ್ತು ಪೃಥ್ವಿ ಶಾ ಅವರ ಜೋಡಿ ಉತ್ತಮ ಆರಂಭ ಒದಗಿಸುತ್ತಿದೆ.

ಕಳೆದ ಬಾರಿಯ ಯಶಸ್ಸಿನ ಸೂತ್ರಕ್ಕೆ ಮೊರೆಹೋದೆ: ಮಯಂಕ್

ಮುಂಬೈ (ಪಿಟಿಐ): ಮೊದಲ ಎರಡು ಪಂದ್ಯಗಳಲ್ಲಿ ನೀರಸ ಬ್ಯಾಟಿಂಗ್ ಪ್ರದರ್ಶಿಸಿದ್ದರೂ ಮೂರನೇ ಪಂದ್ಯದಲ್ಲಿ ಪುಟಿದೆದ್ದು ಮೋಹಕ ಅರ್ಧಶತಕ ಗಳಿಸಿದ ಮಯಂಕ್ ಅಗರವಾಲ್ ಕಳೆದ ಆವೃತ್ತಿಯಲ್ಲಿ ತೋರಿದ ಸಾಮರ್ಥ್ಯದ ಬೆಂಬಲ ತಮಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಯಂಕ್

ಭಾನುವಾರ ಇಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಮಯಂಕ್ ಮತ್ತು ನಾಯಕ ಕೆ.ಎಲ್. ರಾಹುಲ್ ಅವರ ಅಮೋಘ ಜೊತೆಯಾಟದ ನೆರವಿನಿಂದ ಪಂಜಾಬ್ ಕಿಂಗ್ಸ್ ಉತ್ತಮ ಮೊತ್ತ ಕಲೆ ಹಾಕಿತ್ತು. ಇವರಿಬ್ಬರು ಮೊದಲ ವಿಕೆಟ್‌ಗೆ 76 ಎಸೆತಗಳಲ್ಲಿ 122 ರನ್ ಕಲೆ ಹಾಕಿದ್ದರು. ಮಯಂಕ್ 36 ಎಸೆತಗಳಲ್ಲಿ 69 ರನ್ ಗಳಿಸಿದ್ದರು.

ಪಂದ್ಯದ ನಂತರ ಮಾತನಾಡಿದ ಬೆಂಗಳೂರಿನ ಆಟಗಾರ ‘ಹಿಂದಿನ ಎರಡು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲಾಗದ್ದಕ್ಕೆ ಬೇಸರಿಸಿಕೊಳ್ಳಲಿಲ್ಲ. ಮೂರನೇ ಪಂದ್ಯದಲ್ಲಿ ನಿರಾತಂಕವಾಗಿ ಕಣಕ್ಕೆ ಇಳಿದಿದ್ದೆ. ಯುಎಇಯಲ್ಲಿ ನಡೆದ ಕಳೆದ ಆವೃತ್ತಿಯಲ್ಲಿ ಉತ್ತಮ ಆಟವಾಡಿದ್ದರಿಂದ ಭರವಸೆಯಲ್ಲಿದ್ದೆ’ ಎಂದು ಹೇಳಿದರು.

ಇಶ್ರತ್ ಜಹಾನ್ ಪ್ರಕರಣ ಮುಕ್ತಾಯ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಪ್ತದಳ (ಐಬಿ) ವಿಭಾಗದ ಇಬ್ಬರು ಅಧಿಕಾರಿಗಳ ವಿರುದ್ಧದ ಪ್ರಕರಣ ಕೈಬಿಡುವುದರೊಂದಿಗೆ ವಿಚಾರಣೆ ಇಲ್ಲದೆಯೇ 2004ರಲ್ಲಿ ನಡೆದಿದ್ದ ಇಶ್ರತ್ ಜಹಾನ್ ಎನ್‌ಕೌಂಟರ್‌ಗೆ ಸಂಬಂಧಿಸಿದ ಪ್ರಕರಣವನ್ನು ಮೆಟ್ರೊಪಾಲಿಟನ್ ಕೋರ್ಟ್ ಮುಕ್ತಾಯಗೊಳಿಸಿದೆ.

ಗುಪ್ತದಳದ ಮಾಜಿ ವಿಶೇಷ ನಿರ್ದೇಶಕ ರಾಜಿಂದರ್ ಕುಮಾರ್ ಸೇರಿದಂತೆ ಇಬ್ಬರು ಅಧಿಕಾರಿಗಳು ತಮಗೆ ನೀಡಲಾಗಿದ್ದ ಸಮನ್ಸ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಇದಕ್ಕೂ ಮೊದಲು ಕೋರ್ಟ್ ಮಾನ್ಯ ಮಾಡಿತು. ಅವರ ವಿರುದ್ಧ ದಾಖಲಿಸಿದ್ದ ಆರೋಪಪಟ್ಟಿ ಅನುಸಾರ ಇಬ್ಬರ ವಿರುದ್ಧವೂ ಸಮನ್ಸ್ ಜಾರಿಗೊಂಡಿತ್ತು.

ತಮ್ಮ ಕೇಡರ್‌ನ ಅಧಿಕಾರಿಗಳು ನಿಯಂತ್ರಣಕ್ಕೆ ಒಳಪಡುವ ಕೇಂದ್ರ ಗೃಹ ಸಚಿವಾಲಯವು ತಮ್ಮನ್ನು ಶಿಕ್ಷಿಸಲು ಸಿಬಿಐಗೆ ಅನುಮತಿ ನಿರಾಕರಿಸಿದೆ. ಹೀಗಾಗಿ, ತಮ್ಮ ವಿರುದ್ಧ ಸಮನ್ಸ್ ಜಾರಿಗೊಳಿಸಿರುವುದು ಕಾನೂನುಬಾಹಿರ ಎಂದು ಈ ಇಬ್ಬರು ಅಧಿಕಾರಿಗಳು ಅರ್ಜಿಯನ್ನು ಸಲ್ಲಿಸಿದ್ದರು.

‘ಕೋರ್ಟ್ ಇಬ್ಬರೂ ಆರೋಪಿ ಅಧಿಕಾರಿಗಳ ಅರ್ಜಿಯನ್ನು ಪುರಸ್ಕರಿಸಿತು ಹಾಗೂ ಈ ಪ್ರಕರಣದ ವಿಚಾರಣೆಯನ್ನು ಮುಕ್ತಾಯಗೊಳಿಸಿತು’ ಎಂದು ಸಿಬಿಐನ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆರ್. ಸಿ.ಕೊಡೆಕರ್ ಅವರು ತಿಳಿಸಿದರು.

ಈ ಮೂಲಕ ಆರೋಪಿಗಳಾಗಿದ್ದ ಎಲ್ಲ ಏಳು ಮಂದಿ ಗುಜರಾತ್‌ನ ಪೊಲೀಸರು (ಒಬ್ಬರು ಮೃತಪಟ್ಟಿದ್ದಾರೆ), ಇಬ್ಬರು ಗುಪ್ತದಳದ ಅಧಿಕಾರಿಗಳನ್ನು ಪ್ರಕರಣದಿಂದ ಕೈಬಿಟ್ಟಂತಾಗಿದೆ.

ಏಳುಮಂದಿ ಪೊಲೀಸರಲ್ಲಿ ಮಾಜಿ ಡಿಜಿಪಿ ಪಿ.ಪಿ.ಪಾಂಡೆ ಅವರನ್ನು ಪ್ರಕರಣದಿಂದ ಕೈಬಿಡಲಾಗಿತ್ತು. ಮಾಜಿ ಐಪಿಎಸ್ ಅಧಿಕಾರಿ ಡಿ.ಜಿ.ವನ್‌ಜರ, ಮಾಜಿ ಎಸ್‌ಪಿ ಎನ್.ಕೆ.ಅಮಿನ್, ಐಜಿಪಿ ಜಿ.ಎಲ್.ಸಿಂಘಲ್, ಮಾಜಿ ಡಿವೈಎಸ್‌ಪಿ ತರುಣ್ ಬಾರೋಟ್, ಎಸ್‌ಆರ್‌ಪಿ ಕಮ್ಯಾಂಡೊ ಅನಜು ಚೌಧರಿ ಅವರ ವಿಚಾರಣೆಗೆ ಸರ್ಕಾರದ ಅನುಮತಿ ನಿರಾಕರಿಸಿದ್ದ ಕೈಬಿಡಲಾಗಿತ್ತು. ಇನ್ನೊಬ್ಬ ಆರೋಪಿ ಜೆ.ಜಿ.ಪರ್ಮರ್ ಕಳೆದ ವರ್ಷ ಮೃತಪಟ್ಟಿದ್ದರು. ‘ಎಲ್ಲ ಆದೇಶಗಳನ್ನು ತಾನು ಒಪ್ಪಲಿದ್ದು, ಪ್ರಶ್ನಿಸುವುದಿಲ್ಲ’ ಎಂದು ಸಿಬಿಐ ಕೋರ್ಟ್‌ಗೆ ಲಿಖಿತವಾಗಿ ತಿಳಿಸಿತು.

ಗುಜರಾತ್ ಹೈಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಸಿಬಿಐ ತನಿಖೆ ನಡೆದಿತ್ತು. 19 ವರ್ಷದ ಇಶ್ರತ್ ಜಹಾನ್, ಆಕೆಯ ಸ್ನೇಹಿತ ಪ್ರಾಣೇಶ್ ಪಿಳ್ಳೈ ಅಲಿಯಾಸ್ ಜಾವೇದ್ ಶೇಖ್ ಮತ್ತು ಪಾಕಿಸ್ತಾನದ ಪ್ರಜೆಗಳು ಎನ್ನಲಾದ ಅಮ್ಜದಾಲಿ ರಾಣಿ, ಜೀಶನ್ ಜೋಹರ್ ಅವರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿತ್ತು. ರಾಜಿಂದರ್ ಕುಮಾರ್ ಈ ಎನ್‌ಕೌಂಟರ್ ನೇತೃತ್ವ ವಹಿಸಿದ್ದರು. ಪ್ರಕರಣ ಕೈಬಿಡುವ ತೀರ್ಮಾನ ಕೈಗೊಂಡಿದ್ದ ಸೆಷನ್ಸ್ ಕೋರ್ಟ್, ‘ಅವರು ಉಗ್ರರಲ್ಲ ಎಂದು ನಿರೂಪಿಸಲು ಅಗತ್ಯ ಸಾಕ್ಷ್ಯಗಳಿಲ್ಲ. ನಕಲಿ ಎನ್‌ಕೌಂಟರ್ ಪ್ರಶ್ನೆ ಮೂಡುವುದಿಲ್ಲ’ ಎಂದಿತ್ತು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿರ್ದೇಶಕಿ ಸುಮಿತ್ರಾ ಭಾವೆ ನಿಧನ

ಮುಂಬೈ: ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮರಾಠಿ ಚಿತ್ರ ನಿರ್ದೇಶಕಿ ಸುಮಿತ್ರಾ ಭಾವೆ (78) ಸೋಮವಾರ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಪುಣೆಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಸುಮಿತ್ರಾ ಭಾವೆ ಅವರು ಸಾಮಾಜಿಕ ಚಳವಳಿಯಲ್ಲಿಯೂ ಸಕ್ರಿಯರಾಗಿದ್ದವರು. 1984ರಲ್ಲಿ ‘ಬಾಯಿ’ ಚಿತ್ರ ನಿರ್ದೇಶನದ ಮೂಲಕ ಅವರ ಕಲಾತ್ಮಕ ಪಯಣ ಆರಂಭವಾಗಿತ್ತು. ಮರಾಠಿ ಚಿತ್ರರಂಗದಲ್ಲಿ ಹೊಸ ಅಲೆಯನ್ನು ಹುಟ್ಟುಹಾಕಿದವರಲ್ಲಿ ಸುಮಿತ್ರಾ ಮತ್ತು ಸುನಿಲ್ ಸುಖ್ತಂಕರ್ ಪ್ರಮುಖರು. ಈ ಜೋಡಿಯ ‘ಕಾಸವ್’ ಸಿನಿಮಾಗೆ 2016ರಲ್ಲಿ ಸ್ವರ್ಣಕಮಲ ಪ್ರಶಸ್ತಿ ಬಂದಿತ್ತು. ಸಂಹಿತಾ, ಅಸ್ತು, ಏಕ್ ಕಪ್ ಚಾ, ಬಂಧಾ ಅವರು ನಿರ್ದೇಶಿಸಿದ ಕೆಲವು ಸಿನಿಮಾಗಳು.

ಸುಮಿತ್ರಾ ಭಾವೆ

ಸುಮಿತ್ರಾ ಭಾವೆ ಅವರು ಇಳಿವಯಸ್ಸಿನಲ್ಲಿಯೂ ನಿರ್ದೇಶನದಲ್ಲಿ ತೊಡಗಿಕೊಂಡಿದ್ದರು. ರಾಷ್ಟ್ರಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ಸಂದಿವೆ.

ಸಂಕ್ಷಿಪ್ತ ಸುದ್ದಿ

ಬ್ಯಾಡ್ಮಿಂಟನ್: ಇಂಡಿಯಾ ಓಪನ್ ಟೂರ್ನಿ ಮುಂದಕ್ಕೆ

ನವದೆಹಲಿ (ಪಿಟಿಐ): ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂಡಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯನ್ನು ಮುಂದೂಡಲಾಗಿದೆ. ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಕೊನೆಯ ಮೂರು ಟೂರ್ನಿಗಳಲ್ಲಿ ಇದೂ ಒಂದಾಗಿದೆ.

ಟೂರ್ನಿಯು ನವದೆಹಲಿಯಲ್ಲಿ ಮೇ 11ರಿಂದ 16ರವರೆಗೆ ನಡೆಯಬೇಕಿತ್ತು.

ಲೋಕುಹೆಟ್ಟಿಗೆಗೆ 8 ವರ್ಷ ನಿಷೇಧ

ಕೊಲಂಬೊ (ಎಎಫ್‌ಪಿ): ಭ್ರಷ್ಟಾಚಾರ ಆರೋಪದ ಮೇಲೆ ಶ್ರೀಲಂಕಾದ ಮಾಜಿ ವೇಗದ ಬೌಲರ್ ದಿಲ್ಹಾರ ಲೋಕುಹೆಟ್ಟಿಗೆ ಮೇಲೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಎಂಟು ವರ್ಷಗಳ ನಿಷೇಧ ಹೇರಿದೆ.

ಲೋಕುಹೆಟ್ಟಿಗೆ ಒಂಬತ್ತು ಅಂತರರಾಷ್ಟ್ರೀಯ ಏಕದಿನ ಮತ್ತು ಎರಡು ಟಿ20 ಪಂದ್ಯಗಳನ್ನು ಆಡಿದ್ದು ಎರಡು ವರ್ಷಗಳ ವಿಚಾರಣೆಯ ನಂತರ ಅವರ ಮೇಲೆ ಐಸಿಸಿ ಮೂರು ದೋಷಾರೋಪಗಳನ್ನು ಹೊರಿಸಿದೆ. ತನಿಖೆಗೆ ಸಹಕಾರ ನೀಡದ ಕಾರಣ ಶಿಕ್ಷೆಯನ್ನು ಹೆಚ್ಚು ಕಠಿಣಗೊಳಿಸಲಾಗಿದೆ ಎಂದು ತಿಳಿಸಿದೆ. ಅವರ ಮೇಲಿನ ನಿಷೇಧ 2019ರಿಂದ ಪೂರ್ವಾನ್ವಯವಾಗಲಿದೆ. ಶಾರ್ಜಾದಲ್ಲಿ ನಡೆದಿದ್ದ ಟಿ10 ಟೂರ್ನಿಯೊಂದರಲ್ಲಿ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿದ್ದ ಆರೋಪ ಲೋಕುಹೆಟ್ಟಿಗೆ ಮೇಲಿತ್ತು.

ಸೌತ್ ಇಂಡಿಯಾ ರ್‍ಯಾಲಿ ಮುಂದೂಡಿಕೆ

ಚೆನ್ನೈ (ಪಿಟಿಐ): ಇದೇ 23ರಿಂದ ಇಲ್ಲಿ ನಡೆಯಬೇಕಿದ್ದ ಸೌತ್ ಇಂಡಿಯಾ ಮೋಟರ್ ಸ್ಪೋರ್ಟ್ಸ್ ರ್‍ಯಾಲಿಯನ್ನು ಕೋವಿಡ್ ಕಾರಣ ಜೂನ್ 25ಕ್ಕೆ ಮುಂದೂಡಲಾಗಿದೆ ಎಂದು ರ್‍ಯಾಲಿಯ ಆಯೋಜನಾ ಸಂಸ್ಥೆ ಮದ್ರಾಸ್ ಮೋಟರ್ ಸ್ಪೋರ್ಟ್ಸ್ ಕ್ಲಬ್ ತಿಳಿಸಿದೆ.

ಆಸ್ಪತ್ರೆಯಿಂದ ಮರಳಿದ ಮುರಳೀಧರನ್

ಚೆನ್ನೈ (ಪಿಟಿಐ): ಹೃದಯದಲ್ಲಿ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆ್ಯಂಜಿಯೊಪ್ಲಾಸ್ಟಿಗೆ ಒಳಗಾಗಿದ್ದ ಶ್ರೀಲಂಕಾದ ಸ್ಪಿನ್ ದಿಗ್ಗಜ ಮುತ್ತಯ್ಯ ಮುರಳೀಧರನ್, ಸೋಮವಾರ ಆಸ್ಪತ್ರೆಯಿಂದ ಮರಳಿದರು.

ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬೌಲಿಂಗ್ ಕೋಚ್ ಆಗಿರುವ ಮುರಳೀಧರನ್ ಅವರಿಗೆ ಸ್ಟಂಟ್ ಅಳವಡಿಸಲಾಗಿತ್ತು.

ಬಾಕ್ಸಿಂಗ್: ಸೆಮಿಫೈನಲ್‌ಗೆ ವಿಂಕಾ, ಅಲ್ಫಿಯಾ

ನವದೆಹಲಿ (ಪಿಟಿಐ): ಏಷ್ಯನ್ ಚಾಂಪಿಯನ್ ವಿಂಕಾ ಹಾಗೂ ಅಲ್ಫಿಯಾ ಪಠಾಣ್ ಸೇರಿದಂತೆ ಭಾರತದ ನಾಲ್ವರು ಮಹಿಳಾ ಬಾಕ್ಸರ್‌ಗಳು ಪೋಲೆಂಡ್‌ನ ಕಿಯಲ್ಸೆಯಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದಾರೆ.

ಗೀತಿಕಾ ಹಾಗೂ ಪೂನಮ್ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟ ಇನ್ನಿಬ್ಬರು ಬಾಕ್ಸರ್‌ಗಳು. ಪಾಣಿಪತ್‌ನ ಬಾಕ್ಸರ್ ವಿಂಕಾ 60 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 5–0ಯಿಂದ ಕೊಲಂಬಿಯಾದ ಕ್ಯಾಮಿಲೊ ಕ್ಯಾಮೆಲಾ ಅವರನ್ನು ಪರಾಭವಗೊಳಿಸಿದರೆ, 81+ ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅಲ್ಫಿಯಾ ಇಷ್ಟೇ ಅಂತರದಿಂದ ಹಂಗರಿಯ ರೇಕಾ ಹೊಫ್‌ಮನ್ ಎದುರು ಗೆದ್ದರು.